ಅಕ್ವಿಜೇಶನ್ ಮಾಡುತ್ತೇವೆಂದು ಇದರಲ್ಲಿ ಬರೆದಿದ್ದಾರೆ. ಅದಕ್ಕೆ ಮಿನಿಸ್ಟರ್ ಬಹಳ ತಡ ಮಾಡಿದರೆಂದು ಹೇಳಿದರು. ಮಿನಿಸ್ಟರ್ ಮೊದಲಿನಿಂದಲೂ ತಡಮಾಡಿದ್ದೇನೋ ನಿಜ. ಏತಕ್ಕೆ ತಡ ಮಾಡಿದರು ಎನ್ನುವುದನ್ನು ತಾವು ಫೈಲ್ ನೋಡಿದರೆ ಗೊತ್ತಾಗುತ್ತದೆ. ನಾನು ಬಂದ ಮೇಲೆ ಕ್ವಿಕ್ ಆಕ್ಷನ್ ತೆಗೆದುಕೊಂಡಿದ್ದೇನೆ.

ನನ್ನ ಎದುರು ಯಾವತ್ತೂ ಫೈಲ್ ಬಂತೋ ಅವತ್ತೇ ನಾನು ಆಕ್ಷನ್ ತೆಗೆದುಕೊಂಡಿದ್ದೇನೆ. ಆಮೇಲೆ ಇದರಲ್ಲಿ

"As required under the land acquistion Act, the societies were asked to remit huge funds out of the collections made from the responsible members"

ನನ್ನಲ್ಲಿ ಈಗ ಫೈಲ್ ಇಲ್ಲ. ನನಗೆ ನೆನಪು ಇದ್ದಂತೆ ಹೇಳುವುದಾದರೆ, ವೈಯಾಲಿಕಾವಲ್ ಹೌಸಿಂಗ್ ಸೊಸೈಟಿಯವರದ್ದು 42 ಕೋಟಿ ರೂಪಾಯಿಗಳು ಕೂಡಿಸಿದ್ದಾರೆ. ಅದರಲ್ಲಿ 22 ಕೋಟಿ ರೂಪಾಯಿಗಳು ಆಡಿಟ್ ವರದಿ ಮೇಲೆ ಮತ್ತು ನನ್ನ ಮನಸ್ಸಿಗೆ ಸಮಾಧಾನವಾಗಿರುವ ಹಾಗೆ ಮಿಸ್ ಅಪ್ರೊಪ್ರಿಯೇಶನ್ ಆಗಿದೆ. ಇದನ್ನು ನಾನು ತಕ್ಷಣ ಸೂಪರ್‌ಸೀಡ್ ಮಾಡಿದ್ದೇನೆ. ಇದಕ್ಕಿಂತ ಹೆಚ್ಚು ಏನನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಯಾವುದೇ ರೀತಿಯಲ್ಲಿ ಇದರಲ್ಲಿ ಡೀಲೆ ಮಾಡಿದ್ದಾರೆ ಈ ಸದನದ ಯಾವುದೇ ಕಮಿಟಿಯನ್ನು ನೇಮಿಸಿ ನನ್ನ ಮೇಲೆ ಆಕ್ಷನ್ ತೆಗೆದುಕೊಳ್ಳಬಹುದು.

ಶ್ರೀ ಆರ್. ಎಲ್. ಜಾಲಪ್ಪ: ಅವರು ಅದನ್ನು ರೆಫರ್ ಮಾಡಿ ನಿಮ್ಮ ಮೇಲೆ ಕೆಲವು ಚಾರ್ಜಸ್ ಮಾಡಿದ್ದರು. we know, everybody in this house. about you.

ಅಂತಹ ಒಂದು ಕಮ್ಯಾಂಡಿಂಗ್ ಪೊಜಿಶನ್‌ನಲ್ಲಿ ಆ ಸಂಸ್ಥೆಗಳು ಇವೆಯೆಂದು ಅವರು ಹೇಳಿದ್ದಾರೆ, ಅಷ್ಟೇ ವಿನಃ not to making any allegations against you.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗೈರುಹಾಜರಿಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಅದನ್ನು ಒಂದೇ ಒಂದು ವಾಕ್ಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಏನು ಪತ್ರವನ್ನು ಬರೆದಿದ್ದರು ಆ ಪತ್ರವನ್ನು ತಾವು ನೋಡಿದ್ದೀರಿ. ಪೇಜ್ 2ರ ಕೊನೆಯ ಒಂದು ವಾಕ್ಯವನ್ನು ತಾವು ಓದಬೇಕು.

" The Association is in know of malafidy intentions behind these severe punishment meted out to few housing co-operative societies in order to exploit them for personal benefits but we would not like to elaborate much on this mystery for the time being and shall expose it at an appropriate time."

ಈ ವಾಕ್ಯ ಏನು ಬರೆದಿದ್ದಾರೆ ಅದನ್ನು ನಾನು ಈ ಸದನದ ಗಮನಕ್ಕೆ ತಂದಿದ್ದೇನೆ, ಮತ್ತು ತಮ್ಮ ಗಮನಕ್ಕೂ ತರುತ್ತಿದ್ದೇನೆ. ಈ ಮಾತನ್ನು ಹೇಳುವಂತಹ ದಾರ್ಷ್ಟ್ಯ ಅವರಿಗೆ ಇದೆ ಎನ್ನುವ ಮಾತನ್ನು ನಾನು ಪ್ರಾಸ್ತಾಪಿಕವಾಗಿ ಮಾತನಾಡುತ್ತಾ ರೆಫರ್ ಮಾಡಿದ್ದೇನೆ.

ಮುಖ್ಯಮಂತ್ರಿಗಳಿಂದ ಉತ್ತರ

+ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಮಾನ್ಯ ಸದಸ್ಯರು ನನ್ನ ಮುಖಂಡತ್ವದಲ್ಲಿರತಕ್ಕಂಥ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ಈ ಸದನದಲ್ಲಿ ಮಂಡನೆ ಮಾಡಿ ಸದನದ ಒಪ್ಪಿಗೆಗಾಗಿ ತಮ್ಮದೇ ಆಗಿರತಕ್ಕಂಥ

ವಿಚಾರಧಾರೆಯ ಹಿನ್ನಲೆಯಲ್ಲಿ ತಮ್ಮ ತಮ್ಮ ಕಾರಣಗಳನ್ನಿಟ್ಟು ಪ್ರತಿಪಾದನೆ ಮಾಡಿ ಈ ಸದನದ ಮಾನ್ಯ ಸದಸ್ಯರುಗಳ ಒಪ್ಪಿಗೆಯನ್ನು ಪಡೆಯತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ, ಅವಿಶ್ವಾಸ ನಿರ್ಣಯ ಮಂಡನೆ ಆಗಿರತಕ್ಕಂಥಾದ್ದು ಅಥವಾ ಮಂಡನೆ ಆಗತಕ್ಕಂಥ ವಿಧಾನ ಏನಿದೆ, ನಾನು ಟೆಕ್ನಿಕಲ್ ಆಗಿ ಮಾತನಾಡುತ್ತಿಲ್ಲ, ಇದು ಪ್ರಜಾಪ್ರಭುತ್ವದಲ್ಲಿ ಒಂದು ಅಪರೂಪದ ಅಸ್ತ್ರ.

Even in parliament or in house of commons including our own house here. ಬಹಳ ಅಪರೂಪವಾದ ಈ ಅಸ್ತ್ರವನ್ನು ಪ್ರಯೋಗ ಮಾಡತಕ್ಕಂಥ ವಿಧಾನವನ್ನು ನಾವು ಕಂಡು ಕೊಂಡು ಬಂದಿದ್ದೇವೆ. ಅದು ಹಿಂದಿನ ಚರಿತ್ರೆಯನ್ನು ನೋಡಿದಾಗ ನಮಗೆ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ ನಿಜ, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ, ಪಕ್ಷಗಳ ಆಧಾರದ ಮೇಲೆ ಚುನಾವಣೆಗಳು ನಡೆದು, ಬಹುಮತದ ಆಧಾರದ ಮೇಲೆ ಒಂದು ಪಕ್ಷ ಅಥವಾ ಕೆಲವು ಪಕ್ಷಗಳು ಸೇರಿ ಸರ್ಕಾರವನ್ನು ರಚನೆ ಮಾಡತಕ್ಕಂಥಾದ್ದನ್ನು ನಾವು ಕಂಡಿದ್ದೇವೆ ಮತ್ತು ಆ ವಿಧಾನವನ್ನು ನಾವು ಅಳವಡಿಸಿ ಕೊಂಡಿದ್ದೇವೆ. ಇಲ್ಲಿರತಕ್ಕಂಥ ಪ್ರಶ್ನೆ ಏನೆಂದರೆ numerical numbers ಅಥವಾ ಸಂಖ್ಯಾ ಬಲದಿಂದ ನಾವು ಒಂದು ನಿರ್ಣಯವನ್ನು ಪಾಸ್ ಮಾಡಬಹುದು ಅಥವಾ ಪಾಸ್ ಮಾಡದೇ ಇರಬಹುದು. ಅದನ್ನು ಒಂದು ಕಡೆ ಪ್ರತ್ಯೇಕವಾಗಿ ಇಡೋಣ. ಒಂದು ವಿಷಯ ಮಂಡನೆಯಾದ ಕೂಡಲೇ ಆ ವಿಷಯವನ್ನು ಚರ್ಚೆಗೊಳಪಡಿಸಿದಾಗ ಈ ಸದನದಲ್ಲಿ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಯಾವುದೇ ಪಕ್ಷಕ್ಕೆ ಸೇರಿರಬಹುದು, ಕೊನೇ ಪಕ್ಷ ಆ ಮಾನ್ಯ ಸದಸ್ಯರ ಒಂದು ಒಳ ಮನಸ್ಸು ಒಂದು ಇದ್ದೇ ಇರುತ್ತದೆಂದು ನಾನು ಭಾವಿಸಿದ್ದೇನೆ, ಆ ಮನಸ್ಸಿನ ಒಪ್ಪಿಗೆಯನ್ನಾದರೂ ಕೂಡ ವಿದ್ಯುಕ್ತವಾಗಿ ಪಡೆಯತಕ್ಕಂಥ ವಿಚಾರಧಾರೆಯನ್ನಿಟ್ಟು ಇಲ್ಲಿರತಕ್ಕಂಥ ಮಾನ್ಯ ಸದಸ್ಯರ ಮನವನ್ನು ಗೆಲ್ಲತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನ, ಬರೀ ಪ್ರಯತ್ನ ನಡೆದರೆ ಸಾಲದು. ಅದು ಪ್ರಾಮಾಣಿಕವಾಗಿರಬೇಕು. ಆ ಪ್ರಾಮಾಣಿಕ ಪ್ರಯತ್ನ ಅದಕ್ಕೆ ಪೂರಕವಾಗಿ ಬರತಕ್ಕಂಥ ಸಾಕ್ಷ್ಯಾಧಾರಗಳು ನಿಜ. ನಾನು ಒಂದು ವಿಚಾರವನ್ನು ಒಪ್ಪುತ್ತೇನೆ. ಎಲ್ಲವನ್ನೂ ಕೂಡ ದಾಖಲೆಗಳಿನ್ನಿಟ್ಟು ಹೇಳುವುದಕ್ಕಾಗುವುದಿಲ್ಲ.

ನಾವೂ ಕೂಡ ವಿರೋಧ ಪಕ್ಷದ ಸಾಲಿನಲ್ಲಿ ಕುಳಿತು ಕೆಲಸ ಮಾಡಿರತಕ್ಕಂಥವರು. ಕೆಲವೊಮ್ಮೆ ಪುರಾವೆಗಳನ್ನು ಒದಗಿಸತಕ್ಕಂಥ ಸಂದರ್ಭದಲ್ಲಿ, ನಾನು ಇಂಡಿಯನ್ ಎವಿಡೆನ್ಸ್ ಆಕ್ಟನ್ನು ಪ್ರಸ್ತಾಪ ಮಾಡುತ್ತಿಲ್ಲ. ಕಾನೂನು ಪಂಡಿತರ ಚೌಕಟ್ಟಿನಲ್ಲಿ ನನ್ನ ವಿಚಾರಧಾರೆಯನ್ನು ಒಳಪಡಿಸುತ್ತಿಲ್ಲ. ನಾನು ಇಡತಕ್ಕಂಥ ವಿಚಾರಧಾರೆ ಏನೆಂದರೆ, ಕೊನೇ ಪಕ್ಷ ನಮ್ಮ ಕರ್ನಾಟಕ ರಾಜ್ಯದ ಆಡಳಿತಾಂಗಕ್ಕೆ ಸಂಬಂಧಪಟ್ಟಿರತಕ್ಕ ವಿಚಾರವನ್ನು ಮಂಡನೆ ಮಾಡಿದಾಗ ಅದಕ್ಕೆ ಪೂರಕವಾಗಿ ಇದು ಸರಿ ಎನ್ನತಕ್ಕಂಥ ಅನಿಸಿಕೆ ನಮ್ಮ ಮನಸ್ಸಿನಲ್ಲಿ ನೈಜವಾಗಿ ಉದ್ಭವವಾದರೆ, ಅದು ಈ ಸದನದ ಹೊರಗಡೆ ಇರತಕ್ಕಂಥ ಜನ ಮನವನ್ನು ಗೆಲ್ಲತಕ್ಕಂಥ ಸಂಪೂರ್ಣ ವಿಚಾರಧಾರೆಯಾಗಿ ಮಾರ್ಪಾಡಾಗುತ್ತದೆ.

10.45 ಎ.ಎಂ

ಅದಕ್ಕೆ ಅನುಗುಣವಾಗಿ ಇರತಕ್ಕ ವಿಚಾರಧಾರೆಗಳು, ಆಧಾರಗಳು ಅಥವಾ ಮಾತಿನ ಒಕ್ಕಣೆಗಳ ಮುಖಾಂತರ ವಿಚಾರವನ್ನು ಪ್ರತಿಪಾದನೆ ಮಾಡತಕ್ಕಂಥ ವಿಧಿ ವಿಧಾನಗಳು, ಅದು ಪ್ರಜಾಪ್ರಭುತ್ವದ ಚೌಕಟ್ಟಿಗೆ ಅನುಗುಣವಾಗಿ ಬಂದಿದ್ದರೆ ಇವತ್ತಲ್ಲ ನಾಳೆ ಅದು ಬೆಂಬಲವನ್ನು ಪಡದೇ ಪಡೆಯುತ್ತದೆ. ಇಲ್ಲ ಅಂದರೆ, ಅದು ಜನಮನದಿಂದ ದೂರವಾಗಿ ನಿಲ್ಲುತ್ತದೆ ಎನ್ನತಕ್ಕ ಮಾತನ್ನು ಅನಿವಾರ್ಯವಾಗಿ, ಪೂರ್ವ ಪೀಠಿಕೆಯಾಗಿ ನಾನು ಇಡಲೇಬೇಕಾಗುತ್ತದೆ. ಈ ಒಂದು ಅಸ್ತ್ರ ಪ್ರಯೋಗದ ಬಗ್ಗೆ ಹೆಚ್ಚಿನ ವ್ಯಾಖ್ಯಾನಕ್ಕೆ ನಾನು ಹೋಗುತ್ತಿಲ್ಲ. ಅದರೆ ಸೂಕ್ಷ್ಮವಾಗಿ ಒಂದು ವಿಚಾರವನ್ನು ಈ

ಸಭೆಯ ಗಮನಕ್ಕೆ ತಂದರೆ ಒಳ್ಳೆಯದೆಂದು ಭಾವಿಸಿದ್ದೇನೆ. ಇವತ್ತು ಹೌಸ್ ಆಫ್ ಕಾಮನ್ಸ್‌ನಲ್ಲಿ ಇರುಬಹುದು, ಪಾರ್ಲಿಮೆಂಟಿನಲ್ಲಿ ಇರಬಹುದು ಅಥವಾ ಇಲ್ಲೇ ಇರಬಹುದು. ಇದು ಒಂದು ಅಪರೂಪವಾದ ಅಸ್ತ್ರ ಉಪಯೋಗಿಸತಕ್ಕುದ್ದನ್ನು ನಾವು ಕಾಣುತ್ತೇವೆ. ನಾವು ಈ ಸದನದಲ್ಲಿನ ವಿಚಾವರನ್ನು ಉದಾಹರಿಸಬೇಕು. ಏಕೆಂದರೆ, ಬೇರೆ ಬೇರೆ ಹೌಸ್ ಆಫ್ ಕಾಮನ್ಸ್ ಚರಿತ್ರೆ, ನಮ್ಮ ರಾಷ್ಟ್ರದ ಪಾರ್ಲಿಮೆಂಟಿನ ಚರಿತ್ರೆಯನ್ನು ಇಲ್ಲಿ ತೆಗೆದುಕೊಳ್ಳುತ್ತಾ ಹೋದರೆ ಕಾಲ ವ್ಯಯ ಆಗಬಹುದು ಎನ್ನುವ ದೃಷ್ಟಿಯಿಂದ ನಮ್ಮ ಸದನದ ಉದಾಹರಣೆಯನ್ನು ಕೊಡುತ್ತೇನೆ. ಕೊನೆಯ ಅವಿಶ್ವಾಸ ನಿರ್ಣಯ ಬಂದಿರತಕ್ಕದ್ದು ಯಾವಾಗ ಅಂದರೆ ನನಗೆ ನೆನಪು ಇರುವ ಹಾಗೆ, ಸಬ್ಜೆಕ್ಟ್ ಟು ವೆರಿಫಿಕೇಶನ್ ಅದು ನಿಜವೆಂದು ಅನಿಸುತ್ತದೆ. ಶ್ರೀಮಾನ್ ವೀರೇಂದ್ರ ಪಾಟೀಲರು ಮೊದಲು ಮುಖ್ಯಮಂತ್ರಿಗಳಾಗಿದ್ದಾಗ, ಈ ಸಾರಿ ಅಲ್ಲ ; 1969-70ರ ಆ ಒಂದು ಹೊತ್ತಿನಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಆಗಿತ್ತು. ಅದರ ನಂತರ..

ಶ್ರೀ ಡಿ.ಬಿ. ಚಂದ್ರೇಗೌಡ: 1967ರಲ್ಲಿ ಆಗಿದ್ದು...

ಶ್ರೀ ಎಸ್. ಬಂಗಾರಪ್ಪ : 1967ರಲ್ಲಿ ನಿಜಲಿಂಗಪ್ಪನವರು ಇದ್ದರು. ಅದಕ್ಕೋಸ್ಕರವಾಗಿ ನಾನು ಹೇಳುವುದು, I think it is during 1969-70 something like that, ಆ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಆಯಿತು. ಆ ಸಂದರ್ಭದಲ್ಲಿ ನಾನು ಮೊಟ್ಟಮೊದಲಬಾರಿಗೆ ಈ ಸದನಕ್ಕೆ ಸದಸ್ಯನಾಗಿ ಚುನಾಯಿತನಾಗಿದ್ದೆ. ಮಾನ್ಯ ವಾಟಾಳ್ ನಾಗರಾಜ್ ಅವರೂ ಇದ್ದರು. ಆ ಕಾಲದಲ್ಲಿ ಶ್ರೀಮಾನ್ ಶಿವಪ್ಪನವರು, ಸಾಹುಕಾರ ಚೆನ್ನಯ್ಯನವರು, ಸಿದ್ದವೀರಪ್ಪನವರು, ಹೆಚ್.ಎಂ. ಚನ್ನಬಸಪ್ಪನವರು ನಾವೆಲ್ಲಾ ಅಲ್ಲಿ ಕುಳಿತುಕೊಂಡಿದ್ದೆವು. ಶ್ರೀಮಾನ್ ಎಸ್. ಗೋಪಾಲ ಗೌಡರಂತಹ ಅತಿರಥ ಮಹಾರಥರೂ ಕೂಡ ಆ ಸಂದರ್ಭದಲ್ಲಿದ್ದರು. ಸುಮ್ಮನೇ ನೆನಪು ಅದನ್ನು ಪ್ರಸ್ತಾಪ ಮಾಡಿದೆ. ಆ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ಮಂಡನೆ ಆಗಿದ್ದಂತ ಕಾಲದಲ್ಲಿ, ಒಂದು ಚುನಾವಣೆ ಆಗಿ, ಆ ಇಸವಿ ಯಾವುದು ಎಂದು ನನಗೆ ಕರಾರುವಾಕ್ಕಾಗಿ ಸಿಕ್ಕಿಲ್ಲ, ಯಾವಾಗ ಮಂಡನೆ ಆಯಿತು ಎನ್ನುವುದು ಸಿಕ್ಕಿಲ್ಲ. 1967, 68, 69 ಸುಮಾರು 70ರ ಹೊತ್ತಿಗೆ ಎಂದು ನನ್ನ ನೆನಪು. ನನಗೆ ಗೊತ್ತಿರುವ ಹಾಗೆ ಚುನಾವಣೆ ಆಗಿ ಮೂರು-ಮೂರುವರೆ ವರ್ಷಗಳು ಆದ ಮೇಲೆ ಅವಿಶ್ವಾಸ ನಿರ್ಣಯವನ್ನು ತಂದಿದ್ದರು. ಅಂದರೆ ಅದರ ಅರ್ಥ ಏನು ಎಂದು ತಾವು ಅನ್ನಬಹುದು. ಅಯ್ಯೋ ಆಡಳಿತವನ್ನು ಅರ್ಥೈಸುವುದಕ್ಕೆ ಮೂರು ವರ್ಷಗಳ ಕಾಲ ಬೇಕಾಗಿಲ್ಲ, ಒಂದೇ ವರ್ಷ ಸಾಕು ಎರಡು ವರ್ಷ ಸಾಕು ಎಂದು ಕೆಲವರ ಅಭಿಪ್ರಾಯವಾದರೆ ಆಡಳಿತವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಆರು ತಿಂಗಳು ಸಾಕು ಎಂಬ ಅಭಿಪ್ರಾಯ ನಾಳೆ ಎಲ್ಲಿ ಬರಬಹುದು. ಅದರೆ ನನ್ನ ಅಭಿಪ್ರಾಯದಲ್ಲಿ ಒಂದು ಆಡಳಿತವನ್ನು ನೋಡುವುದಕ್ಕೆ ಬಹಳ ಕಾಲ, ಸಿಕ್ಕಾಪಟ್ಟೆ ಕಾಲವನ್ನು ಕೊಡಬೇಕು ಎಂದು ಪ್ರತಿಪಾದನೆ ಮಾಡದೇ ಇದ್ದರೂ ಕೂಡ ಐದು ವರ್ಷಗಳ ಅವಧಿಯು ಏನು ಇರುತ್ತದೆ, ಆ ಅವಧಿಯಲ್ಲಿ ಕೊನೆಯಪಕ್ಷ ಅರ್ಧ ಕಾಲವಾದರೂ ಕಳೆದ ನಂತರ ಅವಿಶ್ವಾಸ ನಿರ್ಣಯಕ್ಕೆ ಹೋಗುವುದು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಕಡಿಮೆ ಅಂದರೆ ಇಷ್ಟು ಅವಧಿ. ನಮ್ಮ ಈ ಚುನಾವಣೆ 1989ರಲ್ಲಿ ಆಯಿತು. ಅದು ನಡೆದ ಮೇಲೆ 1990 ಆಯಿತು. 1991ರಲ್ಲಿ ಇನ್ನೂ ಕೂಡ ಅರ್ಧ ವರ್ಷ ಈಗತಾನೇ ಕಳೆಯುತ್ತಿದೇ. ಇನ್ನೂ ಸ್ವಲ್ಪ ಕಾಲ ತಡೆದು ಆಡಳಿತ ನೋಡಬೇಕು. ಏಕೆಂದರೆ ಹಲವಾರು ಕಾರ್ಯಕ್ರಮಗಳನ್ನು ರಾಜ್ಯಪಾಲರ ಭಾಷಣದ ಮುಖಾಂತರ ಪ್ರಸ್ತಾಪ ಮಾಡಿದ್ದೇವೆ. ಕೆಲವು ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇವೆ. ಕಾನೂನುಗಳನ್ನು ತಿದ್ದುಪಡಿ ಮುಖಾಂತರ ತರತಕ್ಕ ಕಾರ್ಯಕ್ರಮವನ್ನು ನಾವು ಈ ಒಂದು ಬಜೆಟ್ ಅಧಿವೇಶನದಲ್ಲಿ ಕೂಡ ಇಟ್ಟುಕೊಂಡಿದ್ದೇವೆ. ಅದನ್ನು ತರುವವರೆಗೆ ಕೆಲವನ್ನು

ಜಾರಿಕೊಡುವುದಕ್ಕೆ ಬರುವುದಿಲ್ಲ, ಮತ್ತೆ ಹಣಕಾಸನ್ನು ರೂಢಿಸಿಕೊಳ್ಳತಕ್ಕ ವಿಚಾರ ಇದೆ. ಆಡಳಿತದ ವಿಚಾರದಲ್ಲಿ ಸ್ವಲ್ಪ ತಡವಾಗಿದೆ ಎನ್ನುವ ಮಾತನ್ನು ನಾನೇ ಒಪ್ಪಿಕೊಳ್ಳುತ್ತೇನೆ. ಈ ಸದನದಲ್ಲಿ ಮಾತ್ರವೇ ಅಲ್ಲ, ಹೊರಗಡೆ ಕೂಡ ನಾನು ಈ ಮಾತನ್ನು ಆಡಿದ್ದೇನೆ. ಅದು ಇದ್ದಾಗ, ಕಾಲ, ಇದಕ್ಕೆ ಇನ್ನು ಒಂದು ವರ್ಷ ಹೋದ ನಂತರ ತಾವು ಏನಾದರೂ ಅವಿಶ್ವಾಸ ನಿರ್ಣಯ ಮಂಡನೆ ಮಾಡತಕ್ಕ ಪ್ರಯತ್ನ ಮಾಡಿದ್ದರೆ, ನಾವು ನಮ್ಮ ಆಡಳಿತದಲ್ಲಿ ಒಂದು ವೇಳೆ ಆ ಕಾಲಕ್ಕೆ ವಿಫಲರಾಗಿದ್ದರೆ ಅದರ ಹಿನ್ನೆಲೆಯಲ್ಲಿ ಉದ್ಭವವಾಗಿರತಕ್ಕ ಹಲವಾರು ವಿಚಾರಗಳನ್ನು ತಾವು ಗಮನದಲ್ಲಿಟ್ಟುಕೊಂಡು ಪ್ರತಿಪಾದನೆ ಮಾಡುವುದಕ್ಕೆ ಸಾಕಷ್ಟು ವಿಚಾರಗಳು, ಕಾಲಾವಕಾಶಗಳು ತಮಗೆ ಸಿಗುತ್ತಿತ್ತು ಎನ್ನತಕ್ಕ ಭಾವನೆಯನ್ನು ನಾನು ಸ್ಪಷ್ಟವಾಗಿ ಇಟ್ಟುಕೊಂಡಿದ್ದೇನೆ ಮತ್ತು ಈ ಸದನದ ಬಹು ಪಾಲು ಮಾನ್ಯ ಸದಸ್ಯರು ಇಟ್ಟುಕೊಂಡಿದ್ದಾರೆಂದು ನಾನು ಭಾವಿಸಿದ್ದೇನೆ.

ಚುನಾವಣೆಯ ಮೊದಲು ಕೆಲವು ದಿನಗಳು ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಕಾಲ ಬಿಟ್ಟುಬಿಟ್ಟರೆ ಉಳಿದಂತೆ ತಮ್ಮದ್ದೇ ಆಡಳಿತ ಇತ್ತು. ನಾವೇನೂ ಆಡಳಿತವನ್ನು ಇಲ್ಲಿ ನಡೆಸಿಲ್ಲ. 1983 ರಿಂದ 1989ರ ವರೆಗೂ ಹೆಚ್ಚು ಕಡಿಮೆ ತಮ್ಮ ಆಡಳಿತವೇ ಇತ್ತು. ಆದರೆ ಇವೊತ್ತು ಆಡಳಿತದಲ್ಲಿ ಸಂಪೂರ್ಣವಾಗಿ ನೀವೇ ತಪ್ಪು ಮಾಡಿದ್ದೀರಿ ಎಂದು ಹೇಳಿ, ನಿಮ್ಮ ತಲೆಯ ಮೇಲೆ ಗೂಬೆ ಕೂರಿಸಿ ನಾನು ಉಳಿದುಕೊಳ್ಳುವಂಥ ಒಂದು ಪ್ರಯತ್ನವನ್ನು ನಾನು ಮಾಡುವುದಿಲ್ಲ. It is not at all my intention. ಆ ಕೆಲಸವನ್ನು ನಾನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಅಸ್ತ್ರ ಪ್ರಯೋಗ ಮಾಡತಕ್ಕಂಥ ಕಾಲ ಯಾವಾಗ ಪಕ್ವ ಆಯಿತು ಎಂದು ಈ ಅಸ್ತ್ರವನ್ನು ಪ್ರಯೋಗ ಮಾಡತಕ್ಕಂಥ ವಿಚಾರದಲ್ಲಿ ತಾವು ಮತ್ತೊಂದು ಸಾರಿ ವಿಚಾರ ಮಾಡಿದ್ದರೆ ಈ ಕಾಲವು ಪಕ್ವವಾಗಿಲ್ಲ ಎಂಬ ಒಂದು ತೀರ್ಮಾನಕ್ಕೆ ತಾವು ಬರುವುದಕ್ಕೆ ಸಾಧ್ಯವಿತ್ತು. ತಾವು ಆ ಕೆಲಸವನ್ನು ಮಾಡಿಲ್ಲ ಆ ಮಟ್ಟಕ್ಕೆ ಹೋಗಿಲ್ಲ ಎಂದು ನಾನು ಭಾವಿಸುತ್ತೇನೆ. ಒಟ್ಟಿನಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಬೇಕು ಎಂದು ಅದನ್ನು ಮಾಡಿದ್ದೀರಿ. ಆದರೆ ಅದಕ್ಕೆ ಪೂರಕವಾಗಿ ಬಲವನ್ನು, ಶಕ್ತಿಯನ್ನು ತುಂಬತಕ್ಕಂಥ ಹಲವಾರು ವಿಚಾರಗಳನ್ನು ತಾವು ಗಮನಿಸ ಬೇಕಾಗಿತ್ತು ಎನ್ನುವುದೇ ನನ್ನ ಒಟ್ಟಾರೆ ಅಭಿಪ್ರಾಯ. ಹೀಗೆ ಗಮನವನ್ನು ಹರಿಸದೇ ಇರತಕ್ಕಂಥ ವಿಚಾರದ ಹಿನ್ನಲೆಯಲ್ಲಿ ತಂದಿರತಕ್ಕಂಥ ಈ ಒಂದು ಅವಿಶ್ವಾಸ ನಿರ್ಣಯ ಹಲವಾರು ಏರುಪೇರುಗಳಿಗೆ, ಉಬ್ಬುತಗ್ಗುಗಳಿಗೆ, ಅಪಾದಮಸ್ತಕವಾಗಿ, ಅಡಿಯಿಂದ ಮುಡಿಯವರೆಗೆ ಸೊರಗಿದೆ. ಅದು ಹಿಗ್ಗಿಗೆ ಒಳಗಾಗಿರುವ ಬದಲು ಕುಗ್ಗಿಗೆ ಒಳಗಾಗಿದೆ. ಈ ಮಾತನ್ನು ನಾನು ಪೂರ್ವಭಾವಿಯಾಗಿ ಪ್ರಸ್ತಾಪ ಮಾಡಿದ್ದೇನೆ. ಅದರೂ ಕೂಡ ವಿಷಯವನ್ನು ಗೌಣವಾಗಿ ನಾನು ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ಸದನದಲ್ಲಿ ಒಂದು ನಿರ್ಣಯ ಬಂದಮೇಲೆ, ಅದು ನಿರ್ಣಯ ನಿರ್ಣಯವೇ. ಅದಕ್ಕೆ ನಾವು ಪ್ರಾಮುಖ್ಯತೆಯನ್ನು ಕೊಡಬೇಕೆಂಬ ದೃಷ್ಟಿಯಿಂದ ನಾನು ಈ ಸಂದರ್ಭದಲ್ಲಿ ಸರಕಾರದ ಪರವಾಗಿ ಉತ್ತರಿಸತಕ್ಕಂಥ ಸಂದರ್ಭದಲ್ಲಿ ವಿಷಯವನ್ನು ನಾನು ಗೌಣವಾಗಿ ಕಾಣದೆ, ಅದಕ್ಕೆ ಪ್ರಾಮುಖ್ಯತೆ ಸಂಪೂರ್ಣವಾಗಿ ಹಾಗೂ ಸಾಂದರ್ಭಿಕವಾಗಿ ಕಾಲಕ್ಕೆ ಸರಿಯಾಗಿ ಇಲ್ಲದಿದ್ದರೆ ನಾನು ಅದಕ್ಕೆ ಬೆಲೆಯನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡಿ ಮುಂದಕ್ಕೆ ಹೋಗುತ್ತೇನೆ. ಇದರ ಬಗ್ಗೆ ನಡೆದ ಚರ್ಚೆಯಲ್ಲಿ ಹಲವಾರು ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ತಾವು ಈ ಅಸ್ತ್ರವನ್ನು ಪ್ರಯೋಗ ಮಾಡಬೇಕಾದರೆ, ಹೊಸ ಹೊಸ ವಿಚಾರಧಾರೆಗಳನ್ನು ಇಟ್ಟು ನೀವೇನಾದರೂ ಪ್ರಯೋಗ ಮಾಡಿದ್ದರೆ ಅದಕ್ಕೆ ಶಕ್ತಿ ತುಂಬಿ ಬರುತ್ತಾ ಇತ್ತು ಎಂದು ನನ್ನ ಭಾವನೆ. ಇದು ಹೆತ್ತ ಕೂಡಲೇ ಊನವಾಗಿದೆ. ನಡಿಗೆ ಸರಿಯಾಗಿ ಇಲ್ಲ. ಏಕೆಂದರೆ ತಾವು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಗಳು ಒಂದಲ್ಲ ಒಂದು ರೂಪದಲ್ಲಿ ಈಗಾಗಲೇ ಈ ಸದನದಲ್ಲಿ ಚರ್ಚೆಗೆ

ಬಂದಿರತಕ್ಕಂಥ ವಿಚಾರಗಳೇ ಆಗಿವೆ. ದಯಮಾಡಿ ತಾವುಗಳು ವಿಚಾರ ಮಾಡಬೇಕು. ನಾನು ಮುಖ್ಯಮಂತ್ರಿ ಆದ ಮೇಲೆ ಮತ್ತು ಅದಕ್ಕಿಂತ ಮೊದಲು ಮುಖ್ಯಮಂತ್ರಿಗಳಾಗಿದ್ದ ಮಾನ್ಯ ವೀರೇಂದ್ರ ಪಾಟೀಲ್‌ಜೀಯವರು ಇರತಕ್ಕಂಥ ಕಾಲದಲ್ಲಿಯೂ ಕೂಡ ಪ್ರಸ್ತಾಪ ಆಗಿರತಕ್ಕಂಥ ವಿಚಾರಗಳೇ ಆಗಿವೆ. ಆದುದರಿಂದ ನನಗೆ ಇದರಲ್ಲಿ ಹೊಸದಾಗಿ ಯಾವ ವಿಚಾರಗಳೂ ಕಂಡಿಲ್ಲ. ಬಹುಶಃ ಹೊಸದಾಗಿ ಅಂದರೆ ಅಬಕಾರಿ ಕುರಿತಾಗಿ ಒಂದು ವಿಚಾರ ಇರಬಹುದು. ಅಬಕಾರಿ ಅಕ್ಷನ್ ಮೊನ್ನೆ ತಾನೆ ಆಗಿದೆ. ಇದು ಹೊಸ ವಿಚಾರವಲ್ಲವೇ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದರೂ ಕೂಡ ಈ ವಿಚಾರವೂ ಮೊದಲು ಚರ್ಚೆಯಾಗಿದೆ. ಅಕ್ಷನ್ 2-3ನೇ ರೌಂಡ್ ಆಗಿರುವುದರಿಂದ ಇದೊಂದು ಹೊಸ ವಿಚಾರಧಾರೆ ಎಂಬ ವಾದವನ್ನು ತಾವು ಮಂಡನೆ ಮಾಡಬಹುದು. ಆ ವಾದಕ್ಕೆ ಉತ್ತರವನ್ನು ಕೊಡತಕ್ಕಂಥ ಪ್ರಯತ್ನವನ್ನು ನಾನು ಮಾಡುತ್ತೇನೆ. ಈ ಸಂದರ್ಭದಲ್ಲಿ ಪ್ರಸ್ತಾಪವಾಗಿರತಕ್ಕಂಥ ಗ್ರಾನೈಟ್ ವಿಚಾರವನ್ನು ತೆಗೆದುಕೊಂಡರೂ ಅದು ಈಗಾಗಲೇ ಪ್ರಸ್ತಾಪವಾಗಿರತಕ್ಕಂಥದ್ದು. ಟ್ರಾನ್ಸ್‌ಫರ್ ವಿಚಾರ ತೆಗೆದುಕೊಂಡರೂ ಅದೂ ಕೂಡ ಪ್ರಸ್ತಾಪವಾಗಿರತಕ್ಕಂಥಾದ್ದು, ಅದೇ ರೀತಿಯಲ್ಲಿ ಮುಖ್ಯ ಕಾರ್ಯದರ್ಶಿಯಾಗಿದ್ದ ಶಂಕರ್‌ನಾರಾಯಣ್‌ರವರ ಹೆಸರು ತೆಗೆದುಕೊಂಡು ಅದನ್ನು ಪ್ರಸ್ತಾಪ ಮಾಡಿದ್ದೀರಿ. ಅದೂ ಕೂಡ ಈಗಾಗಲೇ ಪ್ರಸ್ತಾಪವಾಗಿರತಕ್ಕಂಥಾದ್ದು. ಆಮೇಲೆ ಹೌಸಿಂಗ್ ಕೋ-ಅಪರೇಟಿವ್ ಸೊಸೈಟಿಗಳ ವಿಚಾರ ಕೂಡ ಈಗಾಗಲೇ ಪ್ರಸ್ತಾಪವಾಗಿರತಕ್ಕಂಥಾದ್ದು.

ಮೋಹನ್ ಮಿಕಿನ್ಸ್ ವಿಚಾರ ಪ್ರಸ್ತಾಪವಾಗಿದೆ, ಎಂ.ಎಸ್.ರಾಮಯ್ಯನವರ ವಿಷಯ ಪ್ರಸ್ತಾಪವಾಗಿದೆ. ಇದರಲ್ಲಿ ಒಂದೇ ಒಂದು ಹೊಸದು ಎಂದರೆ, ಪೋರ್ಟ್ ಪೋಲಿಯೊ ಚೇಂಜಾದದ್ದು. ಏಕೆಂದರೆ ಎಕ್ಸ್‌ಪ್ಯಾಶನ್‌ಶನ್ ಮೊನ್ನೆ ಆಗಿದ್ದರಿಂದ. ಇದರಲ್ಲಿ ಹೊಸ ವಿಚಾರಗಳಾವುದಾದರೂ ಇದೆಯೇ? ಆದ್ದರಿಂದಲೇ ನಾನು ಹೇಳಿದ್ದು, ಈ ಅವಿಶ್ವಾಸ ನಿರ್ಣಯವನ್ನು ತಾವು ಮಂಡನೆ ಮಾಡಿ, ಪ್ರತಿಪಾದನೆ ಮಾಡುವುದಕ್ಕೆ ಪಕ್ವವಾದ ಕಾಲವನ್ನು ತಾವು ಆರಿಸಲಿಲ್ಲ ಎನ್ನುವುದು ತಾವು ಪ್ರಸ್ತಾಪಿಸಿರುವ ವಿಷಯಗಳ ಮೇಲೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಇದು ನನ್ನ ಮೂಲ ವಿಚಾರ ಅಲ್‌ರೈಟ್, ತಾವು ಹೇಳಿಬಿಟ್ಟದ್ದೀರಿ, ಪ್ರಸ್ತಾಪ ಮಾಡಿದ್ದೀರಿ. ಹಿಂದೆ ಈ ಬಗ್ಗೆ ಪ್ರಸ್ತಾಪ ಮಾಡಿದಾಗ ನಾವು ಏನು ಉತ್ತರ ಕೊಟ್ಟಿದ್ದೆವೊ ಅದೇ ಉತ್ತರವನ್ನೂ ಈಗ ಕೊಡಬೇಕಾಗಿದೆ. ಅದು ಬಿಟ್ಟು ಬೇರೆ ನಮಗೆ ಕೂಡ ಕೊಡುವುದಕ್ಕೆ ಬರುವಹಾಗಿಲ್ಲ. ಹಳೆಯ ವಿಷಯ ಪ್ರಸ್ತಾಪಕ್ಕೆ ಹಳೆಯ ಉತ್ತರ ಅನಿವಾರ್ಯ. ಹಳೆಯ ವಿಚಾರಗಳಿಗೆ ಮತ್ತೊಂದು ಸಾರಿ ಹೊಸ ಹೊದಿಕೆ ಹೊದಿಸುವ ಪ್ರಯತ್ನ ಏನು ಮಾಡಿದಿರಿ ಅದಕ್ಕೆ ಹಳೆ ಉತ್ತರವನ್ನೇ ಕೊಡಬೇಕಾಗುತ್ತದೆಂಬ ಅಂಶವನ್ನು ಅಧ್ಯಕ್ಷರ ಮೂಲಕ ವಿನಂತಿಮಾಡುತ್ತೇನೆ. ಈ ಸದನ ಮುಗಿದನಂತರ ತಾವು ಇನ್ನೊಮ್ಮೆ ವಿಚಾರ ಮಾಡಿ. ಈ ವಿಚಾರವನ್ನು ಅಲ್ಲಿಗೇ ಬಿಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಇದರಲ್ಲಿ ಪ್ರಸ್ತಾಪವಾಗಿರುವ ಪ್ರಾಮುಖ್ಯವಾದ ವಿಷಯಗಳೆಂದರೆ ಬದಲಾಗಿರುವ ಮಂತ್ರಿಗಳ ಖಾತೆಗಳು, ಇದನ್ನು ವಿರೋಧ ಪಕ್ಷದ ನಾಯಕರು ಭಾಷಣದಲ್ಲಿ ಹೇಳಿದ್ದಾರೆ.

Frequent change of port-folios and ministers. It is a pilitical matter. 2) ministers of ill-reputation such as Shiva Kumar, political agent, 3) collective responsibility of cabinet-statement of Shri K.H. Patil. ಇತ್ಯಾದಿ ವಿಚಾರಗಳನ್ನು ತಾವೂ ಪ್ರಸ್ತಾಪ ಮಾಡಿದ್ದೀರಿ. ಮತ್ತೆ ಯಾವುದಾದರೂ ಬಿಟ್ಟು ಹೋಗಿದ್ದರೆ ಅದನ್ನು ಜ್ಞಾಪಿಸಿಕೊಟ್ಟರೆ ನಾನು ತಮಗೆ ಅಭಾರಿಯಾಗಿರುತ್ತೇನೆ. 4) Assurance given by Shri Veerendre Patilji disposal of heli-coptor, 5) de-moralised bureaucracy, 6)

political interference in administration with special reference to trensfers, 7) influences of liquor lobby. ಈ ವಿಚಾರಕ್ಕೆ ನಾನು ಬರುತ್ತೇನೆ. ಲಾಭಿ ಇದ್ದರೆ, ಅದು ಯಾರ ಕಾಲದಲ್ಲಿ, ಏನೇನಾಗಿದೆ ಎಂಬ ಅಂಕಿಅಂಶ ಸಹಿತ ಕೊಡುತ್ತೇನೆ. ಒಂದು ವೇಳೆ ಲಾಭಿ ಇದ್ದರೆ ಅದನ್ನು ಬೆಳೆಸಿದವರು ಯಾರು, ಯಾರ ಕಾಲದಲ್ಲಿ ಪ್ರಬಲವಾಯಿತು ಎಂಬ ಅಂಕಿಅಂಶ ಕೊಡುತ್ತೇನೆ. ಉಳಿದ ವಿಷಯ ಬೇಡ. 8) Issued of licences for quarrying granites, 9) House building co-operative socities 10) ULC exemption to M.S.Ramaiah instituion 11) Mohan Meakins land case, 12) expenditure incurred towards furnishing of ministers residences.

ನಾನು ಮೊದಲು ಹೇಳಿದ ಕೆಲವು ವಿಚಾರಗಳಿಗೆ ಕೊನೆಗೆ ಬರುತ್ತೇನೆ. ಮೊದಲು ಅಂಕಿಅಂಶ ಹೇಳುವ ವಿಚಾರದ ಕಡೆ ಸದನದ ಗಮನ ಸೆಳೆದು, ಅನಂತರ ಟ್ರಾನ್ಸ್‌ಫರ್ ಇತ್ಯಾದಿ ವಿಷಯಗಳಿಗೆ ಬರುತ್ತೇನೆ. ಪ್ರಾಮುಖ್ಯವಾದುದು ಎಕ್ಸೈಜ್ ವಿಚಾರ, ಹಿಂದೆ ನಾನು ಅದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಆದರೂ ಕೂಡ ಮತ್ತೆ ಪ್ರಸ್ತಾಪವಾಗಿರುವುದರಿಂದ except the latest point in respect of arrack auction including Bangalore Urban. ನಾನು ಯಾವುದನ್ನೂ ಮುಚ್ಚಿಟ್ಟು ಮಾತಾಡುವ ಅವಶ್ಯಕತೆ ಇಲ್ಲ. Urban, rural and of all districts of Karnataka state. ಅದನ್ನು ತೆಗೆದುಕೊಳ್ಳೋಣ. ಮಾನ್ಯ ವಿರೋಧಧ ಪಕ್ಷದ ನಾಯಕರು ಹಾಗೂ ಮಾನ್ಯ ಯಡಿಯೂರಪ್ಪನವರು ಪ್ರಾಮುಖ್ಯವಾಗಿ ಏನು ಪ್ರಸ್ತಾಪ ಮಾಡಿದ್ದಾರೆಂದರೆ ಕಳೆದ ವರ್ಷಕ್ಕೂ ಈ ವರ್ಷಕ್ಕೂ ಹೋಲಿಸಿದಾಗ ಎಷ್ಟೆಷ್ಟು ಲಾಸಾಗಿದೆ, ರೆಂಟಾಲ್ಸ್ ಲಾಸಾಗಿದೆ, ರೆಂಟಾಲ್ಸ್ ಎಲ್ಲಾ ಬಿದ್ದು ಹೋಗಿದೆ ಎಂದು ಹೇಳಿದ್ದಾರೆ. ಈಗ ನಾನು ಅಂಕಿಅಂಶಗಳಿಗೆ ಹೋಗುವುದಕ್ಕಿಂತ ಮೊದಲು ಒಂದು ಮಾತನ್ನು ಮತ್ತೊಂದು ಸಾರಿ ಹೇಳುತ್ತೇನೆ. ಹಿಂದೆ ಅದಕ್ಕೆಲ್ಲಾ ಉತ್ತರವನ್ನು ಕೊಟ್ಟಿದ್ದೇನೆ. ಅನಿವಾರ್ಯವಾಗಿ ಮತ್ತೊಮ್ಮೆ ನಾನು ಹೇಳತಕ್ಕಂಥ ಸಂದರ್ಭ ಒದಗಿ ಬಂದಿದೆ. ತಾವು ಹಿಂದೆ ಮಾತನಾಡತಕ್ಕಂಥ ಕಾಲದಲ್ಲಿ ಹೆಲ್ತಿ ಗ್ರೋಥ್ ಅನ್ನು ಒಪ್ಪಿಕೊಂಡಿದ್ದೀರಿ. ಏಕೆಂದರೆ ಅನ್-ಹೆಲ್ತಿ ಗ್ರೋಥ್ ಏನು ಇದೆಯಲ್ಲಾ, ಅದು ಎಂದೂ ಕೂಡ ಒಳ್ಳೆಯದಲ್ಲ ಅದು ಉಳಿಯುವುದಿಲ್ಲ. ಏಕೆಂದರೆ ಯಾವಾಗಲೂ ಕೂಡ ಸ್ಟಡಿ ಗ್ರೋಥ್ ಇರಬೇಕು. ಎಕ್ಸೈಜ್ ಇರಬಹುದು, ಮತ್ತೊಂದು ಇರಬಹುದು. ನಾವು ಯಾವಾಗಲೂ ಅದನ್ನು ಸ್ವಾಗತ ಮಾಡುತ್ತೇವೆ. ಇವತ್ತು ಈ ರೆಂಟಾಲ್ ವಿಚಾರದಲ್ಲಿ ತಮ್ಮ ಗಮನಕ್ಕೆ ತರುವ ಹಾಗಿದ್ದರೆ, rentals received for the year 1991-92 per month ನಾನು ಇಯರ್‌ಗೆ ಹೋಗುವುದಿಲ್ಲ, ಪರ್‌ಮಂತ್‌ನಿಂದ ತೆಗೆದುಕೊಳ್ಳುತ್ತೇನೆ. 29 ಕೋಟಿ 47 ಲಕ್ಷ ರೂಪಾಯಿಗಳು as against 30.70 crores for the year 1990-91 ಅಲ್ಲಿಗೆ 1. ಸಮ್‌ಥಿಂಗ್ ಮಾತ್ರ ಡಿಫರೆನ್ಸ್ ಬರುತ್ತದೆ. 30.71 crores for 1990-91. 1991-92 ಕ್ಕೆ 29.47 ಕೋಟಿ. ಇದು ಅವರೇಜ್ ವರ್ಕ್ ಆಗುತ್ತದೆ. ಅಲ್ಲಿ ಎಷ್ಟು ಡಿಫರೆನ್ಸ್ ಬರುತ್ತದೆ ಎಂದರೆ, 1.24 ಕೋಟಿ ರೂಪಾಯಿ ಮಾತ್ರ ಡಿಫರೆನ್ಸ್ ಬರುತ್ತದೆ. ನಾವು ಏನು ಮೊದಲು ಮಾಡಿದ್ದೇವೆ, ಇದನ್ನು ನಾನು ಹೇಳಿದ್ದೇನೆ, ಒಂದೊಂದು ಸಾರಿ 300 and odd percent it will jump. ಹೋದ ವರ್ಷ ನೋಡಿದರೆ ಆಗಿರತಕ್ಕಂಥದ್ದು ಒಂದೇ ಸಾರಿ ಜಂಪ್ ಆಗಿ ಹೋಗಿರತಕ್ಕಂಥದ್ದು. ಈ ಸಾರಿ ಅನೇಕ ಕಡೆಗಳಲ್ಲಿ ಬಿಡ್ಡರ್ಸ್ ಇಲ್ಲದೇ ಹಾಗೆಯೇ ಹೇಗೆ ಮಾಡುವುದು. ಈ ರೀತಿಯಾಗಿದೆ. I was in Delhi. ಅವತ್ತು ಸೆಕೆಂಡ್ ರೌಂಡ್ ಆಫ್ ಆಕ್ಷನ್ಸ್ ನಡೆದಾಗ ನಾನು ಅಲ್ಲಿಂದಲೇ ಡೈರೆಕ್ಷನ್‌ನ್ನು ಕೊಟ್ಟೆ. ಮಾನ್ಯ ಎಕ್ಸೈಜ್ ಸಚಿವರಿಗೂ ಕೂಡ ಕೊಟ್ಟಿದ್ದೇನೆ. ಎಕ್ಸೈಜ್ ಕಮೀಷನರ್‌ರವರಿಗೂ ಕೂಡಾ ಕೊಟ್ಟಿದ್ದೇನೆ. ಯಾವ ಯಾವ ಜಿಲ್ಲೆಗಳಿವೆ, ಅಯಾ ಜಿಲ್ಲೆಗಳಲ್ಲಿ ಎಲ್ಲೆಲ್ಲಿ

ನಮಗೆ ಕಡಿಮೆ ಎಂದು ಕಂಡು ಬರತಕ್ಕಂಥ ಭಾವನೆ ಇದೆ, ಅಲ್ಲಿ ಬಿಡ್ಡರ್ಸ್‌ನ್ನು ಕೂಡಾ ನೋಡಿಕೊಳ್ಳಬೇಕು. ಏಕೆಂದರೆ, ಎಷ್ಟು ದೊಡ್ಡ ಪ್ರಮಾಣದ ಜಿಲ್ಲೆ ಇರುತ್ತದೋ ಅದರ ಮೇಲೆ ಕೂಡ ಹೋಗುತ್ತದೆ. ಅದನ್ನು ನೋಡಿ ಥರ್ಡ್ ರೌಂಡ್ ಆಫ್ ಆಕ್ಷನನ್ನು ಇಡಿ ಎಂದು ಡೈರೆಕ್ಷನನ್ನು ನಾನು ಕೊಟ್ಟಿದ್ದೇನೆ. ಸುಮಾರಾಗಿ ಥರ್ಡ್ ರೌಂಡ್ ಆಕ್ಷನ್ ಮಾಡಿರತಕ್ಕಂಥದ್ದು ಅಪರೂಪ. ಅನೇಕ ವರ್ಷಗಳ ನಂತರ ನಾವು ಥರ್ಡ್ ರೌಂಡ್ ಆಕ್ಷನನ್ನು ಮಾಡುತ್ತಿದ್ದೇವೆ. ಇದು ಏನು ತೋರಿಸುತ್ತದೆ ಎಂದರೆ, ಇವತ್ತು ಮತ್ತೊಂದು ಸಾರಿ ಆಕ್ಷನನ್ನು ಮಾಡಿದರೆ ನಮಗೆ ಇನ್ನೂ ಸ್ವಲ್ಪ ಇನ್‌ಕಂ ಬರುತ್ತದೆ ಎನ್ನತಕ್ಕಂಥ ಆಸಕ್ತಿಯಿಂದ ಈ ರೀತಿ ಮಾಡಿರತಕ್ಕಂಥದ್ದು ಉಂಟು. ಇದು good intention. Hope you will try to catch it. ಇದನ್ನು ತಾವು ಅಂಡರ್‌ಸ್ಟಾಂಡ್ ಮಾಡಿಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಇಲ್ಲಿಗೆ ಬಂದಮೇಲೆ ಕೂಡಾ ರಾತ್ರೋರಾತ್ರಿ ಮೀಟಿಂಗ್‌ನ್ನು ಮಾಡಿದ್ದೇವೆ. ಕಳೆದ ವರ್ಷ ಟೋಟಲ್ ಅನ್-ಹೆಲ್ತಿ ಗ್ರೋಥ್ ಇರಬಹುದು. 1990-91 ರಲ್ಲಿ ಸಿಕ್ಕಾಪಟ್ಟೆ ಏರಿರಬಹುದು. ಇಷ್ಟಾದರೂ ಕೂಡ ನಾವು ಬಿಡುವುದಕ್ಕಾಗುವುದಿಲ್ಲ. ಇನ್ನೊಂದು ಸಾರಿ ಟ್ರೈಯಲ್ಸ್ ನೋಡೋಣ ಎಂದು ಥರ್ಡ್ ರೌಂಡ್ ಆಕ್ಷನ್ ಮಾಡಿದ ಮೇಲೆ ಕಳೆದ ವರ್ಷಕ್ಕೂ ಮತ್ತು ಈ ವರ್ಷಕ್ಕೂ ಹಾರ್ಡ್‌ಲಿ 14. some crores ಮಾತ್ರ ಡಿಫರೆನ್ಸ್ ಬಂತು. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಚಂದ್ರೇಗೌಡರ ಗಮನಕ್ಕೆ ತರುವ ಹಾಗಿದ್ದರೆ, ನಾವು ಇನ್ನೊಂದು ಸಾರಿ ಹರಾಜು ಮಾಡಿದ್ದರಿಂದ ಸುಮಾರು 25-28 ಕೋಟಿ ರೂಪಾಯಿ ಏನೋ ಜಾಸ್ತಿ ಬಂತು, ಥರ್ಡ್ ರೌಂಡ್‌ನಲ್ಲಿ ಹಾಗೆ ಬಂದಿದ್ದುದರಿಂದ ನಮಗೆ ಬರೀ ಡಿಫರೆನ್ಸ್ 14. some crores ಅಂದರೆ ಕಳೆದ ವರ್ಷಕ್ಕೂ ಈ ವರ್ಷಕ್ಕೂ ಎಷ್ಟು ಡಿಫರೆನ್ಸ್ ಎಂದರೆ ಹಾರ್ಡ್‌ಲಿ 4 ಪರ್‌ಸೆಂಟ್. ಏಕೆಂದರೆ ತಾವು ಭಾಷಣವನ್ನು ಮಾಡುವಾಗ ಭಾರಿ ವ್ಯತ್ಯಾಸ ಇದೆ ಎಂಬ ಮಾತನ್ನು ಹೇಳಿದ್ದೀರಿ. ಆ ರೀತಿ ಇಲ್ಲ. ನಾನು ಅಂಕಿ ಅಂಶಗಳ ಆಧಾರ ಸಹಿತ ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಆತ್ಮಸಾಕ್ಷಿಗೆ ಅನುಗುಣವಾಗಿ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ: ನಾನು ಅಂಕಿಅಂಶಗಳನ್ನೇ ಇಟ್ಟು ಮಾತನಾಡುತ್ತಿದ್ದೇನೆ. ಆತ್ಮಸಾಕ್ಷಿಯನ್ನು ಆಮೇಲೆ ತೆಗೆದುಕೊಳ್ಳೋಣ. ಆತ್ಮಸಾಕ್ಷಿ ಇಲ್ಲದಿದ್ದರೆ ಥರ್ಡ್ ರೌಂಡ್ ಆಕ್ಷನ್‌ನನ್ನು ಯಾರೂ ಇಡುವುದಕ್ಕೆ ಹೋಗುತ್ತಿರಲಿಲ್ಲ.

(ಗೊಂದಲ).

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಬೇಕು. ಬೈರೇಗೌಡರು, ಏಕಾಂತಯ್ಯನವರು ಕುಳಿತುಕೊಳ್ಳಬೇಕು. ದಯಾನಂದರಾವ್ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ. ಭೈರೇಗೌಡ: ಯಾರು ಆ ರೀತಿ ಮಾಡಿದ್ದಾರೆ. ಅವರನ್ನು ಗಾಳಕ್ಕೆ ಹಾಕಿರಿ.

(ಗೊಂದಲ)

ಅಧ್ಯಕ್ಷರು : ಮೂರು ದಿವಸ ಸುಧೀರ್ಘವಾಗಿ ಚರ್ಚೆಯಾದ ಮೇಲೆ ಈಗ ಅ ವಿಶ್ವಾಸ ಗೊತ್ತುವಳಿಗೆ ಉತ್ತರ ಕೊಡುತ್ತಿದ್ದಾರೆ. ನೀವು ಮಾತನಾಡುತ್ತಿರುವಂತಹ ಕಾಲದಲ್ಲಿ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶಿಸಿ ಮಾತನಾಡಿದ್ದನ್ನು ನಾನು ಕೇಳಿಲ್ಲ, ನೋಡಿಲ್ಲ, ಆದ್ದರಿಂದ ಅವರು ಭಾಷಣ ಮಾಡತಕ್ಕಂಥ ಕಾಲದಲ್ಲಿ ತಾವು ಮಧ್ಯೆ ಪ್ರವೇಶ ಮಾಡದೆ, ಅವರ ಭಾಷಣಕ್ಕೆ ಅವರ ವಿಚಾರ ಸರಣಿಗೆ ತಾವು ಅಡ್ಡಿ

ಬರತಕ್ಕಂಥದ್ದು ನ್ಯಾಯವಲ್ಲ. ಅದಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ. ಆ ಅಡ್ಡಿ ಈ ಕಡೆಯಿಂದ ಬರಲಿ, ಆ ಕಡೆಯಿಂದ ಬರಲಿ, ನಾನು ಅವಕಾಶವನ್ನು ಕೊಡುವುದಿಲ್ಲ. ಜೊತೆಗೆ ಈಗ ತಾನೇ ಪ್ರಾರಂಭ ಮಾಡುತ್ತಿದ್ದಾರೆ. ಅವರು ಪ್ರಾರಂಭ ಮಾಡಿ - ಒಂದು ವಿಚಾರವನ್ನು ಸಮರ್ಥನೆ ಮಾಡುತ್ತಿರುವ ಕಾಲದಲ್ಲಿ ಮಧ್ಯೆ ಅವರ ಪಾಟಿಸವಾಲಿಗೆ ಗುರಿಮಾಡುವುದು ಏನಿದೆ ನಾಳೆ ನೀವೇ ಇಲ್ಲಿ ಬಂದರೆ, ಆ ಪರಿಸ್ಥಿತಿಗೆ ನೀವೇ ಸಿಕ್ಕಿದರೆ ಹೇಗೆ ಎಂದು ಆ ವಿಚಾರವನ್ನು ನೀವು ಕೂಡ ಆಲೋಚನೆ ಮಾಡಬೇಕು. ದಯವಿಟ್ಟು ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಗಂಭೀರವಾಗಿ ಈ ಗೊತ್ತುವಳಿಯ ಬಗ್ಗೆ ಚರ್ಚೆ ನಡೆದಿದೆ. ಗಂಭೀರವಾಗಿ ಗೊತ್ತುವಳಿಯ ಬಗ್ಗೆ ಉತ್ತರ ನಡೆಯಬೇಕಾಗಿದೆ. ಅದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

Mr. SPEAKER: Nothing has gone on record expect what the chief minister has submitted to the house.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, To put the record straight, ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶ ಮಾಡಿಲ್ಲ, ಎಂದು ತಾವು ಪಾಸಿಟಿವ್ ಆಗಿ ಹೇಳಿದ್ದೀರಿ. It is better you check the report and put the record straight.

ಶ್ರೀ ವಾಟಾಳ್ ನಾಗರಾಜ್ : ನಾವು ಮಾಡಬೇಕೆಂದು ಉದ್ದೇಶವಲ್ಲ, ಅವರು ಅನೇಕ ಭಾರಿ ಮಾಡಿದ್ದಾರೆ.

Mr.SPEAKER : I stand corrected by the leader of opposition. Yes, on a couple of occasions the chief minister has intervened and I presumed that you yielded the floor to him, If the chief minister yields then I have absolutely no objection.

SRI S. BANGARAPPA : Sorry, there not yielded.

ಬಿ. ಎಸ್. ಯಡಿಯೂರಪ್ಪ: ಮಾನ್ಯ ಸಭಾನಾಯಕರು ಸ್ವಲ್ಪ ಸೌಜನ್ಯವನ್ನು ತೋರಿಸಬೇಕು. ನಾವು ಯಾವರೀತಿ ನಿಮಗೆ ಸಹಕಾರವನ್ನು ಕೊಡುತ್ತೇವೋ ತಾವು ಆ ರೀತಿ ಸೌಜನ್ಯ ತೋರಿಸಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡುತ್ತಿದ್ದೆ. ಮಾನ್ಯ ಸದಸ್ಯರು ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್ ಬಗ್ಗೆ ಕೇಳುತ್ತಿದ್ದಾರೆ, ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ. ಹೋದವರ್ಷ ತಮಗೆ ಗೊತ್ತಿರುವ ಹಾಗೆ, there was an unprecedented increase in the bids by about 218% which we have already discussed in the last session. ಕಳೆದ ಅಧಿವೇಶನದಲ್ಲಿ ಇದರ ಬಗ್ಗೆ ಮಾತನಾಡಿದ್ದೇನೆ. Increase in the rentals 20% ಎಂದು ಹೇಳಿದ್ದಾರೆ. ಅದು ಕೂಡ ಸರಿಯಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. Every year 20% increase is not correct. It is only 13%. There is a difference of about 7%.

Out of 20 districts, we got less in about 11 districts. ಆಕ್ಷನ್ ಆದಾಗ 11 ಡಿಸ್ಟ್ರಿಕ್ಟ್‌ಗಳಲ್ಲಿ ಪ್ಲಸ್ ಬಂತು. ಇನ್ನು ಉಳಿದಿರತಕ್ಕಂಥ ಡಿಸ್ಟ್ರಿಕ್ಟ್‌ಗಳಲ್ಲಿ ನಮಗೆ ಪ್ಲಸ್ ಬರಲಿಲ್ಲ, ಈ ಆಕ್ಷನನ್ನು ಮಾಡಬೇಕಾಗಿದ್ದರೆ, ಈ ವಿಚಾರದಲ್ಲಿ ಮಾತ್ರ ಬಹಳ ಕೇರ್‌ಫುಲ್ ಆಗಿರಬೇಕಾಗುತ್ತದೆ ಎನ್ನತಕ್ಕಂಥದ್ದನ್ನು ಮನವರಿಕೆ ಮಾಡಿಕೊಳ್ಳುವುದು ಬಹಳ ಒಳ್ಳೆಯದು. ಏಕೆಂದರೆ this is public auction. Pleace don't forget this. ಇವತ್ತು

ಸಪ್ಪೋಸ್ 10 ರೂಪಾಯಿಗೆ ಬಿಡ್ ಹೋದರೆ, ನಾಳೆ ಅದು ಹತ್ತು ರೂಪಾಯಿಗಿಂತ ಮೇಲೆ ಹೋಗಬೇಕು ಎನ್ನತಕ್ಕಂಥದ್ದೇ ನಮ್ಮೆಲ್ಲರ ಆಸೆ. ಏಕೆಂದರೆ, ರೆವಿನ್ಯೂ ನಮ್ಮ ಎಕ್ಸ್‌ಚೆಕರ್ ಗೆ ಜಾಸ್ತಿ ಬರಬೇಕು ಎನ್ನತಕ್ಕಂಥದ್ದು. ಮಾನ್ಯ ವಾಟಾಳ್ ನಾಗರಾಜ್ ನೀವು ಈ ಕಡೆ ಗಮನವನ್ನು ಕೊಟ್ಟರೆ ನಿಮಗೆ ನಾನು ಅಭಾರಿಯಾಗಿದ್ದೇನೆ. ಹತ್ತು ರೂಪಾಯಿ ನಮಗೆ ರೆಂಟಲ್ಸ್ ಈಗ ಇದ್ದರೆ....

ಶ್ರೀ ವಾಟಾಳ್ ನಾಗರಾಜ್ : ಅವರ ಹತ್ತಿರ ಮಾತನಾಡುವುದಕ್ಕೂ ನಮಗೆ ಅವಕಾಶವನ್ನು ಕೊಡುವುದಿಲ್ಲ, ಪಕ್ಕದಲ್ಲಿ ಮಾತನಾಡುವುದಕ್ಕೂ ಅವಕಾಶವನ್ನು ಕೊಡುವುದಿಲ್ಲ. ಇವರು ಒಳ್ಳೆಯ ಮುಖ್ಯಮಂತ್ರಿಗಳಾದರು. ಈಗ ನಾವು ಬಹಳ ಕಷ್ಟದಲ್ಲಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಹತ್ತು ರೂಪಾಯಿಗಿಂತ ಜಾಸ್ತಿ ಬರಲಿ ಎನ್ನುವುದೇ ನಮ್ಮ ಆಸೆ. ಅದರೆ ಪಬ್ಲಿಕ್ ಆಕ್ಷನ್ ಆದಾಗ ಇವತ್ತು ಹತ್ತು ರೂಪಾಯಿ ಇದ್ದದ್ದು, ನಾಳೆ ಅದು ಎಂಟು ರೂಪಾಯಿಗೂ ಕೂಡ ಬಂದು ಬಿಡಬಹುದು. ಇದರಲ್ಲಿ ಬಹಳ ಎಚ್ಚರಿಕೆಯನ್ನು ವಹಿಸಬೇಕು. ಹತ್ತು ರುಪಾಯಿ ಇದ್ದದ್ದು 11,12,15 ರೂಪಾಯಿಗಳಿಗೆ ಹೋಗಬೇಕು ಎನ್ನುವ ಆಸೆ ಇದ್ದರೂ ಕೂಡ ಅದು ಎಂಟು ರೂಪಾಯಿಗೆ ಬಂದು ಬಿಟ್ಟರೆ ಅದನ್ನು ಒಪ್ಪಿಕೊಳ್ಳತಕಂಥ ಪರಿಸ್ಥಿತಿ ಬರುತ್ತದೆ. ನಮ್ಮ ಪಾಲಿಸಿ ಪ್ರಕಾರ ಒಂದು ವೇಳೆ ಕಡಿಮೆ ಬಂತು ಎಂದು ಇಟ್ಟುಕೊಳ್ಳೋಣ. ಆಗ ನಾವು ಸರ್ಕಾರದವರೇ ನಡೆಸುತ್ತೇವೆ. ನಾವು ಸಂಪೂರ್ಣವಾಗಿ ಹತೋಟಿಗೆ ತೆಗೆದುಕೊಳ್ಳುತ್ತೇವೆ ಯಾವ ಜಿಲ್ಲೆಯಲ್ಲೂ ಆಕ್ಷನ್ ಬೇಡ ಅಥವಾ ಒಂದು ಜಿಲ್ಲೆಯಲ್ಲೂ ಬೇಡ ಎನ್ನುವಂಥ ಯಾವುದೇ ಅಲ್‌ಟರ್‌ನೇಟಿವ್ಸ್‌ನ್ನು ನಾವು ಇಟ್ಟುಕೊಂಡಿಲ್ಲ, ನಾವು ಆ ಪಾಲಿಸಿಯನ್ನು ಮಾಡಿಲ್ಲ. ಅದನ್ನು ತಮ್ಮ ಕಾಲದಲ್ಲಿಯೂ ಮಾಡಿಲ್ಲ, ನಮ್ಮ ಕಾಲದಲ್ಲಿಯೂ ಮಾಡಿಲ್ಲ. ಅದು ಒಂದೇ ಪಾಲಿಸಿ ಮುಂದುವರೆದುಕೊಂಡು ಬಂದಿದೆ. ಇಲ್ಲಿ ಇರತಕ್ಕಂಥ ಪ್ರಶ್ನೆ ಏನೆಂದರೆ ಆಕ್ಷನ್ ವಿಚಾರ ಬಂದಾಗ, ಒಂದು ಸಾರಿ ಒಂದು ಲೆವೆಲ್‌ಗೆ ಹೋದಾಗ ಅದು ಕಡಿಮೆ ಆಯಿತು ಎನ್ನತಕ್ಕಂಥ ಭಾವನೆ ಬಂದು, ಜಾಸ್ತಿ ಆಗುವುದಕ್ಕೆ ಏನಾದರೂ ಸಾಧ್ಯತೆ ಇದ್ದರೆ put it for the next auction. ಸೆಕೆಂಡ್ ರೌಂಡ್, ಥರ್ಡ್ ರೌಂಡ್ ಮಾಡಿ, ನಾನು ಬೇಡ ಎಂದು ಹೇಳುವುದಿಲ್ಲ, ಅದರೆ ಕಡಿಮೆ ಆಗುತ್ತದೆ ಎಂದು ಅನುಮಾನ ಏನಾದರೂ ಬಂದರೆ we should never put it for the auction. ಏತಕ್ಕೆಂದು ಹೇಳುತ್ತೇನೆ, ನಾನು ಅಂಕಿ ಅಂಶವನ್ನು ಕೊಟ್ಟು ಇಲ್ಲಿ ಹೇಳುತ್ತೇನೆ. ಇದರಲ್ಲಿ ಏನಾಗಿದೆಯೆಂದರೆ ಟೋಟಲ್ ಆವರೇಜ್ 280 ಪರ್‌ಸೆಂಟ್‌ಗೆ ಬಂದು ಬಿಡ್ತು. ಇದು ಮೊದಲು ಬೆಂಗಳೂರು ಅರ್ಬನ್ ತೆಗೆದುಕೊಂಡರೆ ಒಂದು ವರ್ಷಕ್ಕೆ I think one crore and add ಏನು ಇತ್ತು, ಅದು ಒಂದೇ ಸಾರಿಗೆ 6 crores ಅಂಡ್ add ಗೆ ಜಂಪ್ ಆಗಿಬಿಡ್ತು. ಆಮೇಲೆ ಏನಾಯಿತು ಎಂದರೆ, ಹಣ ಕಟ್ಟದೇ ಕೋರ್ಟ್‌ನಿಂದ ಸ್ಟೇಗಳನ್ನು ತರತಕ್ಕಂಥ ಕೆಲಸಗಳು ಪ್ರಾರಂಭವಾದವು. Not only I am referring to Bangalore Urban, but also to other districts where the rentals had gone very, very high. ಅಲ್ಲಿಯೂ ಕೂಡ ಮಾಡಿದರು . ಈಗಲೂ ಕೂಡ ನಮ್ಮ ಹಣ ಲಾಕಪ್ ಆಗಿ ಹಾಗೆಯೇ ಕುಳಿತುಕೊಂಡಿದೆ. I think Rs.30 crores of something more. ಅದರ ಅಂಕಿಅಂಶವನ್ನು ಬೇಕಾದರೆ ಒದಗಿಸಿಕೊಡುತ್ತೇನೆ. ಇವತ್ತು ನಮಗೆ ಆ ಹಣ ಬರುತ್ತಿಲ್ಲ. ಕೋರ್ಟ್‌ನಿಂದ ಸ್ಟೇಗಳು, ಇಪ್ಪತ್ತೆಂಟು ಕೋರ್ಟ್ ಆರ್ಡರ್‌ಗಳು ಬಂದು ಬಿಟ್ಟಿವೆ. ಆ ಹಣವನ್ನು ಏನಾದರೂ ನಾವು ಪಡೆಯಬೇಕು ಎಂದರೆ ಈ ರೀತಿಯ ತೊಂದರೆಗಳೆಲ್ಲಾ ನಮಗೆ ಬಂದುಬಿಟ್ಟಿವೆ. That is a separate subject altogether. ಅದು ಒಂದು ಕಡೆಗೆ ಇರಲಿ. ಇಲ್ಲಿ ಏನಾಯಿತು ಎಂದರೆ ಉಳಿದಿರತಕ್ಕಂಥ ಜಿಲ್ಲೆಗಳನ್ನು ಸೆಕೆಂಡ್ ರೌಂಡ್ ಆಕ್ಷನ್ ಆದ ಮೇಲೆ ಥರ್ಡ್ ರೌಂಡ್‌ಗೆ ಕೂಡಾ ನಾವು ಇಡಿಸಿದ್ದೇವೆ. ಬೆಂಗಳೂರು ಅರ್ಬನ್ ಕೂಡಾ ನಾವು ಫಸ್ಟ್ ರೌಂಡ್‌ಗೆ ನಾವು ಏನು ಮುಗಿಸಿಲ್ಲ. Please

don't forget that aspect. ಬೆಂಗಳೂರು ಅರ್ಬನ್ ಅಂದರೆ ಸಿಟಿ ಸೇರಿಕೊಂಡಂತೆ, ಸೆಕೆಂಡ್ ರೌಂಡ್ ಆಕ್ಷನನ್ನು ನಾವು ಇಡಿಸಿದ್ದೇವೆ. ಆದ್ದರಿಂದ ಅಲ್ಲಿ ಒಂದೇ ಆಕ್ಷನ್ ಆಗಿದೆ ಎನ್ನತಕ್ಕಂಥ ಭಾವನೆ ತಮಗೆ ಬೇಡ. ಸೆಕೆಂಡ್ ರೌಂಡ್ ಆಕ್ಷನ್ ಆದಾಗ ಏನಾಗಿದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. It was only Rs. 1,000/- more. 4.11 ಕೋಟಿ ಏನು ಇದೆಯಲ್ಲಾ ಅದು ಸೆಕೆಂಡ್ ರೌಂಡ್‌ನ್ನು ನಾವು ಮಾಡಿದಾಗ ಒಂದೇ ಒಂದು ಸಾವಿರ ರೂಪಾಯಿ ಜಾಸ್ತಿ ಆಯಿತು. ಸಪೋಸ್ ಥರ್ಡ್ ರೌಂಡ್‌ನ್ನು ಮಾಡಿದೆವು ಎಂದು ಇಟ್ಟು ಕೊಳ್ಳೋಣ. ಬೆಂಗಳೂರು ನಗರದ್ದು ಕೋಟಿ ಗಟ್ಟಲೆ ಇರತಕ್ಕಂಥದ್ದು. ಒಂದೇ ಸಾರಿ ಏನಾದರೂ ಮೂರು ಕೋಟಿ ರೂಪಾಯಿ ಬಂದರೆ ನೀವು ಏನು ಮಾಡುತ್ತೀರಿ? ನಾನು ಕಾನೂನು ಪ್ರಕಾರ ಮಾತನಾಡುತ್ತಿದ್ದೇನೆ. ನಮಗೆ ಹೆದರಿಕೆ ಬಂದದ್ದು ಅಲ್ಲಿಯೇ. 4.11 ಲಕ್ಷ ಇದ್ದದ್ದು ಈ ಥರ್ಡ್ ರೌಂಡ್ ಏನಾದರೂ ಇಟ್ಟರೆ ಯಾರು ಬಿಡ್ಡರ್ಸ್ ಮುಂದೆ ಬರದಿದ್ದರೆ, ಸೆಕೆಂಡ್ ರೌಂಡಿನಲ್ಲಿಯೇ ನಮ್ಮ ಅಧಿಕಾರಿಗಳು ನೋಡಿದ್ದಾರೆ. ಏಕೆಂದರೆ ಎಲ್ಲ ಡೆಪ್ಯುಟಿ ಕಮೀಷನರ್‌ಗಳಿಂದ ನಾವು ಮೊದಲೇ ವರದಿಯನ್ನು ತರಿಸುತ್ತೇವೆ. ಈ ಆಕ್ಷನ್‌ಗೆ ಹೋಗುವುದಕ್ಕಿಂತ ಮೊದಲು ಒಂದು ಸರ್ವೆಯನ್ನು ಮಾಡುತ್ತಾರೆ. ಪ್ರೀ-ಆಕ್ಷನ್ ಸರ್ವೆ ನಡೆಯತಕ್ಕಂಥದ್ದು Report sent by all the deputy commissioners from all the districts, ನಮಗೆಲ್ಲಾ ಏನು ಬಂದಿದೆ ಎಂದರೆ, it indicated an average falls in rentals by about 10% as against which we have contained it only at 4%.

ನಾನು ಎಲ್ಲಾ ಅಫಿಷಿಯಲ್ ರಿಪೋರ್ಟ್ಸ್ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ನಾವು ಎಲ್ಲಾ ಜಿಲ್ಲೆಗಳಿಂದ ಸರ್ವೆ ಮಾಡಿ ತರಿಸಿದಾಗ ಈ ವರ್ಷ 10 ಪರ್ಸೆಂಟ್ ಕಡಿಮೆಯಾಗುತ್ತದೆಂದು ಪ್ರಿಡಿಕ್ಟ್ ಮಾಡಿದರು. ಏಕೆಂದರೆ, ಅಬ್‌ನಾರ್ಮಲ್ ಆಗಿ ಲಾಸ್ಟ್ ಇಯರ್ ಹೊರಟು ಹೋಗಿತ್ತು ಎನ್ನುವ ಕಾರಣದಿಂದ ಲಾಸ್ಟ್ ಇಯರ್‌ದು Rs.555 crores- expected revevue. ಇಲ್ಲಿ ಒಟ್ಟು ರಿಯಲೈಸ್ ಆಗಿರುವುದು ಎಷ್ಟು ಎಂದು ಹೇಳುತ್ತೇನೆ. ಏಕೆಂದರೆ, ಕೋರ್ಟಿನಿಂದ ಸಿಕ್ಕಾಪಟ್ಟೆ ಹೋಯಿತು, ಎಲ್ಲಾ ಸ್ಟೇಯನ್ನು ತಗೆದುಕೊಂಡರು, ಎಲ್ಲಾ ಮಾಡಿದರು. ಎಷ್ಟು ರಿಯಲೈಸ್ ಕಲೆಕ್ಷನ್ ಆಗಿತಕ್ಕಂಥಾದ್ದು ಎಷ್ಟು ಎನ್ನುವುದು ತಮ್ಮ ಗಮನಕ್ಕೆ ತರುವುದು ಬಹಳ ಒಳ್ಳೆಯದು. As against the budgeted revenue for the year 1990-91, of Rs.555 crores, the collection was only about Rs.429.5 crores. See the difference. ಇದನ್ನು ಶ್ರೀಮಾನ್ ಏಕಾಂತಯ್ಯನವರ ಗಮನಕ್ಕೆ ಏಕೆ ತರುತ್ತಿದ್ದೇನೆಂದರೆ, 555 ಎಲ್ಲಿ 439 ಎಲ್ಲಿ See the difference. Abnormal ಗ್ರೋತ್ ಬಂದಾಗ ಯಾವಾಗಲೂ 10 ಪರ್ಸೆಂಟ್, 5ಪರ್ಸೆಂಟ್,20 ಪರ್ಸೆಂಟ್ ಇರುತ್ತದೆ. ತಾವು ಅಧಿಕಾರದಲ್ಲಿದ್ದಾಗಲೂ ಕೂಡ ಸ್ಟಡಿ ಗ್ರೋತ್ ಇದೆ. ತಾವು ಆ ಗ್ರಾಸ್ ನೋಡಿದರೆ ಗೊತ್ತಾಗುತ್ತದೆ. ಆದರೆ ಇದು ಅನ್‌ಪ್ರಿಸಿಡೆಂಟಾಗಿ ಹೋಗದ್ದರಿಂದ ನಿಮ್ಮ ಕಲೆಕ್ಷನ್ ಬರಲಿಲ್ಲ, ಅಲ್ಲಿಗೆ ಡ್ರಾಪ್ ಆಯಿತು. ತಾವು ಹೇಳಬಹುದು. ನಿಮ್ಮ ಕಾಲದ 1990-91ರ ಬಜೆಟ್‌ನಲ್ಲಿ 555 ಕೋಟಿ ಎಳೆದುಕೊಂಡಿದ್ದೀರಿ? ನೀವಿದ್ದರೂ ಅಷ್ಟೇ ಹಣೆಬರಹ. ನಾವಿದ್ದರೂ ಅಷ್ಟೆ. ಮತ್ತೊಬ್ಬರೂ ಅಧಿಕಾರದಲ್ಲಿ ಬಂದು ಕುಳಿತುಕೊಂಡರೂ ಅವರ ಹಣೆಬರಹವೂ ಅಷ್ಟೆ. ನಾನು ಈ ವರ್ಷ 1991-92ರ ಬಜೆಟ್‌ಗೆ ಏನು ಮಾಡಿದ್ದೀನೆಂದರೆ, ತಮಗೆ ಗೊತ್ತಿರುವ ಹಾಗೆ 555 ಕೊಟಿ ಇಟ್ಟುಕೊಂಡಿದ್ದೇನೆ. For the year 1991-92, that is why I have put it Rs.555 crores ಏಕೆಂದರೆ ಅದು not based on true facts.

ಅದು ಕಲೆಕ್ಷನ್ ಆಗುವುದಿಲ್ಲವೆಂದು ಗೊತ್ತಾಗಿ ನಾವು ಈ ವರ್ಷ 555 ಕೋಟಿ ಇಟ್ಟುಕೊಂಡರೂ ಕೂಡಾ when compared to 1989-90 ನಮ್ಮ ಗ್ರೋತ್ ನಮಗೆ

ಸರಿಯಾಗಿ ಸಿಗುತ್ತದೆ ಎನ್ನುವ ದೃಷ್ಟಿಯಿಂದ ನಾವು 555 ಕೋಟಿ ಎಂದು ಇಟ್ಟಿದ್ದೇವೆ. ನಮಗೆ 555 ಕೋಟಿ ಬಂದರೆ ಸಾಕು. ನನಗೆ ಗ್ಯಾರಂಟಿಯಾಗಿ ಗೊತ್ತಿದೆ. ಈಗ ನಮಗೆ ಮಂತ್ಲಿ ರೆವಿನ್ಯೂ ಎಷ್ಟು ಬರುತ್ತಿದೆ? ಫಸ್ಟ್ ಫೋರ್ ಮಂತ್ಸ್ ನಮಗೆ ಎಷ್ಟು ಬಂದಿದೆ ಎನ್ನುವುದರ ಅಂಕಿ ಅಂಶವನ್ನು ತಮಗೆ ಈಗ ಕೊಡುತ್ತೇನೆ. ನೀವು ಅದನ್ನು ಲೆಕ್ಕ ಹಾಕಿದರೆ I think we are going near to Rs.555 crores.

ನಾವು ಈ ವರ್ಷ ಮಾಡತಕ್ಕಂಥ ಒಂದು ಧೈರ್ಯದಿಂದಲೇ ನಾವು ಹೋಗುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ ಬೆಂಗಳೂರು ಅರ್ಬನ್‌ನಲ್ಲಿ ಸೆಕೆಂಡ್ ರೌಂಡ್ ನಾವು ಸೆಂಕೆಂಡ್ ರೌಂಡ್ ಆಕ್ಷನ್ ಹಾಕಿಸಿದ್ದೇವೆ, ನಾನೇ ಹಾಕಿಸಿದ್ದೇನೆ. ಇಲ್ಲಿ ಏನಾಯಿತೆಂದರೆ, ಯಾರೂ ಬಿಡ್ಡರ್ಸ್ ಮುಂದೆ ಬರಲಿಲ್ಲ. please think over this position ಏಕೆಂದರೆ ಇಲ್ಲಿ ಕೋಟಿಗಟ್ಟಲೆ ವಿಚಾರ ಇರುವುದರಿಂದ ಅಲ್ಲಿ ಎರಡು-ಮೂರು ಜನ ಬಿಟ್ಟರೆ ಬೇರೆ ಬೇರೆ ಯಾವ ಬಿಡ್ಡರ್ಸ್ ಮುಂದೆ ಬರುವುದಿಲ್ಲ. ಅದೇ ಬೇರೆ ಜಿಲ್ಲೆಗಳಲ್ಲಿ ಕಡಮೆ ಹಣದ ಪ್ರಶ್ನೆ ಇರುವುದರಿಂದ ಅಲ್ಲಿ ಬಹಳ ಜನ ಬರುತ್ತಾರೆ. ಆದರೆ ಅದೇ ರೀತಿ ಬೆಂಗಳೂರು ಅರ್ಬನ್‌ಗೆ ಬರುವುದಿಲ್ಲ. ಹಾಗೆ ಬರದೇ ಇರುವುದರಿಂದ ಏನಾಗುತ್ತದೆಂದರೆ, ಅಪ್ಪಿತಪ್ಪಿ ಏನಾದರೂ 4 ಕೋಟಿ 11 ಲಕ್ಷ ಪರ್ ಮಂತ್ ಇರತಕ್ಕಂಥಾದ್ದು, ಡ್ರಾಪ್ ಆಗಿ, ಮೂರು ಕೋಟಿ ಅಥವಾ ಎರಡು ಕೋಟಿ ಬಂದರೆ, ಇಲ್ಲವೆ 4 ಕೋಟಿಗೆ ನಿಂತುಬಿಟ್ಟರೆ, ಎಕ್ಸೈಜ್ ಸೈಡ್‌ನಿಂದ there will be huge lose to the State Exchequer.

ನಾವು ಅದನ್ನು ವಿಚಾರ ಮಾಡಿ, ಥರ್ಡ್‌ರೌಂಡ್ ಆಕ್ಷನ್ ಇಡುವುದು ಅಪಾಯಕರ ಎಂಬ ಅಭಿಪ್ರಾಯವನ್ನು ಅಧಿಕಾರಿಗಳು ಕೊಟ್ಟ ಮೇಲೆಯೇ ಸರ್ಕಾರ ಥರ್ಡ್ ರೌಂಡ್ ಇಟ್ಟಿಲ್ಲ. ಇದೇ ಕಾರಣ. ಇದರಲ್ಲಿ ಲಾಸ್ ಎಲ್ಲಿ ಬರುತ್ತದೆ ಎಂಬುವುದನ್ನು ವಿಚಾರ ಮಾಡಿಯೇ ನಾವು ಸ್ಪಷ್ಟವಾಗಿಟ್ಟಿದ್ದು. Hope I have now been able to satisfy the Hon'ble Members who raised this issue as far as Bangalore Urban is concerned. ಮಾನ್ಯ ಸಭಾಧ್ಯಕ್ಷರೇ, ಇದಲ್ಲದೆ ನಾನಿನ್ನೂ ಕೂಡ ತಮ್ಮ ಗಮನಕ್ಕೆ ತರವ ಹಾಗಿದ್ದಲ್ಲಿ ಇಲ್ಲಿ revenue collection 126.49 crores. ಮಾನ್ಯ ಚಂದ್ರೇಗೌಡರು ಬೇಕಾದರೆ ಇದನ್ನು ಗುರ್ತು ಹಾಕಿಕೊಳ್ಳಬಹುದು As against the revevue collection, during the first four months of last year i.e., April, May, June and July, 1990 i.e., from April to July - Four months, collection was Rs.126.49 crores.

ನಾಲ್ಕು ತಿಂಗಳದ್ದು ಲೆಕ್ಕ ಹಾಕಿಕೊಳ್ಳಿ. ಎಷ್ಟು ಕಲೆಕ್ಷನ್ ಆಗಿದೆ ಎಂದರೆ, 126.49 ಕೋಟಿಗಳು. The revenue collection made in the first four months of this year is Rs.170.44 crores. ಇದು April to July ಸೇಮ್ ಪಿರೇಡ್ ನಾನು ಇಟ್ಟಿದ್ದೇನೆ.

1990ರಲ್ಲಿ 170.44 ಕೋಟಿ.This is more by Rs.43.55 crores, than corresponding period of last year. ತಾವು ರೆವಿನ್ಯೂ ಬಿದ್ದು ಹೋಗಿದೆ, ಕಲೆಕ್ಷನ್ ಆಗುತ್ತಿಲ್ಲವೆಂದು ಅನುಮಾನದಿಂದ ಹೇಳಿರಬಹುದು ಅಥವಾ ಪ್ರಾಮಾಣಿಕವಾಗಿ ಹೇಳಿರಬಹುದು. ತಮ್ಮ Good intentionನ್ನು ನಾನು ಪ್ರಶ್ನೆ ಮಾಡುವುದಿಲ್ಲ the fact is this. 43.95 ಕೋಟಿ ಅಂದರೆ 5 ಲಕ್ಷ ಕಡಿಮೆ, 44ಕೋಟಿ, ಇದನ್ನು ಕಳೆದ ವರ್ಷದ ವಸೂಲಿಯೊಂದಿಗೆ ಹೋಲಿಸಿದಾಗ ನಾವು ಹೆಚ್ಚು ವಸೂಲಿ ಮಾಡಿದ್ದೇವೆ. This is just for your kind information. The revenue collected for the first six months of last year i.e.,

from April to September,1990 is Rs.194.49 crores. As against this, the second half-year collection i.e.,from October 1990 to March 1991 is Rs.234.96 crores ಅಂದರೆ ಸ್ವಲ್ಪ ಹೆಚ್ಚುಕಡಿಮೆ 235 ಕೋಟಿ ಎಂದು ಇಟ್ಟುಕೊಳ್ಳಿ.

This is more by Rs. 40.45 crores ಇದರಲ್ಲಿ ನಲವತ್ತೂವರೆ ಕೋಟಿ ರೂಪಾಯಿಗಳ ಕಲೆಕ್ಷನನ್ನು ನಾವು ತೋರಿಸಿದ್ದೇವೆ. The average collection per month in the first half year is Rs.32.41 crores as against the average collection of Rs.39.16 crores per month for the second half of 1990. The growth of rentals for the 8th year from 1975-76 to 1982-83 has gone by 324% or 3.24 times ಎಂದು ಇಟ್ಟುಕೊಳ್ಳಬಹುದು. ತಾವು ಅಧಿಕಾರಕ್ಕೆ ಬರುವ ಮೊದಲಿನ ವಿಚಾರ ಇದು. The rentals of 1975-76 were Rs.22.45 crores. It has gone to Rs.72.88 crores, whereas for a period of 7 years from 1983-84 to 1989-90, it has increased by 0.62 times or 62% ತಮ್ಮ ಕಾಲದಲ್ಲಿ ಇನ್‌ಕ್ರೀಸ್ ಎಷ್ಟು ಇದೆ ಎಂದರೆ 0.62 ಟೈಮ್ಸ್ ಮಾತ್ರ.

In the year 1983-84 the rentals were Rs.85 crores and odd. It has grown to Rs.134 crores in the year 1989-90. During Janatha government it was o.something ಎಂದು ನಾನು ಹೇಳಿದ್ದು. Again when the Congress government came back to power, the rentals have gone by 175% in the year 1990-91. The increase is 2.75 times. ತಮ್ಮ ಕಾಲದಲ್ಲಿ ಅಂದರೆ 1983 ರಿಂದ 89ರಲ್ಲಿ ತಾವು ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ 0.62 ಟೈಮ್ಸ್ ಮಾತ್ರ ಜಾಸ್ತಿಯಾಗಿದೆ. ಅಂದರೆ not even one time. ಒಂದು ಟೈಮ್‌ನಷ್ಟು ಸಹ ಅದು 0.62 ಟೈಮ್ಸ್ ಮಾತ್ರ ಜಾಸ್ತಿಯಾಗಿದೆ. ನಮ್ಮ ಕಾಲದಲ್ಲಿ ನಾವು ಮೊನ್ನೆ ಮೊನ್ನೆ ಅಧಿಕಾರಕ್ಕೆ ಬಂದಿದ್ದೇವೆ. 1989ರಿಂದ ಇಲ್ಲಿಯವರೆಗೆ 2.75 ಟೈಮ್ಸ್ . ಏರಿಸಿದ್ದೇವೆ.

ಸ್ವಾಮಿ ಈ ದಿವಸ ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ, ಈ ಅವಿಶ್ವಾಸ ನಿರ್ಣಯದಲ್ಲಿ ಈ ವಿಷಯವನ್ನು ತಾವು ಪ್ರಸ್ತಾಪಮಾಡಿದ್ದರಲ್ಲ, ಮಾಡಿ ಬೇಡವೆಂದು ಹೇಳುವುದಿಲ್ಲ. ಆದರೆ ಯಾರ ಕಾಲದಲ್ಲಿ ರೆವಿನ್ಯೂ ಇಷ್ಟು ಜಾಸ್ತಿಯಾಯಿತು, ಯಾರ ಕಾಲದಲ್ಲಿ ಪ್ರಯತ್ನ ಜಾಸ್ತಿಯಾಯಿತು, ಯಾರ ಕಾಲದಲ್ಲಿ ವಸೂಲಿ ಹೆಚ್ಚು ಆಯಿತು, ಯಾರು ಎಕ್ಸೈಸ್ ಬಾಬಿನಿಂದ ಹಣವನ್ನು ಹೆಚ್ಚು ಪಡೆಯಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದರು ಎಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

Whenever an abnormal increase took place, there was a fall in the following couple of years. ತಾವು ಹೀಗೆ ಆಗಿದೆ ಅಂಥ ದಯವಿಟ್ಟು ತಿಳಿದು ಕೊಳ್ಳಬೇಡಿ. ಹಿಂದೆ ಕೂಡ ಆಗಿದೆ. ನಾನು ಹಿಂದಿನದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ, there was an increase in 1981-82 by about 60.4% followed by a fall or -2.6% in 82-83, for the entire state.

ನಾನು ಒಂದೆ ಒಂದು ಪಾಯಿಂಟ್ ಕೇಳುತ್ತೇನೆ. ತಾವು ಅಧಿಕಾರಕ್ಕೆ ಬರುವುದಕ್ಕೆ ಮೊದಲು ಇಲ್ಲಿ 60.4 ಪರ್ಸೆಂಟ್ ಕೇಳುತ್ತೇನೆ. ತಾವು ಅಧಿಕಾರಕ್ಕೆ ಬರುವುದಕ್ಕೆ ಮೊದಲು ಇಲ್ಲಿ 60.4 ಪರ್ಸೆಂಟ್ ಇತ್ತು. fall 2.6% in 1982-83 ಅಂದರೆ ತಾವು ಅಧಿಕಾರ ತೆಗೆದುಕೊಂಡಿರಲ್ಲಾ ಆ ಕಾಲದಲ್ಲಿ ಹೊರಟು ಹೋಯಿತು. ಏತಕ್ಕೆಂದರೆ, ಡ್ರಾಪ್ ಆಯಿತು. ಬಿಡ್ಡರ್ಸ್ ಬರದೆ ಇದ್ದರೆ ಸಡನ್ನಾಗಿ ಡ್ರಾಪ್ ಆಗುತ್ತದೆ. ಇದಕ್ಕೆ

ನೀವು ಕಾರಣಕರ್ತರು ಎಂದು ನಾನು ಹೇಳುತ್ತಿಲ್ಲ. ಪಬ್ಲಿಕ್ ಆಕ್ಷನ್ ಆ ರೀತಿ ಬರುತ್ತದೆ. In Bangalore Urban area there was an increase of rentals by 29.5% in the year 1984-85. ತಮ್ಮ ಕಾಲವನ್ನೇ ಪಕ್ಕಾ ಉದಾಹರಣೆ ಕೊಡುತ್ತಿದ್ದೇನೆ. ಏಕೆಂದರೆ 1983ಕ್ಕೆ ತಾವು ಅಧಿಕಾರಕ್ಕೆ ಬಂದಿದ್ದೀರಿ. ನಾನು 1984-85ರಲ್ಲಿ ಇದೇ ಬೆಂಗಳೂರು ಸಿಟಿ ಡಿಸ್ಟ್ರಿಕ್ಟ್‌ನಲ್ಲಿ ಇರತಕ್ಕಂಥದ್ದನ್ನು ಹೇಳುತ್ತಿದ್ದೇನೆ. 29.5 ಪರ್ಸೆಂಟ್ ಇನ್‌ಕ್ರೀಸ್ ಇತ್ತು. ಆಮೇಲೆ ಏನಾಯಿತೆಂದರೆ. there was a fall in the following 4 years. Namely for Bangalore Urban, it was 14.5% in 85-86. 14.5% ಡ್ರಾಪ್ ಆಗಿದೆ. ನಾನು ಈಗ ನಿಮ್ಮನ್ನು ಕೇಳಬಹುದು. ನಿಮ್ಮ ಕಾಲದಲ್ಲಿ ಡ್ರಾಪ್ ಆಯಿತು ಎನ್ನತಕ್ಕಂಥ ಮಾತನ್ನು ನೀವು ಹೇಗೆ ಹೇಳುತ್ತೀರೋ ಹಾಗೆಯೇ ಇವತ್ತು ನಾನು ತಮ್ಮನ್ನು ಕೇಳಬಹುದು. 13.99% in the year 1986-87, nearly 14%. As against 1984-85, it came to 14% in 86-87.

1986-87ರಲ್ಲಿ ಅದು 14 ಪರ್ಸೆಂಟ್ ಡ್ರಾಪ್ ಆಗಿದೆ. ಇದು ನಿಮ್ಮ ಕಾಲದಲ್ಲಿ ಅರ್ಬನ್‌ನಲ್ಲಿ ಬೆಂಗಳೂರು ಆಗಿರುವುದನ್ನು ಹೇಳುತ್ತಿದ್ದೇವೆ. ಆಮೇಲೆ ಮೈನಸ್ 7.79ಪರ್ಸೆಂಟ್ 1984-85ರಲ್ಲಿ ಡ್ರಾಪ್ ಆಗಿದೆ. -7.97% for the year 87-88 as against the year 84-85.

ಇದು ಕೂಡ ತಮ್ಮ ಕಾಲದಲ್ಲಿ ಆಗಿದೆ. -13.97% for the year 1988-89 as against the year 84-85. ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿರುವುದು ಏಕೆಂದರೆ, ಇದು ಪಬ್ಲಿಕ್ ಆಕ್ಷನ್‌ನಲ್ಲಿ ಮೊಟ್ಟಮೊದಲನೆಯಬಾರಿಗೆ ನಮ್ಮ ಸರ್ಕಾರ ಬಂದಮೇಲೆ ಬೆಂಗಳೂರು ಅರ್ಬನ್ ವಿಚಾರ ತೆಗೆದುಕೊಂಡರೂ ಡ್ರಾಪ್ ಆಗಿದೆ ಎನ್ನತಕ್ಕಂಥ ವಿಚಾರವನ್ನು ದಯವಿಟ್ಟು ಗಮನದಲ್ಲಿಟ್ಟುಕೊಂಡು ಮಾತನಾಡಿದರೆ ಒಳ್ಳೆಯದು. ನಿಮ್ಮ ಕಾಲದಲ್ಲಿ 14 ಪರ್ಸೆಂಟ್ ಡ್ರಾಪ್ ಆಗಿದ್ದರೆ ನಮ್ಮ ಕಾಲದಲ್ಲಿ ಆಗಿದ್ದು It is hardly 2% ಸನ್ಮಾನ್ಯ ಅಧ್ಯಕ್ಷರೇ ತಮ್ಮ ಗಮನಕ್ಕೆ ನಾನು ತರುವಂತಾಹದ್ದು ಏನೆಂದರೆ ಬೆಂಗಳೂರು ಅರ್ಬನ್ ಇರಬಹುದು ಅಥವಾ ಯಾವುದೇ ಇರಬಹುದು. ಇನ್ನು ಇದರ ರೆವಿನ್ಯೂ ವಿಚಾರ ಹೇಳಬೇಕಾಗಿದೆ. ಇದು ನನಗೆ ಎಕ್ಸೈಸ್ ಡಿಮ್ಯಾಂಡ್ ಮೇಲೆ ಉತ್ತರ ಕೊಟ್ಟಹಾಗೆ ಆಗಿದೆ. ಏತಕ್ಕೆಂದರೆ ನೀವು ಆ ರೀತಿ ಪ್ರಸ್ತಾಪ ಮಾಡಿದ್ದೀರಿ. ನಾನು ಇನ್ನೇನೂ ಮಾಡುವ ಹಾಗೆ ಇಲ್ಲ. ಇಲ್ಲದಿದ್ದರೆ ರೆಕಾರ್ಡ್‌ನಲ್ಲಿ ಉಳಿಯುತ್ತದೆ. ಇಲ್ಲಿ 1988-89ರಲ್ಲಿ 258.89 ಕೋಟಿ + 70 ಕೋಟಿ ಇದೆ. 1989-90 ಅಂದರೆ ತಮ್ಮ ಕಾಲದ್ದು 327.57ಕೋಟಿ In 90-91, It is Rs. 429.47 Crores i.e., +Rs. 130 crores. 1991-92ರಲ್ಲಿ ಎಸ್ಟಿಮೇಟೆಡ್ 555 ಕೋಟಿ ಎಂದು ಬಜೆಟ್‌ನಲ್ಲಿ ಇದೆ ಎನ್ನತಕ್ಕಂಥ ಮಾತನ್ನು ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ.

ಮಾನ್ಯ ಅಧ್ಯಕ್ಷರೆ, ಇದನ್ನೆಲ್ಲಾ ನೋಡಿದಮೇಲೆ ತಾವು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರಾಗಿ ನಾನು ಕೇಳುತ್ತಿದ್ದೇನೆ. ಒಂದು ಆಯೋಟಾ ಕೂಡ ಇಲ್ಲಿ ಸರ್ಕಾರದ ಪಾತ್ರವಾಗಲಿ ಸರ್ಕಾರದ ವಿಚಾರಧಾರೆಯಾಗಲಿ, ಇದರಲ್ಲಿ ಕೈಹಾಕತಕ್ಕಂಥಾದ್ದು ಇಲ್ಲ. Third round of action ಇಡಿಸಿ. ನಾವು ಬರೀ 14.20ಕೋಟಿ ಲೆಸ್ಸ್ ತೆಗೆದುಕೊಂಡುಬಂದು ನಿಲ್ಲಿಸಿರತಕ್ಕಂತಾಥಾದ್ದು ಹಾರ್ಡ್‌ಲಿ ಡಿಫರೆನ್ಸ್ 4 ಪರ್ಸೆಂಟ್ ಮಾತ್ರ. ನಾನು ಹಿಂದಿನ ಅಧಿವೇಶನದಲ್ಲಿಯೇ ಆ ಮಾತನ್ನು ಹೇಳಿದ್ದೇನೆ. ನಾನು ರಿಪೀಟ್ ಮಾಡಲಿಕ್ಕೆ ಹೋಗುವುದಿಲ್ಲ. ಆದ್ದರಿಂದ ತಾವು ಇಲ್ಲಿ ಅವಿಶ್ವಾಸ ನಿರ್ಣಯದ ಸೂಚನೆಗೆ ಶಕ್ತಿ ತುಂಬಲಿಕ್ಕೆ ಈ ವಿಚಾರ ಏನು ಇಟ್ಟಿದ್ದೀರಿ, ಈ ವಿಚಾರದ ಬಗ್ಗೆ ಅಂಕಿಅಂಶಗಳ ಸಹಿತ ತಮ್ಮ ಕಾಲದ್ದು ಇಲ್ಲಿ ಇಟ್ಟಮೇಲೆ ಅದನ್ನು ಇದಕ್ಕೆ ಹೋಲಿಸಿದ ಮೇಲೆ ನಿಮ್ಮ ಒಂದು ವಾದಕ್ಕೆ

ಆಧಾರ ಏನು ಉಳಿಯಿತು ಎನ್ನತಕ್ಕ ಪ್ರಶ್ನೆಯನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳುತ್ತಿದ್ದೇನೆ. ಇದು ನಂಬರ್ ಒಂದು. ಇನ್ನು ನಂಬರ್ ಎರಡು ಏನೆಂದರೆ ಇವೊತ್ತು ತಾವು 12 ಡಿಸ್ಟಿಲರಿ ಲೈಸೆನ್ಸುಗಳನ್ನು ಕೊಟ್ಟಿದ್ದೀರೆಂದು ಹೇಳಿದ್ದೀರಿ. ಸ್ವಾಮಿ ನಾನು ಒಂದೇ ಒಂದು ವಿಚಾರ ಹೇಳುವುದೇನೆಂದರೆ ಶುಗರ್ ಫ್ಯಾಕ್ಟರಿಗಳು ನಮ್ಮ ಹತ್ತಿರ ಸುಮಾರು 29 ಇವೆ. ಇಷ್ಟು ಮೊಲಾಸಿಸ್ ಉತ್ಪಾದನೆ ಮಾಡತಕ್ಕಂಥ ಶುಗರ್ ಫ್ಯಾಕ್ಟರಿಗಳು ನಮ್ಮ ಹತ್ತಿರ ಇವೆ. ಶುಗರ್ ಫ್ಯಾಕ್ಟರೀಸ್ ಅಂದರೆ ಮೊಲಾಸಿಸ್ ಇದ್ದೇ ಇರುತ್ತದೆ. ಈಗ ಪರಿಸ್ಥಿತಿ ಏನಾಗಿದೆ ಎನ್ನುವ ವಿಚಾರದಲ್ಲಿ ನಾನು ಹಿಂದೆ ಸದನದಲ್ಲಿ ಪ್ರಸ್ತಾಪ ಮಾಡಿ ಹೇಳಿಕೆ ಕೊಟ್ಟಿದ್ದೇನೆ. ಮೊಲಾಸಿಸ್ ಹಾಗೆಯೇ ಇಟ್ಟುಕೊಂಡು ನೀವು ಗೋಡೌನ್‌ನಲ್ಲಿ ತುಂಬಿಕೊಂಡು ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ. ಅದು ತಮಗೂ ಕೂಡ ಗೊತ್ತಿದೆ. ಬೆಳಗಾಂ ಜಿಲ್ಲೆಯಲ್ಲಿ ಶುಗರ್ ಫ್ಯಾಕ್ಟರಿಯಲ್ಲಿದ್ದಂಥ ಮೊಲಾಸಿಸ್ ಎಲ್ಲಾ ತೆಗೆದುಕೊಂಡು ಹೋಗಿ ಗದ್ದೆಯಲ್ಲಿ, ಹೊಲದಲ್ಲಿ, ಚೆಲ್ಲಿಬಿಟ್ಟರು. ಅನಂತರ ಅದನ್ನು ತೆಗೆದುಕೊಂಡು ಹೋಗಿ ಏನು ಮಾಡುತ್ತಾರೆಂದರೆ, ಇಲ್ಲಿ ಸಿಟ್ ಡಿಸ್ಟಿಲರಿ ಮತ್ತೊಂದಕ್ಕೆಲ್ಲಾ ಅನುವು ಮಾಡಿಕೊಡುತ್ತಾರೆ. ಇದರಿಂದ, ನಮ್ಮ ರೆವಿನ್ಯೂಗೆ ಪೆಟ್ಟಾಗುತ್ತದೆ. ಅದಕ್ಕೋಸ್ಕರ ನಾವು ಏನು ಮಾಡಬೇಕು ಎಂದರೆ ಅತಿ ಶೀಘ್ರವಾಗಿ ಮೊಲಾಸಿಸ್‌ನ್ನು ಉಪಯೋಗ ಮಾಡತಕ್ಕ ವಿಚಾರವನ್ನು ಸರ್ಕಾರ ಮಾಡದೇ ಇದ್ದರೆ, ನಮ್ಮ ಆದಾಯಕ್ಕೆ ಪೆಟ್ಟು ಬೀಳುತ್ತದೆ. ನಮ್ಮ ರೆವಿನ್ಯೂಗೆ ಹೊಡೆತ ಬೀಳುತ್ತದೆ. ಸರ್ಕಾರ ನೀವು ನಡೆಸಿ ಅಥವಾ ನಾವು ನಡೆಸಲಿ ಇದನ್ನು ಅನಿವಾರ್ಯವಾಗಿ ಮಾಡಲೇಬೇಕಾಗುತ್ತದೆ. ಇವೊತ್ತು ಡಿಸ್ಟಿಲರೀಸ್‌ಗೆ ಲೈಸೆನ್ಸ್ ಕೊಟ್ಟಿರತಕ್ಕಂಥಾದ್ದು ಅಪರಾಧ ಎಂದು ನಾನು ಹೇಳುವುದಿಲ್ಲ.. ಸರ್ಕಾರ ಲೈಸೆನ್ಸ್ ಕೊಡುವ ಸಂದರ್ಭದಲ್ಲಿ ಕೊಡಬೇಕು ರೆವಿನ್ಯೂ ತೆಗೆದುಕೊಳ್ಳಬೇಕು. ಇದು ನಮ್ಮ ಕಾಲದಲ್ಲಿ ಮಾತ್ರ ಆಗಿದೆ ಎಂದು ನಾನು ಹೇಳುತ್ತಿಲ್ಲ. ನಿಮ್ಮ ಕಾಲದಲ್ಲಿಯೂ ಕೂಡ ಡಿಸ್ಟಿಲರೀಸ್‌ಗೆ ಲೈಸೆನ್ಸ್ ಕೊಟ್ಟಿದ್ದೀರಿ. ನಾನು ಆ ಅಂಕಿಅಂಶಗಳನ್ನು ಕೊಡುತ್ತಿದ್ದೇನೆ. ನೀವು ಹಾಗೆ ಲೈಸನ್ಸ್ ಕೊಟ್ಟಿದ್ದೀರಿ, ಅದಕ್ಕೋಸ್ಕರ ನಾವು ಕೊಟ್ಟಿರುವುದು ಸರಿ ಎಂದು ವಾದ ಮಾಡತಕ್ಕ ಪ್ರಶ್ನೆ ಪ್ರತ್ಯೇಕ. ಲೈಸೆನ್ಸ್ ಕೊಡತಕ್ಕಂಥಾದ್ದಕ್ಕೆ ಸಕಾರಣಗಳು ಅಲ್ಲಿ ಕಂಡುಬಂದರೆ, ಸರ್ಕಾರವನ್ನು ನಡೆಸತಕ್ಕವರು ಲೈಸೆನ್ಸ್ ಕೊಡಬೇಕಾಗುತ್ತದೆ. ಲೈಸೆನ್ಸ್ ಕೊಡತಕ್ಕ ವಿಧಿ ವಿಧಾನ, ಕಾನೂನು ಏನಿದೆ ಅದರ ಬಗ್ಗೆ ಮಾತ್ರ ಗಮನ ಹರಿಸಬೇಕು. ಯಾರಿಗೆ ನಾವು ಕೊಡಬೇಕು, ಅವರು ನಡೆಸುತ್ತಾರೋ ಇಲ್ಲವೋ ಆದಾಯ ಯಾವರೀತಿ ಬರಬೇಕು ಎನ್ನುವ ವಿಚಾರಗಳನ್ನೆಲ್ಲಾ ಇಟ್ಟುಕೊಳ್ಳಬೇಕಾಗುತ್ತದೆ. anticipated production for the next three years. ಜಾಸ್ತಿ ಬರುತ್ತದೆ. That is due to increase in the capacity of the sugar factories by modernisation. ಅದು ಬಂದಿದೆ. ಎಕ್ಸ್‌ಪ್ಯಾನ್‌ಸ್ಕೀಮ್ ಆಮೇಲೆ new sugar factories in offing.

ಏಕೆಂದರೆ ಹೊಸ ಶುಗರ್ ಫ್ಯಾಕ್ಟರಿ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ನಾವು ಆಗಲೇ ಬರದಿದ್ದೇವೆ, ರೆಕಮೆಂಡ್‌ಮಾಡಿ ಕಳುಹಿಸಿದ್ದೇವೆ. ತಮ್ಮ ಕಾಲದಲ್ಲಿ ಸಹಿತ ಕಳುಹಿಸಿದ್ದೀರಿ. ಮಾನ್ಯ ವೀರೇಂದ್ರಪಾಟೀಲರ ಕಾಲದಲ್ಲಿಯೂ ಸಹಿತ ಕಳುಹಿಸಿದ್ದಾರೆ. ಈ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಮತ್ತೊಬ್ಬರು, ಖಾಸಗಿಯವರು ಬರಬಹುದು. ತಾವು ಮಹಾರಾಷ್ಟ್ರದಲ್ಲಿ ನೋಡಿದ್ದೀರಿ. ಶುಗರ್‌ಫ್ಯಾಕ್ಟರಿಗಳನ್ನು ರಾಶಿರಾಶಿಯಾಗಿ ಮಾಡಿದ್ದಾರೆ. ಮತ್ತೆ ಗೌರ್ನಮೆಂಟ್ ಆಫ್ ಇಂಡಿಯಾದಲ್ಲಿ 38 ಅಥವಾ 39 ಶುಗರ್ ಫ್ಯಾಕ್ಟರಿಗಳ ಲೈಸೆನ್ಸ್‌ಗೆ ಹೊಸದಾಗಿ ಒಂದು ಪಟ್ಟಿ ಇಟ್ಟುಕೊಂಡು ಕುಳಿತ್ತಿದ್ದಾರೆ. ಅಷ್ಟೊಂದು ಶುಗರ್ ಫ್ಯಾಕ್ಟರಿಗಳು ಮಹಾರಾಷ್ಟ್ರದಲ್ಲಿದ್ದರೂ ಕೂಡ ಈ ಪಟ್ಟಿ ಇಟ್ಟುಕೊಂಡು ಕುಳಿತ್ತಿದ್ದಾರೆ. ನಮ್ಮಲ್ಲಿರುವ ಕೇಸ್‌ಗೆ ಶುಗರ್ ಫ್ಯಾಕ್ಟರಿಗಳು ಸಾಲದೆ, ಬೆಳಗಾಂ ಜಿಲ್ಲೆಯಿಂದ ತೆಗೆದುಕೊಂಡು ಹೋಗಿ ಬಾರ್ಡರ್ ಕ್ರಾಸ್ ಮಾಡಿಕೊಂಡು ಮಹಾರಾಷ್ಟ್ರಕ್ಕೆ ಹೊರಟು ಹೋಗುತ್ತಿದೆ. ಪರ್ಚೇಸ್ ಟ್ಯಾಕ್ಸ್

ಇವೇಜನ್ ಆಗುತ್ತಿದೆ ಎನ್ನತಕ್ಕಂಥ ಕಂಪ್ಲೆಂಟ್ ಕೂಡ ನಾವು ಪಡೆದಿದ್ದೇವೆ. ನಮ್ಮ ರೆವಿನ್ಯೂಸ್ ಎಲ್ಲಾ ಬಿದ್ದು ಹೋಗುತ್ತಿದೆ ಎನ್ನುವ ವಿಚಾರ ನಮ್ಮ ಗಮನದಲ್ಲಿದೆ. That is why I have made a statement ಮತ್ತು ಸಂಬಂಧಪಟ್ಟ ಸಚಿವರು ಕೂಡ ಹೇಳಿದ್ದಾರೆ. ನಾವು ಪಾಲಿಸಿಯಾಗಿ ಹೇಳುತ್ತಿದ್ದೇವೆ. ಶುಗರ್ ಫ್ಯಾಕ್ಟರಿಗಳನ್ನು ಜಾಸ್ತಿ ಮಾಡಬೇಕು ರೈತರಿಗೆ ಅನುವು ಮಾಡಿಕೊಡಬೇಕು. ಇನ್ನೊಂದು ವಿಚಾರ ಏನೆಂದರೆ ಮೊಲಾಸಿಸ್ ಖರ್ಚಾಗಲಿಕ್ಕೆ ಅವಕಾಶ ಮಾಡಿಕೊಡುವುದರಿಂದ ರೈತರು ಏನು ಕಬ್ಬು ಬೆಳೆಯುತ್ತಾರೆ ಅವರಿಗೆ ಶುಗರ್ ಕೇನ್ ರೇಟು ಏನು ಜಾಸ್ತಿ ಫಿಕ್ಸ್ ಮಾಡುತ್ತಾರಲ್ಲಾ, ಇದೂ ಕೂಡ ಒಂದು ಕಾಂಪ್ಪೋನೆಂಟ್ ಇದನ್ನು ತಾವು ಮರೆಯುವ ಹಾಗೆ ಇಲ್ಲ. ಸಪೋಸ್ ಈ ಮೊಲಾಸಿಸ್ ವೇಸ್ಟ್ ಆಗಿ ಬಿಟ್ಟುಬಿಟ್ಟರೆ, ಶುಗರ್‌ಫ್ಯಾಕ್ಟರಿ ಓನರ್ಸ್ ಈ ಮೊಲಾಸಿಸ್ ರೇಟನ್ನು ತೆಗೆದುಕೊಂಡು ಹೋಗಿ ನಿಮ್ಮ ಶುಗರ್ ಕೇನ್ ರೇಟಿಗೆ ಅದನ್ನು ಸೇರಿಸುವುದಿಲ್ಲ. ಅದು ನಿಮಗೆ ಗೊತ್ತಿದೆ. ನಾವು ಎಷ್ಟೋಸಾರಿ ಚರ್ಚೆ ಮಾಡಿದ್ದೇವೆ. ಈ ದೃಷ್ಟಿಯಿಂದ ಇದೂ ಕೂಡ One of the component one of the element ನೀವು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಯಾವಾಗಲೂ ಈ · ಮೊಲಾಸಿಸ್‌ನ್ನು ಆದಷ್ಟು ಶೀಘ್ರವಾಗಿ ಖರ್ಚು ಆಗಲಿಕ್ಕೆ ಬಿಟ್ಟರೆ, ಶುಗರ್ ಫ್ಯಾಕ್ಟರಿ ಕೂಡ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಇದನ್ನು ಮಾಡಬೇಕಾಗುತ್ತದೆ. ಅನಂತರ Proposed new sugar factories hage necessitated to prepare and fully utilise molasses available, then generate more employment and create exonomic activity in the State ನಾವು ಅದಕ್ಕೋಸ್ಕರ ಈ ಕೆಲಸ ಮಾಡಬೇಕಾಗುತ್ತದೆ. Distillery licences ನಾವು ಕೊಡಬೇಕಾಗುತ್ತದೆ - yes

We have given....

ಇನ್ನೂ ಡಿಸ್ಟಿಲರಿ ಲೈಸನ್ಸ್ ಕೊಡತಕ್ಕಂಥ ಸಂದರ್ಭಕಂಡು ಬಂದರೆ ಸಕಾರಣ ಕಂಡುಬಂದರೆ ಇನ್ನೂಸ್ವಲ್ಪ ಕೊಡುವುದಕ್ಕೂ ಕೂಡ ನಾವು ಹಿಂದೇಟು ಹಾಕುವುದಿಲ್ಲ, let me be plain to you

ಏಕೆಂದರೆ ನಾಳೆ ಮೊಲ್ಯಾಸಿಸ್‌ನ್ನು ವೇಸ್ಟ್ ಮಾಡಿಕೊಂಡು ನಾವು ಇನ್ನೊಬ್ಬರಿಗೆ ಕೊಡುವುದಿಲ್ಲ. ಆದರೆ ಅದನ್ನು ಕೊಡುವಾಗ ಕಾನೂನು ಪ್ರಕಾರ ಇರಬೇಕು ಸರಿಯಾಗಿರಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಇನ್ನೊಂದು ವಿಚಾರ ಇದೆ. ಮೊಲಾಸಿಸ್ ಪ್ರೊಡಕ್ಷನ್ ಬಗ್ಗೆ ಹೇಳುವುದಾದರೆ, Capacity of existing distilleries and licenceing of sugar factories ನಮ್ಮ ಹತ್ತಿರ ಎಷ್ಟಿದೆ ಎಂದರೆ ಸುಮಾರು 7.80 ಲಕ್ಷಟನ್ ಮಾತ್ರ ಇದೆ. ಈ ಅಂಕಿಅಂಶಗಳು ಕೂಡ ತಮ್ಮ ಗಮನದಲ್ಲಿದ್ದರೆ ಬಹಳ ಒಳ್ಳೆಯದು. present requirement of distilleries it is only 5,10,000 tons. ಇನ್ನೂ 2 ಲಕ್ಷ ಟನ್ ಅರೆಯತಕ್ಕದ್ದು ವೇಸ್ಟ್ ಆಗಿ ಹೊರಟು ಹೋಗುತ್ತಿದೆ. ಅಲ್ಲಿಗೆ ಸರ್ಪ್ಲೆಸ್ 2.70 ಲಕ್ಷ ಟನ್ ಆಯಿತು. ಒಂದು ಡಿಸ್ಟಿಲರಿಗೆ 20 ಸಾವಿರ ಟನ್ ಬೇಕಾಗುತ್ತದೆ ಎಂಬುದನ್ನು ನಾವ್ಯಾರೂ ಮರೆಯಬಾರದು. ಇದೇ ಸಂಧರ್ಬದಲ್ಲಿ the formula worked out to ensure atleast one distillery absorb molasses produced by one sugar factory in the years to come is 20,000 tons. ......

...... ಎಂದು ನಾನು ಹೇಳಿದ್ದೇನೆ. ಇದರಲ್ಲಿ ನಾವು ಲೈಸೆನ್ಸ್ ಕೊಡುವುದಕ್ಕೆ ಕಾರಣ ಏನು ಎಂಬುದನ್ನೂ ಕೂಡ ನಾನು ಹೇಳುತ್ತಿದ್ದೇನೆ. ತಮ್ಮ ಕಾಲದಲ್ಲಿ ಎಷ್ಟು ಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ಒಂದು ಪಟ್ಟಿಯನ್ನು ಹೇಳುತ್ತೇನೆ. ನೀವು

ಡಿಸ್ಟಿಲರೀಸ್‌ಗೆ ಲೈಸೆನ್ಸ್‌ಗೆ ಕೊಟ್ಟಿಲ್ಲ ಎಂದು ಭಾವಿಸುತ್ತೇನೆ. ಗ್ರಾನೈಟ್ಸ್ ಬಗ್ಗೆ ಹೇಳಿದ್ದಾರೆ. ಡಿಸ್ಟಿಲರೀಸ್ ಬಗ್ಗೆ ಹೇಳರತಕ್ಕದ್ದು ನನಗೆ ಗೊತ್ತಿಲ್ಲ...

ಶ್ರೀ ಆರ್.ಎಲ್. ಜಾಲಪ್ಪ : ಫೆನ್ನಿಗೆ ಡಿಸ್ಟಿಲರಿ ಲೈಸೆನ್ಸ್ ಕೊಟ್ಟಿದ್ದೇವೆ. ಅದು ನಾನ್-ಮೊಲ್ಯಾಸಿಸ್ ಬೇಸ್ಡ್. ಇದು ನೀವು ಕೊಟ್ಟಿರತಕ್ಕದ್ದು ಮಾಲ್ಯಾಸಿಸ್ ಬೇಸ್ಡ್ ಎಂದು ಹೇಳಿದ್ದುದು.

ಶ್ರೀ ಹೆಚ್. ಏಕಾಂತಯ್ಯ : ತಾವು ಅನುಮತಿಯನ್ನು ಕೊಟ್ಟರೆ ನಾವು ಒಂದು ಮಾತನ್ನು ಹೇಳುತ್ತೇನೆ. ಕ್ಲಾರಿಫೈ ಮಾಡುವುದಕ್ಕೆ ತಮಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನೀವು ಡಿಸ್ಟಿಲರೀಸ್‌ಗೆ ಲೈಸನ್ಸ್ ಕೊಟ್ಟಿದ್ದು ತಪ್ಪು ಅಥವಾ ಸರಿ ಎಂದು ನಾನು ಹೇಳುವುದಿಲ್ಲ. ತಾವು ಏನು ಡಿಸ್ಟಿಲರಿಗಳನ್ನು ಕೊಟ್ಟಿದ್ದೀರಿ ಅದನ್ನು ಕಾನೂನು ಬಾಹಿರವಾಗಿ ಕೊಟ್ಟಿದ್ದೀರಿ. ಇದು ಒಂದನೆಯದು. ಇನ್ನು ಎರಡನೆಯದಾಗಿ, ತಮ್ಮ ಸರ್ಕಾರದ ಅಂಕಿಅಂಶಗಳ ಪ್ರಕಾರ ಮೊಲ್ಯಾಸಿಸ್ ಉತ್ಪಾದನೆ ಇಲ್ಲ ಎನ್ನತಕ್ಕ ಮಾತನ್ನು ನಾನು ರುಜುವಾತು ಮಾಡಿದ್ದೇನೆ. ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಮೊಲ್ಯಾಸಿಸ್ ವಿಚಾರದಲ್ಲಿ ನಾನು ಈಗಾಗಲೇ ಅಂಕಿಅಂಶಗಳನ್ನು ಕೊಟ್ಟಿದ್ದೇನೆ, ನಿಮಗೆ ಉತ್ತರವನ್ನೂ ಕೊಟ್ಟು ಮುಗಿಸಿದ್ದೇನೆ ಎಂದು ನಾನು ಭಾವಿಸಿದ್ದೇನೆ. ಅದನ್ನೇ ಮತ್ತೆ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಮೊಲ್ಯಾಸಿಸ್ ಬೇಸ್ಡ್ ಡಿಸ್ಟಿಲರಿ ಲೈಸನ್ಸ್‌ನ್ನು ತಾವು ಕೊಟ್ಟಿಲ್ಲವೆಂದು -ಹೇಳುತ್ತಿದ್ದೀರಿ

SRI H. EKANTHAIAH : We never said so....

ಶ್ರೀ ಎಸ್. ಬಂಗಾರಪ್ಪ : ತಾವು ಹಾಗೆ ಹೇಳಿದರೆ ಬಹಳ ಸಂತೋಷ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸ್ವಾಮಿ, ನನ್ನ ಸಲುವಾಗಿ ತಾವು ಸ್ವಲ್ಪ ಶ್ರಮ ವಹಿಸಬೇಕು. ಚರ್ಚೆಯ ನಡುವೆ ನೀವು ಕೊಟ್ಟಿದ್ದೀರಿ, ನೀವು ಕೊಟ್ಟಿದ್ದೀರಿ ಎಂದು ಸರಾಸಗಟಾಗಿ ಹೇಳುತ್ತಿದ್ದೀರಿ. ಇದು ಜನತಾದಳ ಸರ್ಕಾರದವರು ಕೊಟ್ಟಿದ್ದುದು ಎಂದು ತಾವು ಹೇಳಿದರೆ ನಮಗೆ ಸ್ವಲ್ಪ ಸಮಾಧಾನವಾಗುತ್ತದೆ.

ಶ್ರೀ ಎ. ಕೃಷ್ಣಪ್ಪ : ಮೊದಲು ಇದ್ದದ್ದೇ ಜನತಾದಳ. ಬೇರೆ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸಾಧ್ಯವಿದ್ದರೆ, ಜನರ ಒಪ್ಪಿಗೆ ಇದ್ದರೆ ಈ ರೀತಿಯ ಒಂದು ಅವಕಾಶ ಅವರಿಗೂ ಸಿಕ್ಕಲಿ ಎಂದು ನಮ್ಮ ಆಸೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ನಾವು ಮಾಡಿಲ್ಲದ ಕೆಲಸವನ್ನು ನಮ್ಮ ಮೇಲೆ ಹೇಳಿದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ : ನೀವು ಎಂದರೆ, ಸಂಬಂಧ ಇಲ್ಲದವರನ್ನು ಬಿಟ್ಟು ಎಂದು ತಾವು ತಿಳಿದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಾವು ಕುಡಿದೂ ಇಲ್ಲ, ಡಿಸ್ಟಿಲರಿ ಮಾಡಿಯೂ ಇಲ್ಲ. ಆ ಪಾಪಕ್ಕೆ ನಮ್ಮನ್ನು ಏತಕ್ಕೆ ಸಿಕ್ಕಿಸುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಬೇರೆಯದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ ; ಇಲ್ಲಿ ಪ್ರಶ್ನೆ ಇರತಕ್ಕದ್ದು, ನೀವು ಎಷ್ಟು ಹೊಡೆದಿರಿ ಎಂದರೆ ನೀವು ಹೊಡೆದಿರಲಿಲ್ಲವೆ ಎಂದು ಹೇಳತಕ್ಕದ್ದು ಸರಿಯಲ್ಲ. ನೀವು ಏನು ಮಾಡಿದಿರಿ ಎಂದರೆ ನೀವು ಮಾಡಿರಲಿಲ್ಲವೆ ಎಂದು ಹೇಳಬಾರದು. ಆರೀತಿಯ ಉತ್ತರವನ್ನು ಜನರು ತಮ್ಮಿಂದ ನಿರೀಕ್ಷೆ ಮಾಡುತ್ತಾರೆ, ನಾವು ನಿರೀಕ್ಷೆ ಮಾಡುತ್ತವೆ.

ಶ್ರೀ ಎಸ್. ಬಂಗಾರಪ್ಪ : ಆ ರೀತಿ ಅಲ್ಲ, ಆರೀತಿಯ ಆರ್ಗ್ಯೂಮೆಂಟ್

ಮಾಡುತ್ತಾ ಹೋದರೆ ಹೇಗೆ?

ಮಾನ್ಯ ಅಧ್ಯಕ್ಷರೇ, ಸ್ವಲ್ಪ ಅಂಕಿಅಂಶಗಳ ಬಗ್ಗೆ ತಾವು ಗಮನ ಇಟ್ಟರೆ ಬಹಳ ಒಳ್ಳೆಯದು. 1983 ರಿಂದ 1989 ನಿಮ್ಮ ಕಾಲದಲ್ಲಿ ಅಂದ ತಕ್ಷಣ ನಿಮ್ಮನ್ನು ಬಿಟ್ಟು ಎಂದು ನಾನು ಹೇಳಿದ್ದೇನೆ. ಇದು ಡಿಸ್ಟಿಲರಿ ಲೈಸೆನ್ಸ್‌ಗಳನ್ನು ಕೊಟ್ಟಿರುವದು ಪಟ್ಟಿ. 1983 ರಿಂದ 89ರವರೆಗೆ ತಾವು ಅಧಿಕಾರದಲ್ಲಿ ಇದ್ದಂಥ ಕಾಲದಲ್ಲಿ ಅಂದರೆ ಜನತಾದಳದ ಮಿತ್ರರು ಈ ಒಂದು ಅವಧಿಯಲ್ಲಿ a total of 47 distilleries have been sanctioned which includes 4 ಮೊಲಾಸಿಸ್ ಡಿಸ್ಟಲರೀಸ್ ಆಮೇಲೆ 14 ಫೆನ್ನಿ ಡಿಸ್ಟಿಲರಿ 14 ಬ್ರಿವರಿ ನಾನ್ ಮೊಲಾಸಿಸ್ ಬೇಸ್ಡ್ ಡಿಸ್ಟಿಲರೀಸ್ and the balance other types of distilleries. ನಿಮ್ಮ ಕಾಲದಲ್ಲಿ ಒಟ್ಟು 47 ಕ್ಕೆ ಅನುಮತಿ ಕೊಟ್ಟಿದ್ದೀರಿ. ಪಟ್ಟಿ ಬೇಕೆಂದರೆ ಹೆಸರು ಇಲ್ಲಿ ಇದೆ. ಅದನ್ನು ಓದಬೇಕೆಂದರೆ ಪಟ್ಟಿಯಲ್ಲಿರುವ ಹೆಸರುಗಳನ್ನು ಓದಿಬಿಡುತ್ತೇನೆ. ನಾನು ರೆಡಿ ಇದ್ದೇನೆ.

SRI H. EKANTHAIAH : We never denied it ಇಲ್ಲಿ ಪಾಯಿಂಟ್ ಏನಿದೆ ಎಂದರೆ ನೀವು ಕಾನೂನು ಬಾಹಿರವಾಗಿ ಕೊಟ್ಟಿದ್ದೀರಿ. ಮೊಲಾಸಿಸ್ ಇಲ್ಲದೆ ಕೊಟ್ಟಿದ್ದೀರಿ, ಅವರಿಗೆ ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದ ಕೊಟ್ಟಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬೇಕೆಂದು ಕೇಳಿದ್ದರಿಂದ ನಾನು ಹೇಳುತ್ತಿದ್ದೇನೆ. Distillery include all these things including Fenny, including Botling.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಾಟ್ಲಿಂಗ್ ಬಗ್ಗೆ ಅದೆಲ್ಲ ಗೊತ್ತಿರುವ ವಿಚಾರ. ನೀವು ಅದನ್ನು ಇಲ್ಲಿ ಏತಕ್ಕೆ ಹೇಳುತ್ತಿರಿ. bottling is different from distillery ಎನ್ನುವುದು ನಿಮಗೆ ಗೊತ್ತಿದೆ. ಮೊಲಾಸಿಸ್ ಬೇಸ್ಡ್ ಯಾವುದು, ನಾನ್ ಮೊಲಾಸಿಸ್ ಯಾವುದು ಎನ್ನುವುದು ಸಹಿತ ನಿಮಗೆ ಗೊತ್ತಿದೆ. ಪೆನ್ನಿ ಡಿಸ್ಟಿಲರಿಗೆ ಲೈಸೆನ್ಸ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೇವಲ್ಲ. ನಾವು ಅಬ್ಜಕ್ಷನ್ ರೈಸ್ ಮಾಡಿರುವುದು ನೀವು ಲೈಸೆನ್ಸ್‌ಗಳನ್ನು ಕೊಟ್ಟಿರುವುದರ ಬಗ್ಗೆ ಅಲ್ಲ. The method in which you have selected..

ಶ್ರೀ ಎಸ್. ಬಂಗಾರಪ್ಪ : ಮೆತೆಡ್ ಹೇಳುತ್ತೇನೆ. ನಮ್ಮ ಮೆತೆಡ್ ನಾನು ಹೇಳುತ್ತೇನೆ, ಬಹಳ ಸಂತೋಷ ಈ ಪ್ರಶ್ನೆಯನ್ನು ನೆನಪು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳು. ನಾನು ಮೆತೆಡ್ ಹೇಳುತ್ತೇನೆ. ನಿಮ್ಮ ಮೆತೆಡ್ ನನ್ನ ಹತ್ತಿರವಿದೆ. ಅದನ್ನೂ ಕೂಡ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇನ್‌ಕ್ಲೂಡಿಂಗ್ ಬಾಟ್ಲಿಂಗ್ ಅಂದರೆ ಇದೂ ಜೊತೆಗೆ ಬರುತ್ತದಲ್ಲ ಎನ್ನುವ ದೃಷ್ಟಿಯಿಂದ incidentally I mentioned.

ಇದರಲ್ಲಿ ಡಿಸ್ಟಿಲರಿ ಲೈಸೆನ್ಸ್‌ಗಳನ್ನು ಕೊಟ್ಟಿದ್ದರಲ್ಲಿ ಮೊಲಾಸಿಸ್‌ಬೇಸ್ಡ್ ಎಷ್ಟು ಯಾರು ಅವರ ಹೆಸರುಬೇಕೆಂದು ಕೇಳಿದರು. ನಾವು ಅವರು ಹೆಸರನ್ನು ಮೊಲಾಸಿಸ್ ಬೇಸ್ಡ್ ಚಾಮುಂಡಿ ಡಿಸ್ಟಿಲರಿ ಪ್ರೈವೇಟ್ ಲಿಮಿಟೆಡ್ ಹೊಳೆ ಸಾಲು ವಿಲೇಜ್ ಟಿ.ಎನ್.ಪುರ ಮೈಸೂರು ಡಿಸ್ಟ್ರಿಕ್ಟ್ ಅಮೃತ್ ಡಿಸ್ಟಿಲರಿ, ಇದು ನಿಮ್ಮ ಕಾಲದಲ್ಲಿ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಮುಖ್ಯಮಂತ್ರಿಗಳೇ ಬಹುಶಃ ಒಟ್ಟು ಎಷ್ಟಿದೆ ಎಂದು ಏನಾದರೂ ಫಿಗರ್ಸ್ ಕೊಟ್ಟಿರಬಹುದೋ ಏನೋ ನೋಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೋಡಿ ಕೊಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಈಲ್ಲಾದರೆ ಹೇಳುತ್ತೇನೆ. ತಾವು ಉತ್ತರ ಕೊಟ್ಟಮೇಲೆ ನೋಕಾನ್‌ಫಿಡೆನ್ಶಿಯಲ್ ಮೋಷನ್ ಮೇಲೆ

ಮತ್ತೆ ಡಿಸ್‌ಕಷನ್ ಪ್ರಾರಂಭವಾಗುತ್ತದೆ. ಈ ರೀತಿ ಬೇರೆ ಬೇರೆ ಹೊಸ ಸಂಗತಿಗಳು ಹೇಳುತ್ತಿರುವುದರಿಂದ ಮೊದಲೆ ಡಿಸ್ಕಷನ್‌ಗೆ ಅವಕಾಶಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಭಾಷಣಮಾಡಿ ತಲೆಮೇಲೆ ಗೂಬೆ ಕೂಡಿಸಿಬಿಟ್ಟರೆ ನಾಳೆ ಜನರು ಪ್ರತಿಕೆಯಲ್ಲಿ ಓದಿದರೆ ತಪ್ಪು ತಿಳಿದುಕೊಳ್ಳುತ್ತಾರೆ. ಅದಕ್ಕಾಗಿ ನಿಮ್ಮ ಕಾಲದಲ್ಲಿ ನೀವು ಏನು ಮಾಡಿದಿರಿ ಎನ್ನುವುದನ್ನು ನಾನು ಇಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಪತ್ರಿಕೆಗಳು ಎಂದರೆ ತಪ್ಪುತಿಳಿದುಕೊಳ್ಳುವುದಿಲ್ಲವಲ್ಲ ನಿಮಗೆ ಪತ್ರಿಕೆಗಳೆಂದರೆ ನಂಬಿಕೆಯೇ ಇಲ್ಲವಲ್ಲ. ಪತ್ರಿಕೆಯಲ್ಲಿ ಬರುವ ಬಗ್ಗೆ ನಿಮಗೆ ನಂಬಿಕೆ ಇಲ್ಲವಲ್ಲ.

ಶ್ರೀ ಎಸ್. ಬಂಗಾರಪ್ಪ : ನಂಬಿಕೆ ಇಲ್ಲವೆಂದು ಯಾರು ಹೇಳಿದರು. ಕೆಲವು ತಪ್ಪು ಬರೆಯುವವರ ಬಗ್ಗೆ ನಮಗೆ ನಂಬಿಕೆ ಇಲ್ಲ. ಸರಿಯಾಗಿ ಬರೆಯಬೇಕು. ಸರಿಯಾಗಿ ಬರೆಯುವವರ ಬಗ್ಗೆ ನಂಬಿಕೆ ಇದೆ ಎಂದು ಹೇಳಿದ್ದೇವೆ. ನನ್ನ ಬಾಷಣವನ್ನು ಸರಿಯಾಗಿ ಅರ್ಥಮಾಡಿಕೊಂಡು ಸ್ವಲ್ಪ ದೇಶಕ್ಕೂ ಒಳ್ಳೆಯದು ನಿಮಗೂ ಒಳ್ಳೆಯದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಪತ್ರಿಕೆಗಳಲ್ಲಿ ಬರುವುದು ಬ್ರಹ್ಮಲಿಪಿ ಏನಲ್ಲ.

ಶ್ರೀ ಎಸ್. ಬಂಗಾರಪ್ಪ : ನಾನು ಅದನ್ನೇ ಹೇಳುವುದು. ಯಾವ ವರ್ಷದ್ದು ಎಂದು ಹೇಳುತ್ತಿದ್ದೇನೆ. ಆ ವರ್ಷವೆಂದರೆ ನಿಮ್ಮ ಕಾಲದ್ದು ಆಗುತ್ತದೆ. This is during 1986-87 to 1989-90 ಅದು ನಿಮ್ಮಕಾಲ, ನೀವು ಅಧಿಕಾರದಲ್ಲಿದ್ದಂಥ ಕಾಲ Goverment have issued 47 distillery licences to private parties to produce various types of products. Out of them the following 4 distilleries are producing Alcohol out of molasses.

1)ಚಾಮುಂಡಿ ಡಿಸ್ಟಿಲರಿ ಪ್ರವೇಟ್ (ಲಿ) ಹೊಳೆಸಾಲು ಮೈಸೂರು ಜಿಲ್ಲೆ.

2) ಅಮೃತ ಡಿಸ್ಟಿಲರಿ, ಕಂಬಿಪೂರ್, ಬೆಂಗಳೂರು,

3) ಸೌಮ್ಯ ಡಿಸ್ಟಿಲರೀಸ್ ಹೊಳೆನರಸೀಪುರ ತಾಲ್ಲೂಕು ಹಾಸನ ಜಿಲ್ಲೆ.

SRI P.G.R. SINDHYA : No, I Challenge this, they have not issued under.....

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸರಿಯಾದ ಮಾಹಿತಿಯನ್ನು ಕೊಡಬೇಕು. ಇಲ್ಲವೆಂದರೆ ಈ ಸದನವನ್ನು ತಪ್ಪು ದಾರಿಗೆ ಎಳೆದಂತಾಗುತ್ತದೆ.

11-45 ಪಿ.ಎಂ.

ಶ್ರೀ ಬನ್ನಿಕೋಡ್ : ನೀವು ಹೇಳತಕ್ಕದ್ದು ಸರಿಯೋ ತಪ್ಪೋ ಎಂದು ನಿರ್ಧಾರವಾಗಬೇಕಲ್ಲ. ಲೈಸೆನ್ಸ್ ಕೊಟ್ಟಿದ್ದೆಲ್ಲ ಸರಿಪಡಿಸಬೇಕೆಂದು ಹೇಳಿ....

ಶ್ರೀ ಎಸ್. ಬಂಗಾರಪ್ಪ : ಅದು ಮಿನಗೆ ಗೊತ್ತಿಲ್ಲ. ಸಿಂಧ್ಯಾರವರಿಗೆ ಗೊತ್ತಿದೆ. ಆಮೇಲೆ ಸೌಮ್ಯ ಡಿಸ್ಟಿಲರೀಸ್ ಹೊಳೆನರಸೀಪುರ ತಾಲ್ಲೂಕು ಹಾಸನ ಜಿಲ್ಲೆ

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧಿಕಾರಿಗಳು ಬೇಕು ಎಂದು ಆ ರೀತಿ ಉತ್ತರ ಕೊಡಿಸುತ್ತಿದ್ದಾರೆಯೇ.

SRI P.G.R. SINDHYA : You are referring to renewals.....

SRI.S.BANGARAPPA : If it is renewals I stand corrected. I have got information. It is only fresh licences not renewals.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನ ಕಡೆಗೆ ನೀವು ನಿಮ್ಮ ಸರ್ಕಾರ ಎಂದು ತೋರಿಸುತ್ತಿದ್ದೀರಲ್ಲ ಏನು ಕಾರಣ?

ಶ್ರೀ ಎಸ್. ಬಂಗಾರಪ್ಪ : ಇನ್ನು ಯಾರದ್ದು?

ಶ್ರೀ ಡಿ.ಬಿ. ಚಂದ್ರೇಗೌಡ : ನಾಳೆ ದಿವಸ ಅಧ್ಯಕ್ಷರು, ಆ ಕಡೆ ಕುಳಿತಾಗ ನಿಮ್ಮ ಸರ್ಕಾರ ನಿಮ್ಮ ಸರ್ಕಾರ ಎಂದರೆ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಲ್ಲ ನಮಗೂ ಗೊತ್ತಿದೆ. You have referred to certain things of our Government. I was part and parcel of then Cabinet. Let there be a judicial enquiry. Now, We are questioning the method of licences issued by the present Government. As far as our Government doings we are prepared to defend. Let there be a enquiry. I am not ashmed of it. I am prepared to defend it....

ಶ್ರೀ ಎಸ್. ಬಂಗಾರಪ್ಪ : ಸ್ವಲ್ಪ ತಾಳಿ, ರಿನ್ಯುಯಲ್ಸ್ ಯಾವುದೂ ಕೊಟ್ಟಿಲ್ಲವೆಂದು ಹೇಳಿದಿರಿ. I have got the information. This pertains to M/s. Soumya Enterprises Distilleries, Bangalore. This is a fresh application. ಇದನ್ನು ನಿಮ್ಮ ಹತ್ತಿರ ಕಳುಹಿಸಿಕೊಡುತ್ತೇನೆ. ಬೇಕಾದರೆ ಓದಿನೋಡಿ. The letter says 'I am directed to state that M/s Soumya Private Limited have represented to the Govt. that they have obtained the licening from the Director...... ಅಂದರೆ ಅದು ಪ್ರೊಸಿಜರಲ್ matter.

(ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇದು ತಾರೀಖು 18-9-87 ಫ್ರೆಷ್ ಅಪ್ಲಿಕೇಷನ್. ಇದು ನಂ.1 ಆಮೇಲೆ ನಾವು ಯಾವ ಲೈಸೆನ್ಸ್‌ಗಳನ್ನು ಕೊಟ್ಟಿದ್ದೇವೆಂಬುದಕ್ಕೆ ಇಲ್ಲಿ ಎರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪ್ರೊಸಿಜರ್ ಫಾಲೋ ಮಾಡತಕ್ಕ ವಿಚಾರದಲ್ಲಿ ತಾವು ಮಾತನಾಡಿದ್ದೀರಿ. ಪ್ರಿಸ್ಕ್ರೈಬ್ಡ್ ಫಾರಂನಲ್ಲಿ ಅಪ್ಲಿಕೇಷನ್ ಕೊಡುವುದು ಲೈಸೆನ್ಸ್ ಫೀ ಕಟ್ಟುವುದು ಆ ವಿವರಗಳಿಗೆ ನಾನು ಹೋಗುವುದಿಲ್ಲ. ಯಾರು ಆ ರೀತಿ ಅರ್ಜಿ ಕೊಟ್ಟಿದ್ದಾರೆ ಅವರಿಗೆ ಮಾತ್ರ ಕಾನೂನು ಪ್ರಕಾರ ಮಾಡಿದ್ದೇವೆ. ತಮ್ಮ ಕಾಲದಲ್ಲಿ ಹೇಗೆ ಕೊಟ್ಟಿದ್ದೀರಿ ಎಂದರೆ ತಮ್ಮ ಕಾಲ ಎನ್ನುವುದು ತಾಪತ್ರಯದ ಕೆಲಸ. ಇದು ಮೊಲಾಸಿಸ್ ಬೇಸ್ಡ್ ಡಿಸ್ಟಿಲರಿ Licence sanction representation given to the Minister of Excise without prescribed application, prescribed form ಇಲ್ಲ licence fee ಇಲ್ಲ, ಆಮೇಲೆ ಬ್ಲೂಪ್ರಿಂಟ್ ಇಲ್ಲ, ಎಕ್ಸೈಸ್ ಕಮಿಷನರ್ ನಾಲೆಜ್‌ಗೆ ಬಂದಿಲ್ಲ. ಡೆಪ್ಯೂಟಿ ಕಮೀಷನರ್ ಅವರಿಂದ ರೆಕಮೆಂಡ್ ಆಗಿ ಬರಬೇಕೆಂಬುದು ಕಾನೂನು ವಿಚಾರ. ಯಾವುದೇ ಲೈಸೆನ್ಸ್ ಕೊಡಬೇಕಾದರೆ ಅವರ ರೆಕಮೆಂಡೇಷನ್ ಬೇಕು. ಏನೂ ಇಲ್ಲದೆ ಬೃಂದಾವನ್ ಡಿಸ್ಟಿಲರೀಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಏನಿದೆ ಇದರಲ್ಲಿ ಏನು ಮಾಡಿದ್ದಾರೆ ಅಂದರೆ ಎಕ್ಸೈಜ್ ಕಮೀಷನರ್ ಏನು ನೋಟ್ ಹಾಕಿದ್ದಾರೆ ಎಂದರೆ we have not recommended this case. Then, how Government can approved this?... ಎಂದು ಅಪ್ಲಿಕೇಷನ್ ಮೇಲೆ ಬರೆದಿದ್ದಾರೆ.

ನಾನು ಕೇಳುತಿದ್ದೇನೆ ಇವತ್ತು.....

(ಆಡಳಿತ ಪಕ್ಷದ ಸದಸ್ಯರು ಶೇಮ್ ಶೇಮ್ ಎಂದು ಕೂಗುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ಅವಿಶ್ವಾಸ ನಿರ್ಣಯವನ್ನು ಜನತಾ ದಳ ಸರ್ಕಾರದ ಮೇಲೆ ತಂದಿಲ್ಲ. ಇವತ್ತು ಅವಿಶ್ವಾಸ ನಿರ್ಣಯವನ್ನು ತಂದಿರುವುದು ನಿಮ್ಮ ಸರ್ಕಾರದ ಮೇಲೆ ಇವತ್ತು ಯಾವ ಉತ್ತರ ಕೊಡುತ್ತಿದ್ದೀರಿ? ಜನತಾ ದಳ ಸರ್ಕಾರದ ಮೇಲೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಣಿಯವರೆ, ಅವಿಶ್ವಾಸ ನಿರ್ಣಯವನ್ನು ಈ ಕಡೆ ಕುಳಿತಾಗ ಜನತಾ ದಳದ ಸರ್ಕಾರದ ಮೇಲೆ ತರುವ ಧೈರ್ಯವನ್ನು ಸನ್ಮಾನ್ಯ ಬಂಗಾರಪ್ಪನವರು ಮಾಡಲಿಲ್ಲ. ನಿಮ್ಮ ಸರ್ಕಾರ ಯಾವ ಕಾನೂನನ್ನು ಬದಿಗೊತ್ತಿ ಕೆಲಸ ಮಾಡಿದೆ, ಅದರ ಬಗ್ಗೆ ಉತ್ತರ ಕೊಡಿ.

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ.....

(ಗೊಂದಲ)

ಉಪಾಧ್ಯಕ್ಷರು : ಶ್ರೀಯುತ ಸಿಂಧ್ಯಾ ಅವರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ.....

ಶ್ರೀ ಆರ್. ಎನ್. ನಾಯಕ್ : ನಿಮ್ಮ ಸರ್ಕಾರ....

ಶ್ರೀ ಪಿ.ಜಿ. ಆರ್. ಸಿಂಧ್ಯ : ಆಯಿತು. ನನ್ನ ಸರ್ಕಾರ ಎಂದು ನಾನೇ ಓನ್ ಮಾಡುತ್ತಿದ್ದೀನಲ್ಲ ಸ್ವಾಮಿ. ಇನ್ನೇನು ಹೇಳಬೇಕು ನಾವು? ಅವರದು ಇವರದು ಎಂದು ಅವರ ಕಡೆ ತೋರಿಸಿಲ್ಲ. I have done it, ನಾನು ಮಾಡಿದ್ದೇನೆ, you charge me and hang me ಎಂದು ಹೇಳುತ್ತಿದ್ದೇನೆ. ಇನ್ನೇನು ಹೇಳಬೇಕು ನಾನು. If you have got that courage and convication. You never had that moral courage to raise this when you were in the Opposition. You did not bring this to the notice of the House. What made you to raise.

(ಗೊಂದಲ)

SRI P.G.R. SINDHYA : Please tolerate me. ಮಾನ್ಯ ಉಪಾಧ್ಯಕ್ಷಿಣಿಯವರೆ, ಅವರು ಏನು ಹೇಳಿದರೂ ನಾನು ಕೇಳುವುದಿಲ್ಲ. ನಿಮಗೆ ನಾನು ಹೇಳುತ್ತೇನೆ. ಮಾನ್ಯ ಸಭಾನಾಯಕರಿಗೆ ನಾನು ಕೇಳುವುದೇನೆಂದರೆ ನೀವು ಅಡ್ವಾಂಟೇಜ್ ಪೊಸಿಷನಲ್ಲಿದ್ದೀರಿ. You are the Cheif Minister. You have got all the records. ಅದನ್ನು ತೆಗೆದು ಆ ಸೆಕ್ರೆಟರಿ ಹೀಗೆ ಹೇಳಿದರು. ಕಮಿಷನರ್ ಹೀಗೆ ಹೇಳಿದರು ಎಂದು ನೀವು ಹೇಳಬಹುದು. ಹೇಳಿರಲಿಲ್ಲ ಎಂದು ನಮಗೆ ಹೇಳುವುದಕ್ಕೆ ಫೈಲ್ಸ್ ನಮಗೆ ಕೊಡುತ್ತೀರಾ? Are you prepared to place all the files of our time and your time before this House? The question is that. I am not culprit.

(ಗೊಂದಲ)

ಶ್ರೀ ಎಚ್. ಏಕಾಂತಯ್ಯ : ಪ್ರೊಸೀಜರಲ್ಲಾಗಿ ಆಗಿನ ಸರ್ಕಾರ ತಪ್ಪು ಮಾಡಿದೆ ಎಂಬ ಮಾತನ್ನು ಹೇಳುತ್ತೀರಿ, ಅಥವಾ ಅನ್ಯಾಯ ಮಾಡಿದೆ ಎಂದು ಹೇಳುತ್ತೀರಿ. ಅದರ ಬಗ್ಗೆಯೂ ವಿಚಾರಣೆ ಆಗಲಿ, ಅದನ್ನು ಮಾಡಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಕ್ಲಾರಿಫಿಕೇಷನ್ ಇಲ್ಲೇ ಆಗಿಬಿಡಲಿ. ಏನಾಗಿದೆಯೆಂದರೆ ಇವತ್ತು ಈ ವಿಚಾರದಲ್ಲಿ ಮೊದಲೇ ಹೇಳಿದ್ದಾರೆ. ಪುನಃಪುನಃ ಅದನ್ನೇ ಹೇಳಿದ್ದೇವೆ. ನೀವು ಲೈಸೆನ್ಸ್ ಕೊಟ್ಟಿದ್ದನ್ನು ಪ್ರಶ್ನೆ ಮಾಡಿಲ್ಲ ಎಂಬುದನ್ನು ಹೇಳಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ನೀವು ಮಾಡದೇ ಇದ್ದರೂ ಬೇರೆಯವರು ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಈಲ್ಡ್ ಆಗಿದ್ದೀರಿ. Let me clarify.

ಶ್ರೀ ಎಸ್. ಬಂಗಾರಪ್ಪ : ನೀವು ಹೇಳದಿದ್ದರೂ ಬೇರೆಯವರು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ನಿಮಿಷ, ನಾನು ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ. ನಾವು ಪ್ರೊಸೀಜರ್ ಕೇಳಿದ್ದೇವೆ. ಎರಡನೆಯದು ಕೆಲವು ಕೇಸಸ್‌ನಲ್ಲಿ ಕೋರ್ಟ್ ಡೈರೆಕ್ಷನ್ ಮೇಲೆ ಕೊಟ್ಟಿದ್ದೇವೆ ಎಂದು ನೀವು ಹೇಳಿದ್ದೀರಿ. ಅದಕ್ಕಾಗಿ ನಾನು ಹೇಳಿದ್ದು ಇಲ್ಲೂ ಹೇಳಿದ್ದೀರಿ. ಅದರಲ್ಲೂ ಇದೆ ನೋಡಿ.

ಶ್ರೀ ಎಸ್. ಬಂಗಾರಪ್ಪ : ನನಗೆ ಗೊತ್ತಿಲ್ಲ. ಬೇರೆಯವರು ಹೇಳಿರಬೇಕು ಅವರಿಗೆ ಉತ್ತರ ಕೊಡುವುದು ಒಳ್ಳೆಯದು. ಮಾನ್ಯ ಏಕಾಂತಯ್ಯನವರು ಹೇಳಿರಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ನಾನು ಹೇಳಿದೆ, ಬಡಿಯುವವರು ಇದ್ದಾರೆಂದು ಬಡಿಸಿಕೊಳ್ಳುವುದಕ್ಕಾಗುತ್ತದೆಯೇ let us place the records straight. If some mistakes had been committed hang them.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಏಕಾಂತಯ್ಯನವರೆ, ದಯಮಾಡಿ ಕುಳಿತುಕೊಳ್ಳಬೇಕು. ಏಕೆಂದರೆ ಟೈಂ ಆಗಿತ್ತದೆ. ಮಾನ್ಯ ಸಭಾಧ್ಯಕ್ಷರೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಜನತಾದಳ ಸರ್ಕಾರ ಇದ್ದಾಗ ಒಂದು ಸಲಕ್ಕೆ ಒಂದು ಕೋಟಿ ರೂಪಾಯಿ ಸೋರಿಹೋಗುತ್ತಿತ್ತು ಎಂದು ಹೇಳುತ್ತಿದ್ದೆವು. ಈಗ ದಿನಕ್ಕೆ 2 ಕೋಟಿ ರೂಪಾಯಿ ಸೋರಿ ಹೋಗುತ್ತಿದೆ ಎಂದು ಹೇಳುತ್ತಿದ್ದೇವೆ. ಇದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಸುಮ್ಮನಿರಿ ನಿಮಗೆ ಅಂಕಿ ಅಂಶ ಗೊತ್ತಿಲ್ಲ. ಏನೂ ಇಲ್ಲ, ಸುಮ್ಮಸುಮ್ಮನೆ ಮಾತನಾಡುತ್ತೀರಿ. ಈಗೆಲ್ಲಾ ಅಂಕಿಅಂಶ ಇಷ್ಟು ಹೊತ್ತಿನವರೆಗೆ ಕೇಳಿದ್ದೀರಿ. ಮತ್ತೆ ಈಗ ತೆಗೆದುಕೊಂಡು ಹೋಗಿ ಏನೋ ಹೇಳುತ್ತೀರಿ.

ಮಾನ್ಯ ಸಭಾಧ್ಯಕ್ಷಿಣಿಯವರೇ, ಜನತಾದಳ ಅಧಿಕಾರದಲ್ಲಿ ಇದ್ದ ಕಾಲದಲ್ಲಿ ಯಾವ ರೀತಿ ಪ್ರೊಸೀಜರ್ ಮಾಡಿಲ್ಲವೆಂದು ಹೇಳುವುದಕ್ಕೆ ಮತ್ತೊಂದು ಉದಾಹರಣೆ ಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಗ್ರೈನೈಟ್ ಕಲ್ಲಿಗೆ ....(ಗೊಂದಲ)

ಶ್ರೀ ಎಸ್.ಬಂಗಾರಪ್ಪ : ಏಯ್ ಸುಮ್ಮನಿರಿ.....(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲಾ ಅಧಿಕಾರವನ್ನು ಗಾಳಿಗೆ ತೂರಿ..ನೈತಿಕ ಹಕ್ಕು ಇಲ್ಲ (ಗೊಂದಲ)

ಉಪಾಧ್ಯಕ್ಷರು : ಈಗ ಲೀಡರ್ ಮಾತನಾಡುತ್ತಿದ್ದಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಒಂದು ವಿಚಾರವನ್ನು ಹೇಳುತ್ತಾ ಇದ್ದೆ. ಪ್ರೊಸೀಜರ್ ಫಾಲೋ ಮಾಡದೇ ಇರತಕ್ಕ ಮತ್ತೊಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. Licence issued without

prescribed application form, without payment of licence fee, without the recommendations of the Department that means Deputy commissioner's recommendations ಇಲ್ಲ ಇದು Sri Krishna Murthy, 207, 3rd Stage, III Block West of Chord Road, Bangalore. ಇದಕ್ಕೆ ಯಾವುದೇ ಫಾರಂ ಇಲ್ಲ, ರೆಕಮಂಡೇಷನ್ ಇಲ್ಲ, ಫೀ ಇಲ್ಲ ಯಾವುದೇ ಇಲ್ಲದೇ ಮಾಡಿದ್ದಾರೆ. This is for rectified spirit. ನನಗೆ ಗೊತ್ತಿದೆ. ಇದು ಮಾನ್ಯ ಸಿಂಧ್ಯರವರಿಗೆ ಗೊತ್ತಿರಬಹುದು ನನ್ನ ಭಾವನೆ. ಇಲ್ಲಿ ಕೊಟ್ಟಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೆ

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಏಕಾಂತಯ್ಯನವರು ಹೀಗೆ ಪದೇ ಪದೇ ಎದ್ದರೆ ನಮಗೆ ಬಹಳ ಕಷ್ಟವಾಗುತ್ತದೆ. ಏಕಾಂತಯ್ಯನವರೇ ಏನು ಹೇಳಿದರು ಅಂದರೆ ಪದೇ ಪದೇ ನನಗೆ ಸಂತೋಷವಾಗಿದೆ, ನಾವೂ ಕೊಟ್ಟಿಲ್ಲವೆಂದು ಹೇಳಿಲ್ಲ ಕೊಟ್ಟಿದ್ದೇವೆ ಎಂದು ಅಡ್ಮಿಟ್ ಮಾಡಿದ್ದೀರಿ. ಬಹಳ ಸಂತೋಷ. ಆದರೆ ಬೇರೆಯವರು ಭಾಷಣ ಮಾಡಿದ್ದಾರೆ. ಸ್ವಲ್ಪ ಎಚ್ಚರ ಇರಲಿ....

ಶ್ರೀ ಹೆಚ್. ಏಕಾಂತಯ್ಯ : ನನಗೆ ಮೈಯೆಲ್ಲಾ ಎಚ್ಚರ ಇದೆ.

ಶ್ರೀ ಎಸ್. ಬಂಗಾರಪ್ಪ : ನೀವು ಕೊಟ್ಟಿದ್ದೀರೆಂದು ನಮಗೆ ಹೇಳಿದ್ದೀರಿ. ಅದಕ್ಕೆ ಉತ್ತರ ಕೊಡುವುದು ಬೇಡವೇ?

ಶ್ರೀ ಹೆಚ್. ಏಕಾಂತಯ್ಯ : ಅದಕ್ಕೆ ನಾವೂ ಕೊಟ್ಟಿದ್ದೇವೆಂದು ಹೇಳಿದರೆ, ಅದು ಉತ್ತರವಾಗುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ : ಫಾರಂ ಇಲ್ಲ, ಮತ್ತೊಂದು ಇಲ್ಲ ಎಂದು ನಿಮ್ಮ ಕಡೆಯಿಂದ ಪ್ರಸ್ತಾಪ ಆಗಿದೆ. ಅದಕ್ಕೋಸ್ಕರ ನಾನು ಹೇಳಿದೆ. ನನ್ನ ಹತ್ತಿರ ಐಎಂಎಲ್‌ದು ಲಿಸ್ಟ್ ಇದೆ. ಫೆನ್ನೀದ ಲಿಸ್ಟ್ ಇದೆ. ನಾನ್ ಮೊಲಾಸಿಸ್ ಬೇಸ್ಡ್‌ದು ದೊಡ್ಡ ಪಟ್ಟಿಯೇ ಇದೆ. ಇದು 47 ಬರುತ್ತದೆಂದು ನಾನು ಮೊದಲೇ ಹೇಳಿದೆ. ಇಷ್ಟು ಅಲ್ಲದೆ ಇನ್ನೊಂದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಸಭಾಧಕ್ಷಿಣಿಯವರೇ ರೀಟೈಲ್ ಲೈಸೆನ್ಸ್‌ನದು ರಾಶಿರಾಶಿ ಇದೆ. ಯಾರು ಭಾಷಣ ಮಾಡಿ ಅಲ್ಲಿ ಕುಳಿತುಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಏನು ಹೀಗೆ ಮಾತನಾಡುತ್ತಾರೆ? ಯಾರೋ ಏನೋ ಎಂದರೆ ಏನು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟು ಬೇಜವಾಬ್ದಾರಿಯಿಂದ ಸಭಾನಾಯಕರು ಮಾತನಾಡಬಾರದು. ಸ್ವಲ್ಪ ಎಚ್ಚರಿಕೆಯಿಂದ ಮಾತನಾಡಬೇಕಾಗಿತ್ತು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಏನು ಅವರು ನನಗೆ ಕನ್ನಡವನ್ನು ಕಲಿಸಿಕೊಡುತ್ತಾರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಜನ ನಿಮಗೆ ಹೇಗೆ ಓಟು ಕೊಟ್ಟು ಕಳುಹಿಸಿದ್ದಾರೆಯೋ ಹಾಗೆಯೇ ನಮಗೂ ಓಟು ಕೊಟ್ಟು ಕಳುಹಿಸಿದ್ದಾರೆ. ಅಷ್ಟು ಲಘುವಾಗಿ ಮಾತನಾಡಬಾರದು.

ಶ್ರೀ ಎಸ್. ಬಂಗಾರಪ್ಪ : ನಿಮಗೆ ಮಾತನಾಡಿದ್ದೇನೆಯೇ ? Have I referredyourname(pointingtoMr.Yediyurappa) ಯಾರೋ ಮಾತನಾಡುತ್ತಾರೆಂದರೆ ಮಾನ್ಯ ಸದಸ್ಯರು ಮಾತನಾಡಿದ್ದಾರೆಂದು ಅರ್ಥ.

ಶ್ರೀ ವಾಟಾಳ್ ನಾಗರಾಜ್ : ಯಾರೋ ಎಂದರೆ ಯಾರು ಸ್ವಾಮಿ? ಹೆಸರು ಹೇಳಿ.

ಉಪಾಧ್ಯಕ್ಷರು : ಯಾರೂ ಎಂದರೆ ಯಾರೋ ಮಾನ್ಯ ಸದಸ್ಯರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಬೇಗ ಕೋಪ ಬರುತ್ತದೆ. ಆದರೆ ಕೋಪಿಸಿಕೊಳ್ಳುವುದಕ್ಕೆ ಹೋಗಬೇಡಿ. ಯಾರು ಎನ್ನುವುದನ್ನು ಇಲ್ಲಿ ತಾವು ಹೇಳಿ.

ಶ್ರೀ ಎಸ್. ಬಂಗಾರಪ್ಪ : ನನಗೆ ಗೊತ್ತಿದೆ ಏತಕ್ಕೆ ಮಾತನಾಡುತ್ತಾ ಇದ್ದೀರಿ. ಎನ್ನುವುದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ನನಗೆ ಎಲ್ಲ ಅರ್ಥವಾಗುತ್ತದೆ. ಆಮೇಲೆ ಸೆಕೆಂಡ್ಸ್ ಬಗ್ಗೆ ಭಾಷಣ ಮಾಡಿದರು. ಅದಕ್ಕೆ ಉತ್ತರವನ್ನು ಈಗ ಕೊಡುತ್ತಿದ್ದೇನೆ. ದಯಮಾಡಿ ತೆಗೆದುಕೊಳ್ಳಿ. ಅವರು ದಯಮಾಡಿ ಕೊಡಿ ಅಂದರು ಇದಕ್ಕೆ ದಯಮಾಡಿ ತೆಗೆದುಕೊಳ್ಳಿ ಎಂದು ಹೇಳಿದೆ.

ಶ್ರೀ ಸಿ. ಬೈರೇಗೌಡ : ಈ ವಿಚಾರದಲ್ಲಿ ನಾನು ಮೊದಲಿನಿಂದಲೂ ಮಾತನಾಡುತ್ತಾ ಇದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ನೋಡಿದರೆ ನೀವು ಕೊಡುವ ಉತ್ತರವೆಲ್ಲ ಸೆಕೆಂಡ್ಸ್ ಎಂದು ಕಾಣುತ್ತದೆ. ಜಿನೈನ್ ಉತ್ತರ ಕೊಡಿ ಸೆಕೆಂಡ್ಸ್ ಬೇಡ.

ಶ್ರೀ ಎಸ್. ಬಂಗಾರಪ್ಪ : ಸೆಕೆಂಡ್ಸ್ ಪ್ರಶ್ನೆಗೆ ಸೆಕೆಂಡ್ಸ್ ಉತ್ತರವಾದರೂ ಆಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸೆಕೆಂಡ್ಸ್‌ನಲ್ಲಿ ಇನ್ನೇನಾದರೂ ಹಾಗಿ ಕುಡಿಸಿ ಬಿಟ್ಟಿರಾ ಎನ್ನುವು ಭಯ. ಅದಕ್ಕೆ ಫ್ಯೂರ್ ಆಗಿರುವುದನ್ನೇ ಕುಡಿಸಿ ಎಂದು...

ಶ್ರೀ ಎಸ್. ಬಂಗಾರಪ್ಪ ; ಮಾನ್ಯ ಯಡಿಯೂರಪ್ಪನವರೆ ಅವರು ಸೆಕೆಂಡ್ಸ್ ಉತ್ತರ ಎಂದು ಹೇಳಿದರು. ಸೆಕೆಂಡ್ಸ್ ಪ್ರಶ್ನೆಗೆ ಸೆಕೆಂಡ್ಸ್ ಉತ್ತರ ಎಂದು ನಾನು ಹೇಳಿದೆ. ಅಷ್ಟೆ.

As against 42,119 raids conducted during 1989-90, 42,760 raids were conducted during 1990-91; As against 3431 parsons arrested for illegal activities, a number of 3994 or nearly 4000 persons were arrested during 1990-91 i.e. last year. During 1989-90, 309 Vehicles were seized; During 1990-91, 607 vehicles were seized. Regarding seizure of liquor, 1,88,911 liters during 1989-90 and 2,80,391 liters were seized duting 1990-91.

ನಾನು ಇದರ ಬಗ್ಗೆ ಇಷ್ಟು ಉತ್ತರ ಕೊಟ್ಟಿದ್ದೇನೆ ಇದರಿಂದ ನಾವು ಎಷ್ಟು ರೈಡ್ಸ್ ಮಾಡಿದ್ದೇವೆ ಎಷ್ಟು ಪರ್ಸನ್ಸ್ ಅನ್ನು ಅರೆಸ್ಟ್ ಮಾಡಿದ್ದೇವೆ ಎಷ್ಟು ವಾಹನ ಗಳನ್ನು ಸೀಜ್ ಮಾಡಿದ್ದೇವೆ ಎನ್ನುವುದು ತಮಗೆ ಗೊತ್ತಾಗುತ್ತದೆ. ಇವತ್ತು ಸೆಕೆಂಡ್ಸ್ ವಿಚಾರದಲ್ಲಿ ಬಿಗಿ ಹಾಕದಿದ್ದರೆ ರೆವಿನ್ಯೂ ಕಡಿಮೆಯಾಗುತ್ತದೆನ್ನುವ ತಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಏಕೆಂದರೆ ಅದನ್ನು ಅನಿವಾರ್ಯವಾಗಿ ಮಾಡಲೇಬೇಕು. ಅದನ್ನು ಮಾಡದಿದ್ದರೆ ರೆವಿನ್ಯೂ ಜಾಸ್ತಿ ಮಾಡುವುದಕ್ಕೆ ಒಬ್ಬರಿಗೂ ಕೂಡ ಸಾಧ್ಯವಾಗುವುದಿಲ್ಲ ಇಷ್ಟು ವಿಚಾರವನ್ನು ಈ ಸಂದರ್ಭದಲ್ಲಿ ಎಕ್ಸೈಜ್‌ನ ಬಗ್ಗೆ ತಿಳಿಸಿ I hope I have covered almost all the points. ಇದರ ಬಗ್ಗೆ ಇನ್ನೇನಾದರೂ ಇದ್ದರೆ ನನ್ನ ಉತ್ತರ

ಆದಮೇಲೆ ನೆನಪು ಮಾಡಿದರೆ ಉತ್ತರ ಕೊಡತಕ್ಕ ಪ್ರಯತ್ನವನ್ನು ನಾನು ಮಾಡುತ್ತೇನೆ. ನಂತರ ಎಂ.ಎಸ್.ರಾಮಯ್ಯನವರ ಇನ್ಸಿಟಿಟ್ಯೂಟ್‌ಗೆ ಎಕ್ಸಮ್‌ಷನ್ ಕೊಟ್ಟಿರತಕ್ಕ ವಿಚಾರದಲ್ಲಿ ತಾವೆಲ್ಲ ಮಾತನಾಡಿದ್ದೀರಿ. ಇದರಲ್ಲಿ ಇದು Urban Land Celing exemption given to M.S. Ramiah and family for Gokul Education Foundation & also for Group Housing schemed. The total extent is 76 acres and 16 quntes originally ಇದು ಎಂ.ಎಸ್.ರಾಮಯ್ಯನವರದೇ. 1978ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅರ್ಧ ಭೂಮಿಯನ್ನು ಅಕ್ವೈರ್ ಮಾಡಿಕೊಂಡರು. ಇನ್ನರ್ಧ ಅಕ್ವಿಜಿಶನ್ ಪ್ರೊಸಸ್ ಆ ಟೈಮ್‌ನಲ್ಲಿತ್ತು. ವಸತಿ ಮತ್ತು ನಗರಾಡಳಿತ ಸಚಿವರಾದ ಮಾನ್ಯ ಲಕ್ಷ್ಮೀಸಾಗರ್ ಆಗ ಇದ್ದರು. ವಸತಿ ಮತ್ತು ನಗರಾಡಳಿತ ಇಲಾಖೆಯ ಕಾರ್ಯದರ್ಶಿ ಎಸ್.ಬಿ. ಮುದ್ದಪ್ಪನವರಿದ್ದರು. the then HUD secretary joint have inspected this spot. Please don't forget this and they have recorded their Inspection Note on 24-12-1985.

24-12-85ರಲ್ಲಿ ಜಾಗ ನೋಡಿ ಬರೆದಿದ್ದಾರೆ. ಅದರಲ್ಲಿ ಏನು ಬರೆದಿದ್ದಾರೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ.

In the inspection note they have highly praised the Gokul Education Foundation regarding the construction of M.S.Ramaiah Medical College stating that they have formed a beautiful structure having come up on the area to house the Engineering college, Medical College and the Hospital Complex. Further, it is stated by them that the Hospital complex is one of the best in the country.

ಇದು ನಮ್ಮದ್ದಲ್ಲ ಅವರದ್ದೇ ನೋಟ್. The structure has been put up in a record time. They have strongly recommended for de-notifying these lands from 80A with the acquisition proceedings.

ಸ್ವಾಮಿ, ನಾನು ಒಂದೇ ಪ್ರಶ್ನೆ ಕೇಳುತ್ತೇನೆ ತಮ್ಮ ಎಚ್.ಯು.ಡಿ. ಮಂತ್ರಿ ಶ್ರೀ ಲಕ್ಷ್ಮೀಸಾಗರ್‌ರವರು ಆಗಿನ ಹೆಚ್.ಯು.ಡಿ. ಸೆಕ್ರೆಟರಿ ಸ್ಪಾಟ್‌ಗೆ ಹೋಗಿ ನೋಡಿದ್ದಾರೆ. They may be right ಅವರು ಮಾಡಿದ್ದು ತಪ್ಪು ಎಂಬ ಭಾವನೆಯಿಂದ ನಾನು ಮಾತನಾಡುತ್ತಿಲ್ಲ, that is not may point.

ಶ್ರೀ ಡಿ.ಬಿ. ಚಂದ್ರೇಗೌಡ: ಇದು ನಿಮಗೆ ಅನುಕೂಲ ಆಯಿತಲ್ಲ?

ಶ್ರೀ ಎಸ್. ಬಂಗಾರಪ್ಪ: ನೀವು ಹೀಗೆ ಮಾತನ್ನಾಡಿದರೆ ನಾನು ತಿರುಗಿ ಏನಾದರೂ ಹೇಳಬೇಕಾಗುತ್ತದೆ. ಆದ್ದರಿಂದ ಅದನ್ನು ಏಕೆ ಹೇಳುವುದಕ್ಕೆ ಹೋಗುತ್ತೀರಿ? ನಿಮಗೆ ಆ ಮಾತನ್ನು ಆಡಬಾರದು ಎಂದು ನಾನು ಸುಮ್ಮನೆ ಇದ್ದೇನೆ. ನೀವು ಆಡಬೇಕೆಂದು ಇದ್ದರೆ, ನೀವು ಮತ್ತೆ ತೆಗೆದುಕೊಳ್ಳುವುದಕ್ಕೆ ರೆಡಿ ಇರಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ಇದರ ಜೊತೆಗೆ ಏನು ಮಾಡಿದ್ದಾರೆ ಎಂದರೆ ಅದು ಇಷ್ಟಕ್ಕೆ ನಿಂತಿಲ್ಲ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಏನು ಬರೆದಿದ್ದಾರೆ The Chief Minister, Sre Ramakrishna Hegde has agreed with the recommendations of the HUD Minister, Vids his noting dated 21-5-1986 on the file. ಇಲ್ಲಿ ನನ್ನ ಹತ್ತಿರ ಕಾಪಿ ಇದೆ ಅವರು ಏನು ಬರೆದಿದ್ದಾರೆ ಅದು ಬಹಳ ಚೆನ್ನಾಗಿದೆ ಹೋದರು ಸ್ಪಾಟ್‌ಇನ್‌ಸ್ಪೆಕ್ಷನ್ ಮಾಡಿದರು ರೆಕಮೆಂಡ್ ಮಾಡಿದರು ಬೆಸ್ಟ್ ಇನ್ ದಿ ಕಂಟ್ರಿ ಎಂದರು ಡಿನೋಟಿಫೈ ಮಾಡಬೇಕು ಎಂದರು ನಂತರ ಅಕ್ವಸಿಶನ್ ಪ್ರೋಸಿಡಿಂಗ್ಸ್‌ನಲ್ಲಿ ಬಿಡಬೇಕು ಎಂದರು. ಅದಾದಮೇಲೆ "Ramakrishna Hegde -

21-86 The Chief Minister has seen this on 21-5-86 and minuted as follows: It is almost a fiat accompli.

"I agree with the proposals as stated by the Min. for Urban Development. Etc., etc.,"

ಉಳಿದಿದ್ದೆಲ್ಲಾ ಅದರಲ್ಲಿದೆ. ಅದಕ್ಕೆ ನಾನು ಹೇಳಿದ್ದು 'ಐ ಹ್ಯಾವ್ ಅಗ್ರೀಡ್. ಎಂದಮೇಲೆ ಚಾಪ್ಟರ್ ಕ್ಲೋಸ್‌ಡ್ BDA acquisition proceedings denotified and lands were given back to Ramiah. ಸ್ವಾಮಿ ಲ್ಯಾಂಡ್ಸನ್ನು ಯಾರು ಕೊಟ್ಟರು? I pose this question through the Dhair. ಇದನ್ನು ಡಿ-ನೋಟಿಫೈ ಮಾಡಿದವರು. ನಾವೆಲ್ಲ ನಿಮ್ಮ ಕಾಲದಲ್ಲಿ ನಿಮ್ಮ ಸರ್ಕಾರ ಇದನ್ನು ಡಿ ನೋಟಿಫೈ ಮಾಡಿದರು ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇದು ಯಾವಾಗ ಆಯಿತು?

ಮಾನ್ಯ ಎಸ್. ಬಂಗಾರಪ್ಪ: ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ನಾವು ಎಕ್ಸಂಪಶನ್ ಕೊಟ್ಟಿರತಕ್ಕದ್ದು ಅಲ್ಲಿ ಏನಾಗಿದೆ ಯೆಂದರೆ ತಾವೇ ಬರೆದಿದ್ದೀರಿ. ನಾನು ಒಂದು ಸಾರಿ ಹೋಗಿ ನೋಡಿದ್ದೇನೆ. ಹಿಂದಿನ ಬಿಜಾಪುರದ ಶಾಸಕರಾದ ಶ್ರೀ ಮಾನ್ ಬಿ.ಎಂ. ಪಾಟೀಲರು ತೀರಿಕೊಂಡಾಗ ಹೋಗಿ ನೋಡಬೇಕೆಂದು ಬೆಳಗಿನ ಜಾವವೇ ನಾನು ಕಾರು ತೆಗೆದುಕೊಂಡು ಹೋದೆ. ಆ ಆಸ್ಪತ್ರೆಯನ್ನು ಮೊದಲು ನಾನು ನೋಡಿರಲಿಲ್ಲ, ಅಲ್ಲಿಗೆ ಹೋದರೆ ಯಾವ ಕಡೆಗೆ ಹೋಗಿ ಯಾವ ಕಡೆಯಿಂದ ಬರಬೇಕೆಂದು ಗೊತ್ತಾಗಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನೀವು ಸುಂದರವಾಗಿದೆ ಎಂದು ಹೇಳಿದಿರಲ್ಲ ಅದಕ್ಕೆ ಏನು ಇತಿಹಾಸ ಇದೇ ಯೆಂದರೆ ಕಟ್ಟುವುದನ್ನು ಮುಗಿಸಿಬಿಟ್ಟರೆ ಯಾರಾದರೂ ಸತ್ತು ಹೋಗುತ್ತಾರಂತೆ ಅದಕ್ಕೋಸ್ಕರ ಕಟ್ಟುತ್ತಲೇ ಇರಬೇಕಂತೆ ಒಂದು ಕಡೆಯಿಂದ ಉರಳಿಸುತ್ತಾ ಇರಬೇಕು ಮತ್ತೊಂದು ಕಡೆಯಿಂದ ಕಟ್ಟುತ್ತಾಲೇ ಇರಬೇಕು.

ಶ್ರೀ ಎಸ್. ಬಂಗಾರಪ್ಪ: ನಾವು ಇಲ್ಲಿ ಕೊಟ್ಟಿರತಕ್ಕಂಥಾದ್ದು ಎಕ್ಸಂಪ್‌ಶನ್ under Urban Land Celing Act.

ಅದು ಬಿಟ್ಟರೆ ನಾವು ಏನೂ ಮಾಡಿಲ್ಲ. As a structure according to your own writing, notings put up including by the Hon'ble the then Chief Minister.

ಆ ರೀತಿ ಇರುವುದರಿಂದ ನಾವು ಎಕ್ಸಂಪ್‌ಶನ್ ಕೊಟ್ಟರೆ ಏನಾಗುತ್ತದೆ ಎಂದು ದಯವಿಟ್ಟು ವಿಚಾರ ಮಾಡಿ. ಪಬ್ಲಿಕ್ ಪರ್ಪಸ್ ಇದೆಯೆಂಬುದನ್ನು ದಯವಿಟ್ಟು ಮರೆಯಬೇಡಿ. ನೀವು ಎಲ್ಲಾ ಸೇರಿ ಮಾಡಿದ್ದರಿಂದ ನಾವು ಎಕ್ಸೆಂಪ್‌ಶನ್ ಕೊಡುವುದಕ್ಕೆ ಕಾರಣವಾಯಿತು. ಇಲ್ಲದಿದ್ದರೆ ಆ ಬಿಲ್ಡಿಂಗ್ಸ್ ಎಲ್ಲಿ ಕೆಡವತಕ್ಕಂಥ ಕೆಲಸವನ್ನು ನಾವು ನೀವು ಸೇರಿ ಮಾಡಬೇಕಾಗುತ್ತದೆ.

Is it humanly possible, please think it over. I am not taking any brief for M.S.Ramiah.ಅವರ ಕಡೆಯಿಂದ ನನಗೆ ಏನೂ ಆಗಬೇಗಾದ್ದಿಲ್ಲ ನಿಮಗೆ ಏನಾದರೂ ಆಗಬೇಕೆಂದು ನಾನು ಹೇಳುತ್ತಿಲ್ಲ. That is not my point But the point here is having denctifired and given by the land to Sri Ramaiah in the year 1985. ಆದ್ದರಿಂದ ಈ ವಾಚಾರದಲ್ಲಿ ಭಾಷಣ ಮಾಡುವುದಕ್ಕೆ ನಿಮಗೆ ಏನು ಹಕ್ಕು ಉಳಿಯುತ್ತದೆ ಎಂದು ನಾನು ಕೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಡಿ-ನೋಟಿಫೈ ಯಾವಾಗ ಆಯಿತು ಎಂದು ಹೇಳುತ್ತೀರ ನೀವು ಆರ್ಡರ್ ಮಾಡಿದ ದಿವಸವೇ ಹೊರಟುಹೋಯಿತು ಡೀ-ನೋಟಿಫೈ ಆಗಿದೆ

SRI H. EKANTHAIA: It is not denotified.

ಶ್ರೀ ಡಿ.ಬಿ. ಚಂದ್ರೇಗೌಡ: ಡೀ-ನೋಟಿಫೈಡ್ ಯಾವ ತಾರೀಖಿನಲ್ಲಿದೆ. Let us put the records straight. Somebody has committed a mistake. ನಾವು ಯಾರೂ ಇಲ್ಲ disown ಮಾಡುವುದಕ್ಕೆ ಸಿದ್ಧವಿಲ್ಲ, ಅಪರಾಧ ಆಗಿದ್ದರೆ ಒಪ್ಪಿಕೊಳ್ಳುತ್ತೇವೆ. ಇದಕ್ಕೆ ಶಿಕ್ಷೆ ಕೊಡುವ ಅಧಿಕಾರ ಜನಕ್ಕೆ ಇದೆ. ಮುಖ್ಯಮಂತ್ರಿಗಳು ಉತ್ತರ ಕೊಡುವಾಗ 1986ನೇ ಇಸವಿಯಲ್ಲಿ ಮೇ ತಿಂಗಳಲ್ಲಿ ಡಿ-ನೋಡಿಫೈ ಆಯಿತು

ಶ್ರೀ ಬಿ.ಎಸ್. ಯಡಿಯೂರಪ್ಪ: ಒಬ್ಬ ಬಡವ 20, 30 ಅಡಿ ಸೈಟ್ ಕೇಳುತ್ತಿದ್ದೀನೆ 10 ವರ್ಷಗಳಾಯಿತು ಅವನ ಅಪ್ಲಿಕೇಷನ್‌ಗೆ ಸ್ಯಾಂಕ್ಷನ್ ಮಾಡುವುದಕ್ಕೆ ನಿಮಗೆ ಸಮಯವಿಲ್ಲ ದೊಡ್ಡ ದೊಡ್ಡವರಿಗೆ 24 ಕಡೆ ಸ್ಥಳವನ್ನು ಮಂಜೂರು ಮಾಡುವುದಕ್ಕೆ ಅಂತಹ ಆಸಕ್ತಿ ಏನು ಅನುಕೂಲವಾಗಿರುವುದು? ಏನು ಅಂತಹ ವಿಶೇಷ ಆಸಕ್ತಿ ಇರುವುದು?

ಶ್ರೀ ಎಸ್. ಬಂಗಾರಪ್ಪ: ಏನೂ ಅನುಕೂಲವಾಗುತ್ತಾ ಇಲ್ಲ. ನೀವು ಆ ರೀತಿ ಭಾಷಣ ಮಾಡಿದರೆ ನಾವೂ ಅದೇರೀತಿ ಭಾಷಣ ಮಾಡುತ್ತೇವೆ.

SRI D.B. CHANDARA GOWDA: Please put the record straight. I would like to know why it was denotified.

ಯಾವಾಗ ಡಿ-ನೋಟಿಫೈ ಆಯಿತು ಎನ್ನುವುದನ್ನು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ದಯಮಾಡಿ ಯಾವಾಗ ಡಿ-ನೋಟಿಫೈ ಆಯಿತು ಎನ್ನುವುದನ್ನು ತಿಳಿಸಿ ಅಧ್ಯಕ್ಷರೇ ತಾವು ನಮ್ಮ ಸಹಾಯಕ್ಕೆ ಬರಬೇಕು ಜನತಾ ದಳ ಸರ್ಕಾರ ಇದ್ದಾಗ ಆಯಿತು ಎಂದು ಹೇಳುತ್ತಾರೆ. ಈ ರಾಷ್ಟ್ರದ ಜನತೆಗೆ ತಿಳಿಸಬೇಕೆಂದು ಆಸಕ್ತಿ ಇದ್ದರೆ ಡಿ-ನೋಟಿಫೈ ಯಾವತ್ತು ಆಯಿತು ಎನ್ನುವುದನ್ನು ಹೇಳಲಿ ಅವರು ಚಾರ್ಜಸ್ ಮಾಡಿದ್ದಾರೆ. ಜನತಾ ದಳ ಸರ್ಕಾರ ಇದ್ದಾಗ ಮಾಡಿದ್ದಾರೆಂದು ಹೇಳುತ್ತಾರೆ

ಅಧ್ಯಕ್ಷರು: ತಾರೀಖು ಕೊಡುತ್ತೇನೆಂದು ಹೇಳುತ್ತಿದ್ದಾರೆ

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳಬಲ್ಲೆ ವಿಚಾರವನ್ನು ಈ ಸಂದರ್ಭದಲ್ಲಿ in support of your No Confidence Motion ಪ್ರಸ್ತಾಪ ಮಾಡಿದುದರಿಂದ ನಾವು ಉತ್ತರ ಕೊಡಲೇಬೇಕು. ಡೇಟ್ ಕೇಳಿದ್ದಾರೆ ಈಗಲೇ ತರಿಸಿ ನಿಮಗೆ ಕೊಡುತ್ತೇನೆ. ನಮ್ಮ ಕಾಲದಲ್ಲಿ ಡಿ-ನೋಟಿಫಿಕೇಷನ್ ಏನನ್ನೂ ಕೂಡ ಮಾಡಿಲ್ಲ. ನಮ್ಮ ಕಾಲದಲ್ಲಿ exemption under the Urban Land Celing Act. ಈ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ಬೇರೆ ಯಾವುದನ್ನೂ ನಾವು ಮಾಡಿಲ್ಲ. ಇದಾದ ಮೇಲೆ ಮೋಹನ್ ಮೆಕ್ಕಿನ್ಸ್ ಬಗ್ಗೆ ತಾವೂ ಮಾತನಾಡಿದ್ದೀರೆಂದು ಕಾಣುತ್ತದೆ. ಇದರಲ್ಲಿ ಅಲಿಗೇಷನ್ ಏನೆಂದರೆ HUD Secretary has asked the BDA to dend favourable recommendations. ಎನ್ನತಕ್ಕಂತದ್ದನ್ನು ಮಾನ್ಯ ಯಡಿಯೂರಪ್ಪನವರು ಭಾಷಣ ಮಾಡಬೇಕಾದಗ ಹೇಳಿದರು ಎಂದು ನನಗೆ ನೆನಪು. ಇದರಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಯಾವುದೇ ಸಂದರ್ಭದಲ್ಲಿ ಹೆಚ್.ಯು.ಡಿ ಸೆಕ್ರೆಟರಿಯವರು he has not at all asked the BDA to give favourable replay. ಈ ಸಂದರ್ಭದಲ್ಲಿ ನಾನು ನಿಮ್ಮ ಅಲೀಗೇಷನ್ ರೆಫ್ಯೂಟ್ ಮಾಡುತ್ತಿದ್ದೇನೆ. ಆಮೇಲೆ ಇದರಲ್ಲಿ ಏನೇ ಮಾಡಿದರೂ ಕೂಡ ಕೋರ್ಟ್ ಆರ್ಡರ್ ಇದೆ. ದಯಮಾಡಿ ಇದನ್ನು ಮರೆಯಬಾರದು. ತಾವು ಹಿಂದಿನ ವಿಷಯಕ್ಕೆ ತಾರೀಖು ಕೇಳುತ್ತಿದ್ದಿರಿ. ಗವರ್ನಮೆಂಟ್ ಲೆಟರ್ ನಂ ತಾ 16-6-1986.

ಶ್ರೀ ಹೆಚ್. ಏಕಾಂತಯ್ಯ: ಕ್ಷಮಿಸಬೇಕು. There is a difference between denotification and granting the exemption. You are misleading the House. I want the protection from the Chair.

(ಗೊಂದಲ)

SRI H EKANTHAIAH: Sir, I rise to a point of order. ತಾವು ಅನುಮತಿ ಕೊಟ್ಟರೆ ಹೇಳುತ್ತೇನೆ.

(ಗೊಂದಲ)

ಶ್ರೀಡಿ.ಬಿ. ಚಂದ್ರೇಗೌಡ: ಡಿನೋಟಿಫೈ ಯಾವಾಗ ಆಯಿತು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ಎಕ್ಸೆಂಫ್‌ಷನ್ ಯಾವಾಗ ಕೊಟ್ಟಿರಿ

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ಲೆಟರ್ ಡೇಟ್ ಕೋಟ್ ಮಾಡಿ ನೆನಪು ಮಾಡಿಕೊಟ್ಟಿದ್ದೇನೆ.

ಶ್ರೀ ಎಚ್. ಏಕಾಂತಯ್ಯ: ಅಧ್ಯಕ್ಷರೇ ಪಾಯಿಂಟ್ ಆಫ್ ಆರ್ಡರ್ ತಾವು ಅನುಮತಿ ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು: ಹೇಳಿರಿ ಪಾಯಿಂಟ್ ಆಫ್ ಆರ್ಡರ್ ರೂಲ್ಸ್ ಪುಸ್ತಕ ತೆಗೆದುಕೊಳ್ಳಿ ಓದಿ ಹೇಳಿರಿ.

ಶ್ರೀ ಎಚ್. ಏಕಾಂತಯ್ಯ: ನನ್ನ ತಲೆಯೊಳಗಿರುವುದೇ ಸಾಕು ಎಂದು ತಿಳಿದು ಕೊಳ್ಳುತ್ತೇನೆ.

ಅಧ್ಯಕ್ಷರು: ನನಗೆ ಇಲ್ಲ ಅದಕ್ಕೆ ಹೇಳಿರಿ. I am sure that there has to be an element of humour.

SRI H. EKANTHAIAH : Certainly Sir, ಪ್ರಶ್ನೆ ಇಷ್ಟೇನೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಒಂದು ನಿಮಿಷದ ಹಿಂದೆ ಇದು ಡಿನೋಟಿಫೈ ಆಗಿದೆ ನಾನು ತಾರೀಖು ಕೊಡುತ್ತೇನೆ ಎಂಬ ಮಾತನ್ನು ಹೇಳಿದರು. ತದನಂತರಹೇಳುತ್ತಿದ್ದಾರೆ. ನಾನು ಆ ತಾರೀಖನ್ನು ಕೊಡುತ್ತೇನೆ ಎಂಬ ಮಾತನ್ನು ಹೇಳಿ They have referred a letter written by Ramakrishna Hegde dated 21/5/1986 ಎಂದು ಒಂದು ತಾರೀಖು ಹೇಳಿದರು ನಾನು ಕೇಳುತ್ತೇನೆ Is it the date of Notification?

ಅಧ್ಯಕ್ಷರು: ಅದನ್ನು ತರಿಸಿಕೊಡುತ್ತೇನೆ ಎಂದು ಹೇಳಿದರು.

ಶ್ರೀ ಎಚ್.ಏಕಾಂತಯ್ಯ: ಅದಕ್ಕೆ ಉತ್ತರವಾಗಿ ರಾಮಕೃಷ್ಣ ಹೆಗಡೆಯವರು ಏನು ಕಾಗದ ಬರೆದಿದ್ದಾರೆ ಆ ಕಾಗದದ ತಾರೀಖನ್ನು ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ಸನ್ಮಾನ್ಯ ಅಧ್ಯಕ್ಷರೇ ನಾನು ಅದನ್ನು ತರಿಸಿಕೊಡುತ್ತೇನೆ. ಲೆಟರ್ ಡೇಟೆಡ್ ಮಾತ್ರ ನಾನು ಹೇಳಿದ್ದೇನೆ. In respect of Mohan mekins czse there has been a judgement of the High Court. ಇವತ್ತು ಏನೇ ಮಾಡಿದ್ದರೂ ಹೈಕೋರ್ಟ್ ಡೈರೆಕ್ಷನ್ ಪ್ರಕಾರ ಮಾಡಿರತಕ್ಕದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದರ ನಂಬರ್ ಹೇಳಿ

ಶ್ರೀ ಎಸ್. ಬಂಗಾರಪ್ಪ: ಡಬ್ಲ್ಯು.ಪಿ.ನಂ 5490 ಟು 5494 ಆಫ್ 91 ಅದು ಬೇರೆ ಬೇರೆ ಬಿಟ್ಸ್ ಆಫ್ ಲ್ಯಾಂಡ್ಸ್ ಎಲ್ಲಾ ಬರುತ್ತದೆ. ಇದರಲ್ಲಿ ಆರ್ಡರ್ ಡೇಟೆಡ್ 27.12.90

ಇದನ್ನು ಕೋರ್ಟ್ ಆರ್ಡರ್ ಪ್ರಕಾರ ಮಾಡಿರತಕ್ಕದ್ದೇ ಹೊರತು ಇದು ಮತ್ತೇನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬೇರೆ ನಂಬರ್ ಕೋಟ್ ಮಾಡಿರುತ್ತಾರೆ. ದಯವಿಟ್ಟು ಒಂದು ನಿಮಿಷ ಈಲ್ಡ್ ಆಗಿ ಸ್ವಾಮಿ.

(ಗೊಂದಲ)

SRI S. BANGRAPPA: I am not yielding. I am not yielding.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದೇ ಸರಕಾರದ ಆರ್ಡರ್ ನಂಬರ್ ಕೋಟ್ ಮಾಡುತ್ತಿದ್ದಾರೆ. ಈ ಸದನಕ್ಕೆ ಸತ್ಯಕ್ಕೆ ದೂರವಾದ ಸಂಗತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನಾನು ಆ ಪಾಯಿಂಟ್ ಕ್ಲಿಯರ್ ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಅವರು ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂದು ತಿಳಿದರೆ ಅದನ್ನು ಸರಿಪಡಿಸುವುದಕ್ಕೆ ನಿಮಗೆ ಬೇಕಾದಷ್ಟು ಅವಕಾಶಗಳು ಇದೆ you can move a breach of privilege against. him.

ಶ್ರೀ ಬಿ.ಎಸ್. ಯಡಿಯೂರಪ್ಪ: ಕೋರ್ಟ್ ಡೇಟ್ ಕೇಸ್ ನಂಬರ್ ಕರೆಕ್ಟಾಗಿ ಹೇಳಿಬೇಕಲ್ಲ, ಅದನ್ನಾದರೂ ಹೇಳಬೇಕಲ್ಲ ನಾನು ಅದನ್ನು ಕರೆಕ್ಟ್ ಮಾಡುತ್ತೇನೆ. ಮಾನ್ಯ ಸಭಾ ನಾಯಕರು ನಾನು ಎದ್ದಾಗ ಒಂದು ನಿಮಿಷ ಈಲ್ಡ್ ಆದರೆ ತಪ್ಪೇನು? ನಾನು ಈ ಮನೆಯ ಸದಸ್ಯ ಅಲ್ಲವೇ? ಸತ್ಯ ಸಂಗತಿಯನ್ನು ರಾಜ್ಯದ ಜನತೆಗೆ ತಿಳಿಸುವ ಅಧಿಕಾರ ನನಗೆ ಇಲ್ಲವೇ ಸ್ವಾಮಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಏನು ಉತ್ತರ ಕೊಡುತ್ತಿದ್ದಾರೋ ಏನು ಮಾತನಾಡುತ್ತಿದ್ದಾರೋ ಅವರನ್ನು ದೇವರೇ ಕಾಪಾಡಬೇಕು

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಅಧ್ಯಕ್ಷರೇ ಡಿನೋಟಿಫೈ ಯಾವಾಗ ಆಯಿತು ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ ಸ್ವಲ್ಪ ಶಿವರಾಮೇಗೌಡರು ಭೈರೇಗೌಡರು ಕುಳಿತರೆ ಎಲ್ಲರಿಗೂ ಕ್ಷೇಮ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ ರಿಗಾರ್ಡಿಂಗ್ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟೀಸ್......

ಶ್ರೀ ಬಿ.ಎಸ್. ಯಡಿಯೂರಪ್ಪ: ಇದನ್ನು ಹೇಳಿ ಸ್ವಾಮಿ No. No.

ಅಡೆ ತಡೆ

ಶ್ರೀ ಎಸ್. ಬಂಗಾರಪ್ಪ: ಏನು No. No. ಕೋರ್ಟ್ ಜಡ್ಜ್‌ಮೆಂಟ್ ಇದೆ ಎಂದು ನಾನು ಹೇಳಿದ್ದೇನೆ. ಯಾವುದೇ ಪಾಯಿಂಟ್ ಇದ್ದರೆ ಕ್ಲಾರಿಫಿಕೇಷನ್ ಟೈಮ್‌ನಲ್ಲಿ ಕೇಳಿರಿ ಅದೊಂದೇ ವಿಚಾರ ಇದೆ ಕೋರ್ಟ್ ಆರ್ಡರ್ ಇದೆ ಎಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಒಂದೇ ಶಬ್ದದಲ್ಲಿ ಮುಗಿಸಿ ಮುಂದಕ್ಕೆ ಹೋಗುತ್ತಿದ್ದೀರಲ್ಲ

ಶ್ರೀ ಎಸ್. ಬಂಗಾರಪ್ಪ: ಕೋರ್ಟ್ ಆರ್ಡರ್ ಇದೆ ಕೋರ್ಟ್ ಆರ್ಡರ್ ವಿರೋಧ ಮಾಡುತ್ತೀರಾ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಯಾವಾಗ ಡಿನೋಟಿಫೈ ಆಯಿತು ಹೇಳಿ?

ಅಧ್ಯಕ್ಷರು: ನೀವು ಪ್ರಶ್ನೆ ಕಳುಹಿಸಿಕೊಡಿ ಅದಕ್ಕೆ ಉತ್ತರ ದೊರಕಿಸಿ ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ಯಾವಾಗ ಡಿನೋಟಿಫೈ ಆಯಿತು ಏನು ಆಯಿತು ಎನ್ನುವುದು ಏನೇ ಇರಲಿ ಕೋರ್ಟ್ ಆರ್ಡರ್ ಇದೆ ಕೋರ್ಟ್ ಡೈರೆಕ್ಷನ್ ಇದೆ ಹೀಗೆ ಮಾಡಬೇಕು ಎನ್ನತಕ್ಕಂಥದ್ದು ಇದೆ ಅದರ ಪ್ರಕಾರ ನಡವಳಿಕೆಗಳು 1990ರಲ್ಲಿ ಆಗಿವೆ. ಅದರ ಡೇಟ್‌ನ್ನು ತಮಗೆ ಕೊಟ್ಟಿದ್ದೇನೆ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಸ್ವಾಮಿ ನೀವು ಅಧಿಕಾರಕ್ಕೆ ಬಂದ ಮೇಲೆ ನೀವು ಡೀನೋಟಿಫೈ ಮಾಡಿರತಕ್ಕಂಥಾದ್ದನ್ನು ಆರ್ಡರ್ ನಂಬರ್ ಕೋಟ್ ಮಾಡಿ ಹೈಕೋರ್ಟ್ ಹೆಸರು ಹೇಳುತ್ತಿದ್ದೀರಿ

ಅಧ್ಯಕ್ಷರು: ಅವರು ಹೈಕೋರ್ಟ್ ಪ್ರಕಾರ ಡಿನೋಟಿಫೈ ಮಾಡಿದ್ದೇವೆಂದು ಹೇಳುತ್ತಿದ್ದಾರೆ ಅಷ್ಟೇ

ಶ್ರೀ ಎಸ್. ಬಂಗಾರಪ್ಪ: ಅದು ಮಾಡದಿದ್ದರೆ ತಪ್ಪಾಗುತ್ತದೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ರಿಟ್ ಪಿಟಿಶನ್ ರೇಟ್ ಹೇಳಿ.

ಅಧ್ಯಕ್ಷರು: ಅವರು ರಿಟ್ ಪಿಟಿಷನ್ ನಂಬರು ಹೇಳಿದರು ನೀವು ಅದನ್ನು ಬರೆದುಕೊಂಡ್ರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದು ತಪ್ಪು ಸ್ವಾಮಿ ಅದು ಸರಿ ಅಲ್ಲ. ಅದು ಸತ್ಯಕ್ಕೆ ದೂರವಾದುದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ನಾನು ಮತ್ತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ ಏನಾಗಿದೆ ಅಂದರೆ ಜಡ್ಜಮೆಂಟ್ ಆದ ಮೇಲೆ ಅದನ್ನು ಜಾರಿಗೊಳಿಸಲಿಲ್ಲ ಎಂದು ನಮ್ಮ ಮೇಲೆ ಕಂಟೆಂಪ್ಟ್ ಆಫ್ ಪ್ರೋಸಿಡಿಂಗ್ಸ್ ಕೂಡ ಹೈಕೋರ್ಟಿನಲ್ಲಿ ಹಾಕಿದ್ದಾರೆ. The applicant had moved a contempt of court proceeding petition against the HUD secretary pertaining to the above judgement. But the High court has dismised that ಪುಣ್ಯಕ್ಕೆ ಕಂಟೆಂಪ್ಟ್ ಆಫ್ ಕೋರ್ಟ್ ಪ್ರೋಸೀಡಿಂಗ್ಸ್‌ನ್ನು ಅವರು ನಮ್ಮ ಮೇಲೆ ಇನ್‌ಷಿಯೇಟ್ ಮಾಡಲಿಲ್ಲ ಇದು ಅರ್ಜೆಂಟಾಗಿ ಜಾರಿಗೆ ಕೊಡಲಿ ಎಂದು ನಮ್ಮ ಮೇಲೆ ಈ ರೀತಿ ಹಾಕಿರತಕ್ಕಂಥಾದ್ದು ಅವರ ನೋಟಿಫಿಕೇಶನ್ ಕೂಡ ನನ್ನ ಹತ್ತಿರ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸ್ವಾಮಿ ನೀವು ನೋಟಿಫೈ ಮಾಡಿದ ಮೇಲೆ ಆರ್ಡರು ಕೊಟ್ಟಿದ್ದಾರೆ ಹೈಕೋರ್ಟ್‌ಗೆ ಮಾಡಬಾರದು ಎಂದು ಹೇಳಿದೆ. ಅವರು ಸುಪ್ರೀಂ ಕೋರ್ಟ್ ಮಾಡಬಾರದು ಎಂದು ಹೇಳಿದೆ ಸಿವಿಲ್ ಕೋರ್ಟ್ ಮಾಡಬಾರದು ಎಂದು ಹೇಳಿದೆ ಸುಮ್ಮನೆ ಸತ್ಯಕ್ಕೆ ದೂರವಾದ ಒಂದು ಸಂಗತಿಯನ್ನು ಹೇಳುವ ನಿಮ್ಮ ಧೈರ್ಯವನ್ನು ಮೆಚ್ಚಬೇಕು. ಮಾನ್ಯ ಮುಖ್ಯಮಂತ್ರಿಗಳ ಧೈರ್ಯವನ್ನು ಮೆಚ್ಚಬೇಕು. 25-30 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳ ಧೈರ್ಯವನ್ನು ಮೆಚ್ಚಿದ ನೀವು ಕುಳಿತುಕೊಳ್ಳಬೇಕಷ್ಟೆ ಇನ್ನು ಏನು ಮಾಡುವುದಕ್ಕಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ: ಮಾನ್ಯ ಅದ್ಯಕ್ಷರೇ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿ ವಿಚಾರದಲ್ಲಿ ಹೇಳುವುದಾದರೆ ಇದು ನಾವು ಹಿಂದೆ ಮಾಡಿದ್ದ ಚರ್ಚೆ ಮಾಡಿದ ವಿಚಾರವೇ ಮತ್ತೆ ಹಳೆಯ ವಿಚಾರವೇ ಆಗಿದೆ. ಒಂದೇ ಒಂದು ವಿಚಾರದಲ್ಲಿ ನಾವು ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ. There are about 1600 And add.....

ಶ್ರೀ ಬಿ.ಎಸ್.ಯಡಿಯೂರಪ್ಪ: ಕಾಗೆ ಗುಬ್ಬಚ್ಚಿ ಕಥೆ ಇದಕ್ಕೆ ಹೇಳಬೇಕೇ?

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ತಮ್ಮ ಸ್ಥಾನದಿಂದ ಎದ್ದು ಅಧ್ಯಕ್ಷರ ಪೀಠದ ಕಡೆ ಹೋಗಿ ಕಾಗದ ಕೊಟ್ಟರು)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಕಾಗೆ ಗುಬ್ಬಚ್ಚಿ ಕಥೆ ಹೇಳಿ ಸತ್ಯಕ್ಕೆ ದೂರವಾದ ಕಥೆ ಹೇಳಿಕೊಂಡು......

SRI S. BANGARAPPA: I am sorry, I am not yielding.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ ಶಿರಾಮಗೌಡರೇ ಈಶ್ವರಪ್ಪನವರೆ ಕುಳಿತುಕೊಳ್ಳಿ. ಬಹಳ ಕಷ್ಟ ಪಟ್ಟಿದ್ದೀರಿ ಕುಳಿತುಕೊಳ್ಳಿ ಮಾನ್ಯ ಯಡಿಯೂರಪ್ಪನವರೇ ಅಧ್ಯಕ್ಷರಿಗೆ ಯಾವುದಾದರೊಂದು ಕಾಗದಪತ್ರ ಕಳುಹಿಸಬೇಕಾದರೂ ಕೂಡ ಒಂದು ರೀತಿ ಇದೆ ಈ ಸಭೆಯನ್ನು ನಡೆಸುವವನು ನಾನು. ದಯವಿಟ್ಟು ನೀವು ನನಗೆ ಅವಕಾಶ ಕೊಡಿ ಈ ಸದನದ ಗಾಂಭೀರ್ಯವನ್ನು ಎತ್ತಿ ಹಿಡಿಯುವವರಲ್ಲಿ ನೀವು ಒಬ್ಬರಾಗಿದ್ದೀರಿ ಇನ್ನು ಮುಂದೆಯೂ ಆಗುತ್ತೀರಿ ಎನ್ನತಕ್ಕಂಥ ಸಂಪೂರ್ಣ ಭರವಸೆ ನನಗೆ ಇದೆ.ತಾವು ಕಾಗದ ಕಳುಹಿಸಬೇಕಾದರೆ ಅದಕ್ಕೆ ಒಂದು ಲೆಟರ್ ಬರೆದು ಕಳುಹಿಸಿಕೊಟ್ಟರೆ ಅದನ್ನು ನಾನು ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸಭಾನಾಯಕರು ಒಂದು ನಿಮಿಷ ಯೀಲ್ಡ್ ಆದರೆ ಒಂದು ವಿಚಾರ.

ಅಧ್ಯಕ್ಷರು: ನಾನು ಮತ್ತೆ ಮತ್ತೆ ಕಾನಡೆಯವರೆ ಒಂದು ನಿಮಿಷ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಇದುವರೆಗೂ ನಿಮಗೆ ಯಾವುದಾದರು ಪತ್ರವನ್ನು ಅಡ್ರೆಸ್ ಮಾಡದೆ ಕಳುಹಿಸಿರುವುದು ಉಂಟೇ? ಇವತ್ತು ಅನಿವಾರ್ಯ ಪ್ರಸಂಗ ಬಂದಾಗ ಅದನ್ನು ತಮ್ಮ ಗಮನಕ್ಕೆ ತಂದೆ.

ಅಧ್ಯಕ್ಷರು: ನಿಮಗೆ ಅಧಿಕಾರ ಇಲ್ಲ. ನೀವು ಭಾಷಣ ಮಾಡುವಾಗ ನಿಮಗೆ ಅಧಿಕಾರ ಇದೆ. ಸಭೆಯನ್ನು ಸುಬರ್ದಿಕೆ ತೆಗೆದುಕೊಂಡು......

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಮಾತನಾಡಬೇಕಾದರೆ ಅವರು ಮಾತನಾಡಿಲ್ಲವೆ?

ಅಧ್ಯಕ್ಷರು: ಶಾಸನ ಸಭೆ ಎಂದರೆ ಸ್ವಲ್ಪ ಮಾತುಕತೆ ನಡೆಯುತ್ತವೆ ಗಂಭೀರವಾಗಿ ನಡೆಯುತ್ತವೆ ಜೋರಾಗಿ ನಡೆಯುತ್ತವೆ ಎಲ್ಲಾ ನಡೆಯುತ್ತವೆ. ಆದರೆ ಅದಕ್ಕೆ ಒಂದು ಇತಿಮಿತಿ ಉಂಟು. ಈಗ ನೀವು ಗಂಭೀರವಾದ ಆಪಾದನೆಗಳನ್ನು ಮಾಡಿದ್ದೀರಿ ಆ

ಗಂಭೀರವಾದ ಆಪಾದನೆಗಳನ್ನು ಅವರು ಪಾಯಿಂಟ್ ಬೈ ಪಾಯಿಂಟ್ ನಿರಾಕರಿಸುತ್ತಿದ್ದಾರೆ. ಈ ಮಧ್ಯೆ ನೀವು ಎದ್ದು ಅವರು ಹೇಳುತ್ತಿರತಕ್ಕಂಥದ್ದೆಲ್ಲಾ ಸತ್ಯಕ್ಕೆ ದೂರವಾದುದು ಹೇಳಿ ಪ್ರತಿಪಾದನೆ ಮಾಡತಕ್ಕಂಥಾದ್ದು ಸರಿಯಲ್ಲ ಅವರು ಸತ್ಯಕ್ಕೆ ದೂರವಾದಂಥ ವಿಚಾರಗಳನ್ನು ಸಭೆಯ ಮುಂದೆ ಇಟ್ಟರೆ ಆ ಸತ್ಯಕ್ಕೆ ದೂರವಾದ ಮಾತುಗಳನ್ನು, ವಿಚಾರಗಳನ್ನು ಹೇಗೆ ಪುನಃ ಸದನದ ಮುಂದೆ ತೆಗೆದುಕೊಳ್ಳಬಹುದೆಂದು ನಿಮ್ಮ ಅನುಭವದ ಆಧಾರದ ಮೇಲೆ ಗೊತ್ತಾಗಿರಬೇಕಲ್ಲಾ?

ಶ್ರೀ ಬಿ.ಎಸ್. ಯಡಿಯೂರಪ್ಪ: ಆಗಬಹುದು ಸ್ವಾಮಿ.

ಶ್ರೀ ಎಸ್.ಬಂಗಾರಪ್ಪ: ಹೌಸ್ ಬಿಲ್ಡಿಂಗ್ ಸೊಸೈಟೀಸ್ ವಿಚಾರದಲ್ಲಿ there are 1600 and odd societies throughout the State. Bangalore City itself has got 400 odd societies. 423 in Bangalore city.

ಮಾನ್ಯ ಸಭಾಧ್ಯಕ್ಷರೆ ಒಂದು ವಿಚಾರ ನಾವು ಬಹಳ ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ. ನಾವು ಮೊನ್ನೆ ಮೊನ್ನೆ ಕೂಡಾ ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದುಂಟು. ಆದ್ದರಿಂದ ಇದರ ಬಗ್ಗೆ ವಿವರವಾದ ಚರ್ಚೆ ಅನಗತ್ಯ. ಹಣವನ್ನು ಬಹಳ ಕಷ್ಟಪಟ್ಟು ತಂದು ಕಟ್ಟಿ ಮೆಂಬರ್ ಆಗಿ ಏನೋ ಒಂದು ಸೈಟ್ ಸಿಗುತ್ತದೆ ಎನ್ನುತಕ್ಕಂಥ ಆಸೆಯಿಂದ ಹೋಗಿರುವ ಜನರು ಅಲ್ಲಿದ್ದಾರೆ. ಇಲ್ಲಿ ಏತಕ್ಕಾಗಿ ಸೊಸೈಟಿಗಳು ಬಂದವು? ಸೊಸೈಟಿಗಳು ಹುಟ್ಟಿರತಕ್ಕಂಥಾದ್ದು ನಮ್ಮ ಕಾಲದಲ್ಲಿ ಏನಲ್ಲ ಯಾವುದೋ ಕಾಲದಲ್ಲಿ ಹುಟ್ಟಿಕೊಂಡಿದೆ. ಬಹಳ ವರ್ಷಗಳಿಂದ ಹುಟ್ಟಿಕೊಂಡು ಅಲ್ಲಿ ಇವೆ. ಇವತ್ತು. ಬಿ.ಡಿ.ಎ. ನೇರವಾಗಿ ಸೈಟುಗಳನ್ನು ಡಿಸ್ಟ್ರಿಬ್ಯೂಷನ್ ಮಾಡತಕ್ಕಂಥ ವಿಧಾನ ಇಟ್ಟುಕೊಂಡಿದ್ದರೆ anotheristhroughcooperativesocieties.ಎನ್.ಜಿ.ಇ.ಎಫ್.ನವರು. ಮಾಡಿಕೊಂಡಿದ್ದಾರೆ. ಐ.ಟಿ.ಐ.ನವರು ಮಾಡಿಕೊಂಡಿದ್ದಾರೆ. ಸ್ಟೇಟ್ ಗೌರ್ನಮೆಂಟ್ ಎಂಪ್ಲಾಯೀಸ್ ಮಾಡಿಕೊಂಡಿದ್ದಾರೆ. ಸೆಂಟ್ರಲ್ ಗೌರ್ನಮೆಂಟ್ ಎಂಪ್ಲಾಯಿಸ್ ಮಾಡಿಕೊಂಡಿದ್ದಾರೆ ಅಮೇಲೆ ಬೇರೆ ಬೇರೆ ಖಾಸಗಿಯವರೂ ಮಾಡಿಕೊಂಡಿದ್ದಾರೆ. ಅಷ್ಟೇ ಅಲ್ಲ ನಮ್ಮ ಲೆಜಿಸ್ಲೇಚರ್ ಹೌಸಿಂಗ್ ಕೋ-ಆಪರೇಟಿವ್ ನಮ್ಮದೂ ಕೂಡ ಒಂದು ಇದೆ. ಅದು ತಪ್ಪೆಂದು ನಾನು ಹೇಳುತ್ತಿಲ್ಲ. ಅದು ಕೂಡ ಇದೆ. ಮೆಂಬರ್ಸ್ ಯಾರು ಯಾರೋ ಆಗಿರುತ್ತಾರೆ. ಯಾವುದೇ ಸೊಸೈಟಿ ಇರಬಹುದು. ನಾನು ಜನರಲ್ ಆಗಿ ಹೇಳುತ್ತಿದ್ದೇನೆ. ನಮ್ಮ ಲೆಜಿಸ್ಲೇಚರ್ ಸೊಸೈಟಿ ಬಗ್ಗೆ ನಾನು ಮಾತನಾಡುತ್ತಿಲ್ಲ ಕ್ಷಮಿಸಬೇಕು. ಬೇರೆ ಬೇರೆ ಆಪಾದನೆಗಳು ಬಂದಿರತಕ್ಕಂಥಾದರಲ್ಲಿ ಅದರಲ್ಲಿ ಜೆನಿಯನ್ ಮೆಂಬರ್ಸ್ ಇಲ್ಲದೆ ಕೆಲವು ಮೋಸದ ಸದಸ್ಯತ್ವ ಇಟ್ಟುಕೊಂಡು ಸೊಸೈಟಿ ಮಾಡಿದ್ದಾರೆ ಎನ್ನುತಕ್ಕಂಥ ಅಪಾದನೆ ಬಂದಾದಮೇಲೆ ಕೆಲವು office bearers of certain societies ಹಣದ ದುರುಪಯೋಗ ಮಾಡಿದ್ದಾರೆ ಎನ್ನುತಕ್ಕಂಥ ಆಪಾದನೆ ಬಂದ ಮೇಲೆ ದಿನಾಂಕ 10-3-1988 ರಲ್ಲಿ ಜಿ.ವಿ.ಕೆ. ರಾವ್ ಒಂದನ್ನು ಕಾನ್ಸಿಟಿಟ್ಯೂಟನ್ನು ಮಾಡಿದ್ದರು. ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ ಅದರಲ್ಲಿ ಕೆಲವು ಈ ರೀತಿ ದುರುಪಯೋಗ ಮಾಡಿದೆ ಎನ್ನತಕ್ಕಂಥಾದ್ದನ್ನು ಹೇಳಿದ್ದಾರೆ ಮತ್ತು ಇನ್ನು ಕೆಲವು ಒಳ್ಳೆಯವು ಇವೆಯೆಂದು ಹೇಳಿದ್ದಾರೆ. ನಾವು 1989ರಲ್ಲಿ ಅಧಿಕಾರಕ್ಕೆ ಬಂದಾದಮೇಲೆ ಈ ವಿಚಾರವನ್ನು ಗಮನಿಸಿದ್ದೇವೆ. ಶ್ರೀಮಾನ್ Hon'ble Minister Sri Ramesh

ಅವರ ನೇತೃತ್ವದಲ್ಲಿ ಸಾವಿರಾರು ಜನ ಸೆಂಟ್ರಲ್ ಗೌರ್ನಮೆಂಟ್ ರೈಲ್ವೇ ಎಂಪ್ಲಾಯಿಸ್ ಎಲ್ಲ ಸೇರಿಗೊಂಡು ಒಂದು ದೊಡ್ಡ ಡೆಲಿಗೇಷನ್ ಬಂದಿದ್ದರು. ಮಾನ್ಯ ದಯಾನಂದರಾವ್‌ರವರು ಡೆಲಿಗೇಷನ್ ಬಂದರು ಬೇರೆ ಖಾಸಗಿ ಜನರೂ ಕೂಡಾ ಡೆಲಿಗೇಷನ್ ಬಂದಿದ್ದರು. ಆಮೇಲೆ ಮೈಸೂರಿನಿಂದ ಬಂದಿದ್ದರು. ರಾಜ್ಯದ ಬೇರೆ ಕಡೆಯಿಂದಲೂ ಕೂಡಾ ಡೆಲಿಗೇಷನ್ ಬಂದಿದ್ದಾರೆ. ಸ್ವಾಮಿ ನಾವು ಸೊಸೈಟಿ ಮಾಡಿಕೊಂಡಿದ್ದೇವೆ, ನಮ್ಮ ಅರ್ನಿಂಗ್ಸ್ ಮಾಡಿ ಗ್ರ್ಯಾಚುಯಿಟಿ ಫಂಡ್ಸ್ ಮತ್ತೊಂದು

ಅಥವಾ ಖಾಸಗಿಯವರಿಂದ ಹಣ ತೆಗೆದುಕೊಂಡು ಇದರಲ್ಲಿ ಹಾಕಿ ಸದಸ್ಯತ್ವ ತೆಗೆದುಕೊಂಡು ಹಣ ಡಿಫಾಜಿಟ್ ಮಾಡಿದ್ದೇವೆ. ನಮಗೆ ಈಗ ಸೈಟು ಸಿಗುತ್ತಿಲ್ಲ ಎನ್ನುತಕ್ಕಂಥ ಮಾತು ಇಟ್ಟು ಪದೇ ಪದೇ ರೆಪ್ರೋಸೆಂಟೇಷನ್ ಕೊಟ್ಟಿದ್ದಾರೆ. ಇದನ್ನು ನಮಗೇ ಕೊಟ್ಟಿದ್ದಾರೆಂದಲ್ಲ ಕೊಡುತ್ತಾರೆ ಇಂಥವು ಇರುವವರೆಗೂ ರೆಪ್ರೆಸೆಂಟೇಷನ್ ಕೊಟ್ಟೇ ಕೊಡುತ್ತಾರೆ. ಆದರಲ್ಲಿ ನಾವು ಏನು ಮಾಡಬೇಕು? How to go about the entire question? ಎನ್ನುತಕ್ಕಂಥಾದ್ದು ನಮ್ಮ ಮುಂದೆ ಬಂತು. ಬಂದಾಗ ಇದರ ಬಗ್ಗೆ ಸಂಪೂರ್ಣವಾಗಿ ಈ ವಿಚಾರ ಮಾಡುವುದು ಬಹಳ ಒಳ್ಳೆಯದೆಂದು ಹೇಳಿ ಶ್ರೀ ಮಾನ್ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಅಂದರೆ 2-5-1990 ಒಂದು ಕ್ಯಾಬಿನೆಟ್ ಸಬ್ ಕಮಿಟಿ ಆಗಿದೆ. ಎಲ್ಲಾ ಸೊಸೈಟಿಗಳ ವಿಚಾರದಲ್ಲಿ ಸಂಪೂರ್ಣವಾಗಿ ನೋಡಿ ಒಂದು ವರದಿಯನ್ನು ತೆಗೆದುಕೊಂಡಾದ ಮೇಲೆ ನಾವು ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಅಂತಿಮವಾದ ತೀರ್ಮಾನ ಮಾಡೋಣ ಎನ್ನತಕ್ಕ ದೃಷ್ಟಿಯಿಂದ ತೀರ್ಮಾನ ಮಾಡಿದೆ. ಈಗಲೂ ಕೂಡ ಕ್ಯಾಬಿನೆಟ್ ಸಬ್ ಕಮಿಟಿ ಇದೆ. ಸುಮಾರು ಎರಡು ಮೂರು ಎಷ್ಟೋ ಸಾರಿ ಮೀಟ್ ಆಗಿದೆ ಶ್ರೀ ಜಿ.ವಿ.ಕೆ ರಾವ್ ಕಮಿಟಿ ರಿಪೋರ್ಟ್‌ನಲ್ಲಿ ಎಲ್ಲಾ ಸೊಸೈಟಿಗಳ ಬಗ್ಗೆ ರೆಕ್ಮೆಂಡೇಷನ್ ಬಂದಿಲ್ಲ ಕೆಲವು ಬಗ್ಗೆ ಮಾತ್ರ ಮಾಡುವುದಕ್ಕೆ ಸಾಧ್ಯವಾಗಿದೆ. ಇನ್ನೂ ಅನೇಕ ಸೊಸೈಟಿಗಳದ್ದು ಹಾಗೆಯೇ ಉಳಿದಿದೆ ಎನ್ನತಕ್ಕ ವಿಚಾರ ತಮಗೆಲ್ಲ ಗೊತ್ತಿದೆ. There fore cabinet sub-committee is now of the entire issue. It is our own creation after all. It is the creation of the Cabinet itself. ಇವತ್ತು ಯಾವುದೇ ವಿಚಾರ ಬಂದರೂ ಕೂಡ ಯಾವುದೇ ಸೊಸೈಟಿ ವ್ಯವಹಾರ ಮಾಡುವುದಕ್ಕೆ ಸಾಧ್ಯ ಆಗುತ್ತಿದೆಯೋ? except conducting their general body meetings, ಆಫೀಸ್ ಬೇರರ್ಸ್ ಸೆಲೆಕ್ಟ್ ಮಾಡುವುದು ಮತ್ತೊಂದು ವಿಚಾರ ಜನರಲ್ ಬಾಡಿ ಮೀಟಿಂಗ್ ಮಾಡುವುದು ಬಿಟ್ಟರೆ ಯಾವುದೇ ತೆಗೆದುಕೊಂಡು ಹೋಗುವುದು. ಕೊಡುವುದು ಎಲ್ಲಾ ಆಕ್ಟಿವಿಟೀಸ್ ಕಂಪ್ಲೀಟ್ ಆಗಿ ಸ್ಟಾಂಡ್ ಸ್ಟಿಲ್ ಆಗಿ ಬಂದು ನಿಂತಿದೆ. ನಾವು ಈ ವಿಚಾರ ತೆಗೆದುಕೊಂಡು ಹೋಗಿ ಅದರಲ್ಲಿ ಇಂಟರ್‌ಫಿಯರ್ ಮಾಡುವುದಕ್ಕೆ ಆಗಲಿ ಅನ್ಯಾಯ ಮಾಡುತ್ತಾರೆಂದು ಹೇಳತಕ್ಕ ಸಂದರ್ಭವಾಗಲಿ ಇಲ್ಲ. including those matters. ಹಾಗೆ ಬಂದರೂ ಕ್ಯಾಬಿನೆಟ್ ಕಮಿಟಿಯವರು ನೋಡಿ ಅನಂತರ ಕ್ಯಾಬಿನೆಟ್ ಮುಂದೆ ಬಂದಾದಮೇಲೆ ನಾವು ಆ ತೀರ್ಮಾನ ಮಾಡಬೇಕು ಎನ್ನುವ ದೃಷ್ಟಿಯಿಂದ ಅದನ್ನು ಇಟ್ಟುಕೊಂಡಿದ್ದೇವೆ. ತಮ್ಮ ಕಾಲದಲ್ಲಿ ಯಾವ ರೀತಿ ವಿಚಾರ ಮಾಡಿದ್ದೀರಿ ಹೇಗೆ ಇತ್ತು ಒಳ್ಳೆಯ ಜನಕ್ಕೆ ಯಾವ ರೀತಿ ತೊಂದರೆ ಆಗುತ್ತಿದೆ ಅದನ್ನು ಯಾವ ರೀತಿ ಸರಿಪಡಿಸಬೇಕು ಎಂದು ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಾವು ಕೂಡ ವಿಚಾರ ಮಾಡುತ್ತೇವೆ. It is not an easy matter. Hope all of you will agree with this proposal. ಅದು ಅಷ್ಟು ಸುಲಭ ಆಗುವುದಿಲ್ಲ, ಏಕೆಂದರೆ ನಾವು ಎಲ್ಲಾ ಹೊರಟು ಹೋಗಿ ಬಿಡಲಿ ಎಂದರೆ ಎಲ್ಲಾ ಸೊಸೈಟಿಗಳಿದ್ದು ಲೆಕ್ಕ ಹಾಕಿದರೆ ಲಕ್ಷಗಟ್ಟಲೆ ಕೋಟಿಗಟ್ಟಲೆ ಹಣ ನೀರು ಪಾಲು ಆಗಿಬಿಡುತ್ತದೆ. ಪಾಪ ಜಿನಿಯನ್ ಮೆಂಬರ್ಸ್ ಹಣ ಹೋಗಿಬಿಡುತ್ತದೆ. ಆದರೆ ಈ ಗಲಾಟೆಯಲ್ಲಿ ಕೆಲವರು ಹಣ ತಿಂದವರು ಕೂಡ ಉಳಿದುಕೊಂಡು ಬಿಡಬಹುದು ಎನ್ನುವುದು ನಮ್ಮೆಲ್ಲರ ಯೋಚನೆ ಇದೆ. ಅದನ್ನು ಹೇಗೆ ಸರಿಪಡಿಸಬೇಕು ಎನ್ನತಕ್ಕ ವಿಚಾರದಲ್ಲಿ ನಾವು ಕೂಡ ವಿಚಾರ ಮಾಡುತ್ತೇವೆ. ಈ ಸಂದರ್ಭದಲ್ಲಿ ನಾವು 1601 ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್ ಸೊಸೈಟಿಗಳು ಏನು ಇವೆ ಇವುಗಳ ವಿಚಾರದಲ್ಲಿ ನಾವು ಯಾವುದಕ್ಕೂ ಕೂಡ ಇಂಟರ್‌ಫಿಯರ್ ಆಗದೇ ಅಂತಿಮವಾಗಿ ಕ್ಯಾಬಿನೆಟ್ ತೀರ್ಮಾನ

ಮಾಡುವವರೆಗೆ ಅರ್ಥಾತ್ ಸರ್ಕಾರ ತೀರ್ಮಾನ ಮಾಡುವವರೆಗೆ ಯಾವುದಕ್ಕೂ ಇಂಟರ್‌ಫಿಯರ್ ಆಗಬಾರದು ಎನ್ನತಕ್ಕ ದೃಷ್ಟಿಯಿಂದ ನಾವು ಈ ವಿಚಾರವನ್ನು ಇಲ್ಲಿಯವರೆಗೆ ಇಟ್ಟುಕೊಂಡು ಕುಳಿತುಕೊಂಡಿದ್ದೇವೆ. ಇದರಲ್ಲಿ ತಾವು ಏನು ವಿಚಾರ ಪ್ರಸ್ತಾಪ ಮಾಡಿದಿರಿ ಎಂದರೆ ಕೆ.ಹೆಚ್.ಪಾಟೀಲ್ ಅವರು ಕೋ-ಆಪರೇಷನ್ ಮಿನಿಸ್ಟರ್ ಆಗಿದ್ದ ಕಾಲದಲ್ಲಿ ಅಡ್ಮಿನಿಸ್ಟ್ರೇಟರನ್ನು ಹಾಕಿದಿರಿ ಎಂದು ತಾವು ಹೇಳಿದಿರಿ ನಾನು ಇಲ್ಲ ಎನ್ನತಕ್ಕ ಮಾತನ್ನು ಹೇಳುತ್ತಾ ಇಲ್ಲ, ಫೈಲ್ಸ್ ನೋಡತಕ್ಕ ಅವಶ್ಯಕತೆ ಇಲ್ಲ. There is an order passed by the Hon'ble Minister, my senior colleague, Sri K.H.Patil, but the point is - ಅಲ್ಲಿ ಆಕ್ಸಿಡೆಂಟ್ ಇಲ್ಲ ಎಂದರೆ ನಾವು ಸೊಸೈಟಿಯನ್ನು ನಮ್ಮ ಕಂಟ್ರೋಲ್‌ಗೆ ತೆಗೆದುಕೊಳ್ಳತಕ್ಕ ಅವಶ್ಯಕತೆ ಬೀಳುವುದಿಲ್ಲ ಎನ್ನತಕ್ಕ ಮಾತು ಇದೆ. The entire issue is now seized by the Cabinet Sub Committee. ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಈ ವಿಚಾರ ಇದ್ದಾಗ ನಾವು ಮಾಡತಕ್ಕದ್ದು ಸರಿಯಾಗಲಾರದು ಎನ್ನುವ ದೃಷ್ಟಿಯಿಂದ ನಾನೇ ಫೈಲ್ ತರಿಸಿದೆ. ಈ ಕೆಲಸ ಮಾಡಿದರೆ what is wrong with that? ಫೈಲನ್ನು ತರಿಸಿ ನಾನು ಹೊಸ ಕೋ-ಮಿನಿಸ್ಟರ್‌ಗೂ ಕೂಡ ಹೇಳಿದ್ದೇನೆ. ಆದರೆ ಒಂದು ಮಾತು. ಮಾನ್ಯ ಕೆ.ಹೆಚ್.ಪಾಟೀಲರು ಸೀನಿಯರ್ ಮೋಸ್ಟ್ ಮಿನಿಸ್ಟರ್ ಇದನ್ನು ಹ್ಯಾಂಡಲ್ ಮಾಡುತ್ತಾ ಇರಲಿಲ್ಲವೇ ಎಂದು ಹೇಳಬಹುದು. ನಾನು ಒಂದು ಮಾತು ಹೇಳುತ್ತೇನೆ. ಇವತ್ತು ಅವರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ನೀವು ಎಷ್ಟು ಗೌರವ ಕೊಡುತ್ತೀರೋ ನಾನು ಕೂಡ ಅಷ್ಟೇ ಗೌರವ ಕೊಡುತ್ತೇನೆ. ನಾವೆಲ್ಲ ಒಟ್ಟಿಗೆ ಇದ್ದೇವೆ. ಇದರ ಬಗ್ಗೆ ಅನುಮಾನ ಬೇಕಿಲ್ಲ ಅವರ ಬಗ್ಗೆ ಅಪಾರವಾದ ಗೌರವ ಇಟ್ಟುಕೊಂಡೇ ನಾನು ಮಾತನಾಡುತ್ತಿದ್ದೇನೆ. ಇವತ್ತು RDPR port folio is not a smal one. ಹಾಗೆ ನೋಡಿದರೆ ಆರ್ಗ್ಯುಮೆಂಟ್‌ಗೆ ಹೋದರೆ In fact it is more than your Co-operation Department. He is capable of handling. ಅದಕ್ಕೋಸ್ಕರವಾಗಿ ನಾವು ಆರ್.ಡಿ.ಪಿ.ಆರ್. ಕೊಟ್ಟಿದ್ದೇವೆ ಎನ್ನುತಕ್ಕ ಮಾತನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಈ ಸದನದ ಗಮನಕ್ಕೆ ತರುತ್ತಿದ್ದೇನೆ ಈ ಸಂದರ್ಭದಲ್ಲಿ ಯಾವುದೇ ವಿಚಾರದಲ್ಲಿ ಇದರಲ್ಲಿ ವ್ಯತ್ಯಾಸ ಬರತಕ್ಕ ಸಂದರ್ಭ ಇಲ್ಲ, ಅದು ಬಂದಿರತಕ್ಕದ್ದು ವ್ಯತ್ಯಾಸ ಆಗಬಾರದು. ಕ್ಯಾಬಿನೆಟ್ ಸಬ್ ಕಮಿಟಿ ಇದೆ. ಏಕೆಂದರೆ ವೀರೇಂದ್ರ ಪಾಟೀಲರ ಕಾಲದಲ್ಲಿ ಆಗಿರತಕ್ಕದ್ದು ಸಹಜವಾಗಿ ಎಲ್ಲಿ ವ್ಯತ್ಯಾಸ ಬಂದು ಬಿಡಬಹುದು ಎನ್ನುವ ಕಾರಣದಿಂದ ನಾವು ಮಾಡಿರತಕ್ಕದ್ದು. ಇದರ ಬಗ್ಗೆ ಸಂಪೂರ್ಣವಾಗಿ ನಾವು ಚರ್ಚೆ ಮಾಡಿ ಕ್ಯಾಬಿನೆಟ್ ಸಬ್ ಕಮಿಟಿ ರಿಪೋರ್ಟ್ ತೆಗೆದುಕೊಂಡು ಸರ್ಕಾರದವರು ಕ್ಯಾಬಿನೆಟ್ ಡಿಸಿಷನ್ ಮುಖಾಂತರವಾಗಿ ತೀರ್ಮಾನ ಮಾಡುತ್ತೇವೆ. ಆದರೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಯಾರ್ಯಾರು ಜೆನಿಯನ್ ಮೆಂಬರ್ಸ್ ಇದ್ದಾರೆ. ಅವರಿಗೆ ಅನ್ಯಾಯ ಆಗದ ಹಾಗೆ ನೋಡಿಕೊಳ್ಳತಕ್ಕ ಜವಾಬ್ದಾರಿ ನಮ್ಮ ಮೇಲೆ ಅಂದರೆ ಸರ್ಕಾರದ ಮೇಲೆ ಇದೆ ಮತ್ತು ತಮ್ಮ ಮೇಲೂ ಇದೆ ಇವತ್ತು ಅದನ್ನು ಚರ್ಚೆ ಮಾಡುವ ಕಾಲದಲ್ಲಿ ಅದನ್ನು ಗಮನದಲ್ಲಿಟ್ಟುಕೊಂಡು ಹೋಗೋಣ ಎನ್ನತಕ್ಕ ವಿಚಾರವನ್ನು ಮಾತ್ರ ಸೂಕ್ಷ್ಮವಾಗಿ ಹೇಳಿದ್ದೇನೆ. ವಿವರಗಳಿಗೆ ಹೋಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೆ.ಹೆಚ್. ಪಾಟೀಲರಿಗೆ ಬಹಳ ದೊಡ್ಡ ಇಲಾಖೆ ಕೊಟ್ಟಿದ್ದೇನೆ 'He is capable of handling' ಎನ್ನತಕ್ಕ ಮಾತನ್ನು ಹೇಳಿದಿರಿ. As a Chief Minister it is your prerogative. ತಾವು ಯಾವ ಇಲಾಖೆಯನ್ನು ಯಾರಿಗೆ ಬೇಕಾದರೂ ಕೊಡಬಹುದು. ಅದನ್ನು ನಾವು ಕೊಶ್ಚನ್ ಮಾಡುತ್ತಾ ಇಲ್ಲ, ನನಗೆ ಬೇಕಾಗಿರುವುದು ಏನೆಂದರೆ ಮಾನ್ಯ ಮಂತ್ರಿಗಳಾಗಿರತಕ್ಕ ಬಸವಲಿಂಗಪ್ಪನವರು ತಮ್ಮ

ಪೋರ್ಟ್‌ಫೋಲಿಯೋ ಬಗ್ಗೆ ಮಾತನಾಡುತ್ತಾ ಪತ್ರಿಕಾ ಹೇಳಿಕೆಯಲ್ಲಿ ಏನು ಹೇಳಿದ್ದಾರೆ. ಎಂದರೆ.

ಶ್ರೀ ಎಸ್. ಬಂಗಾರಪ್ಪ : ನಾನು ಅನಂತರ ಆ ವಿಷಯಕ್ಕೆ ಬರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏಕೆಂದರೆ ಚಂದ್ರೇಗೌಡರು. ನಾಣಯ್ಯನವರು ಹೇಳಿ ಇದನ್ನು ಮಾಡಿಸಿದರು ಎಂದರು ಮಾನ್ಯ ಬಸವಲಿಂಗಪ್ಪನವರು. ಅದಕ್ಕೋಸ್ಕರವಾಗಿ ನಾನು ಕೇಳುತ್ತಿದ್ದೇನೆ.

SRI S. BANGARAPPA: I am going to meet that point. political issues are about the Ministry, and destribution of port-folios. All those matters I will take up at the fag end of my reply. Regarding House Building Co-ofperative Societies, since the matter is seized by the Cabinet Sub-Comittee, I would not like to throw more light than this one. ಆದುದರಿಂದ ಅದು ಬೇಡ ಎನ್ನತಕ್ಕಂಥದ್ದೂ ....

ಶ್ರೀ ಡಿ.ಬಿ. ಚಂದ್ರೇಗೌಡ: ಅದೂ ಕೂಡ ಸಬ್‌ಜ್ಯುಡೀಸ್ ಆಗುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ: ಅದು ಸಬ್‌ಜ್ಯುಡೀಸ್ ಆಗುತ್ತದೆ ಎಂದು ಯಾರು ಹೇಳಿದರು? ನಾವ್ಯಾರೂ ಹೇಳಿಲ್ಲವಲ್ಲ? ಇನ್ನು ಈ ಸಂದರ್ಭದಲ್ಲಿ ಗ್ರಾನೈಟ್ ಕ್ವಾರಿ ವಿಚಾರದಲ್ಲಿ ನಮ್ಮ ಮಾನ್ಯ ಮಿತ್ರರುಗಳು ಬಹಳಷ್ಟು ಜನರು ಮಾತನಾಡಿದ್ದಾರೆ. ಇದರ ಬಗ್ಗೆ ತಾವುಗಳು ಧರಣಿ ಕೂಡ ಮಾಡಿದ್ದೀರಿ. ಇದರ ಬಗ್ಗೆ ವಿಚಾರಣೆಗಾಗಿ ಹೌಸ್‌ಕಮಿಟಿಯ ರಚನೆ ಕೂಡ ಆಗಬೇಕೆಂದು ಹೇಳಿದ್ದೀರಿ. ಹೌಸ್‌ಕಮಿಟಿ ರಚನೆ ಮಾಡುವ ವಿಚಾರದಲ್ಲಿ ನಾವುಗಳು ಮಾನ್ಯ ಅಧ್ಯಕ್ಷರ ಚೇಂಬರ್‌ನಲ್ಲಿ ಕುಳಿತುಕೊಂಡು ಮಾತನಾಡಿ ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ಏಕೆಂದರೆ ಆ ಸದನದಲ್ಲಿಯೂ ಮಾನ್ಯ ಸದಸ್ಯರು ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರನ್ನು ಕೂಡ ಅಂದರೆ ಎರಡೂ ಸದನಗಳ ಸದಸ್ಯರು ಅಧ್ಯಕ್ಷರ ಕೊಠಡಿಯಲ್ಲಿ ಮಾತನಾಡಿ ಆ ಮೇಲೆ ಅಧ್ಯಕ್ಷರು ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ನಾವೆಲ್ಲರೂ ಸೇರಿ ಸನ್ಮಾನ್ಯ ಅಧ್ಯಕ್ಷರಿಗೆ ಆ ಒಂದು ನಿರ್ಧಾರ ಮಾಡುವ ವಿಚಾರವನ್ನು ಬಿಟ್ಟಿದ್ದೇವೆ. All of us will have to help the Hon'ble Speaker. You know the position. ನಾವು ನೀವುಗಳು ಎಲ್ಲರೂ ಸೇರಿ ಅವರಿಗೆ ಈ ವಿಚಾರದಲ್ಲಿ ಸಹಕಾರ ನೀಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸಮಿತಿ ಮಾಡುವುದನ್ನು ತಾವುಗಳು ಈಗ ಹೇಳುತ್ತೀರಲ್ಲ?

ಶ್ರೀ ಎಸ್ ಬಂಗಾರಪ್ಪ : ನಾನು ಆ ವಿಚಾರವನ್ನು ಹೇಳುತ್ತಿದ್ದೇನೆ ಆದರೆ ಈಗ ಇಲ್ಲಿ ಅನೌನ್ಸ್ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಮೇಲ್ಮನೆಯ ಸದಸ್ಯರು ಇರಬೇಕಾಗುತ್ತದೆ ಎಂಬ ಅಭಿಪ್ರಾಯ ಬಂದಿರುವುದರಿಂದ ಮತ್ತು ಮಾನ್ಯ ಅಧ್ಯಕ್ಷರಿಗೆ ಸದನದ ಸಮಿತಿಯ ವಿಚಾರದಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಅಧಿಕಾರವನ್ನು ನಾವೆಲ್ಲರೂ ಕೊಟ್ಟಿದ್ದೇವೆ. ಆ ಮೇಲೆ ಅವರ ಕೊಠಡಿಯಲ್ಲಿ ಕುಳಿತು ಈ ಬಗ್ಗೆ ಮಾತನಾಡೋಣ. ಇದು ನೀತಿ ಪ್ರಶ್ನೆ. There is an understanding. ನೀವುಗಳು ಗ್ರಾನೈಟ್ ಗುತ್ತಿಗೆಗೆ ಲೈಸೆನ್ಸ್ ಕೊಟ್ಟಿರುವ ವಿಚಾರದಲ್ಲಿ ಹೇಳಿದ್ದೀರಿ. ಒಂದೇ ಒಂದು ದಿವಸದಲ್ಲಿ ಎಷ್ಟೊಂದು ಲೈಸೆನ್ಸ್‌ಗಳನ್ನು ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಹೌದು ಈಗಾಗಲೇ ನಾನು ಈ ಬಗ್ಗೆ ಸದನದಲ್ಲಿ ಉತ್ತರ ಕೊಟ್ಟಿದ್ದೇನೆ. ಅದನ್ನೇ ಮತ್ತೆ ರಿಪೀಟ್ ಮಾಡುತ್ತಾ ಇದ್ದೇನೆ. ಅದನ್ನು ಬಿಟ್ಟು ನನಗೆ ಬೇರೆ ದಾರಿ ಉಳಿದಿಲ್ಲ. ಬ್ಲಾಕ್ ಗ್ರಾನೈಟ್ ಇರಬಹುದು ಪಿಂಕ್ ಇರಬಹುದು ಮತ್ತೊಂದು ಇರಬಹುದು

ಆದರೆ ನಮ್ಮ ರಾಜ್ಯದಲ್ಲಿ ಇರತಕ್ಕಂಥ ಇದರ ಡಿಪಾಸಿಟ್ ಎಷ್ಟು ಎಂಬ ಬಗ್ಗೆ ಸರಿಯಾದ ಅಂದಾಜು ಇಲ್ಲ ಅದನ್ನು ಸೂಕ್ತ ರೀತಿಯಲ್ಲಿ ಅಂದಾಜು ಮಾಡಿದಾಗ ಬರುತ್ತದೆ ಎಂದು ಕಾಣುತ್ತದೆ. ಸುಮಾರು 10ಸಾವಿರ ಎಕರೆ ಬ್ಲಾಕ್ 50ಸಾವಿರ ಎಕರೆ ಪಿಂಕ್ ಮತ್ತು ಬೇರೆ ಬೇರೆ ಮಲ್ಟಿ ಕಲರ್‌ನದ್ದು ಬರಬಹುದು ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಕೆಲವು ಸಾರಿ ಸ್ಟ್ರೆಚ್‌ಗಳು ಜಾಸ್ತಿ ಬಂದಾಗ ಲಕ್ಷ ಎಕರೆಗಳು ಮೇಲೇ ಹೋದರೂ ಹೋಗಬಹುದು. ಇದರಲ್ಲಿ ತಮಗೆ ಗೊತ್ತಿರುವ ಹಾಗೆ ಪುನಃ ವಿವರಗಳಿಗೆ ಸೆಕ್ಷನ್ 33(ಎ) ಬಗ್ಗೆ ನಾನು ಹೋಗುವುದಿಲ್ಲ, ಏಕೆಂದರೆ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಈಗಾಲೆ ಉತ್ತರ ಕೊಟ್ಟಿದ್ದೇವೆ. ಇದರಲ್ಲಿ ನಾನು ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ನಮ್ಮಲ್ಲಿ ಹಿಂದೆ ಲೈಸೆನ್ಸ್‌ನ್ನು ಕೊಡತಕ್ಕಂಥ ಪದ್ಧತಿ ಇರಲಿಲ್ಲ. ಇಲ್ಲೀಗಲ್ ಕ್ವಾರೀಸ್ ಸಿಕ್ಕಾಪಟ್ಟೆ ಹೋಗುತ್ತಾ ಇತ್ತು. ಕೆಲವರು ಒಂದೊಂದು ಏರಿಯಾವನ್ನು ತಾವೇ ಗುತ್ತಿಗೆಗೆ ಹಿಡಿದುಕೊಂಡ ಹಾಗೆ ವರ್ತಿಸುತ್ತಿದ್ದರು. ಅವರದ್ದು ಕಾನೂನು ಪ್ರಕಾರದ ಗುತ್ತಿಗೆಯಲ್ಲ. ಆದರೂ ಕೂಡ ಅವರು ದುಂಡಾವರ್ತಿಯಿಂದ ಆ ಒಂದು ಏರಿಯಾವನ್ನು ತಮ್ಮದೇ ಎಂಬ ರೀತಿಯಲ್ಲಿ ಹಿಡಿದುಕೊಂಡು ಬಿಡುತ್ತಿದ್ದುದು ಅಲ್ಲಿ ಬೇರೆಯಾರೂ ಹೋಗುವಹಾಗಿರಲಿಲ್ಲ. ಮತ್ತೊಬ್ಬರು ಅಲ್ಲಿ ಕಾಲಿಡುವ ಹಾಗೆ ಇರಲಿಲ್ಲ ತಾವೇ ಹೇಳಿದ್ದೀರಿ. ಈ ರೀತಿಯ ಇಲ್ಲೀಗಲ್ ಕ್ವಾರಿಗಳಿಂದಾಗಿ ಸರಕಾರದ ಬೊಕ್ಕಸಕ್ಕೆ ರೆವಿನ್ಯೂ ಏನೇನೂ ಬರುತ್ತಾ ಇರಲಿಲ್ಲ ಎನ್ನುವುದು ಸ್ಪಷ್ಟವಾಗಿ ವೇದ್ಯವಾಗಿರತಕ್ಕಂಥ ವಿಚಾರವಾಗಿದೆ. ಗ್ರಾನೈಟ್ ಲಾರಿಗಳಲ್ಲಿ ಬೇಕಾದ ಹಾಗೆ ಮಂಗಳೂರು ಬಂದರಕ್ಕೆ ಮತ್ತಿತರ ಕಡೆಗಳಿಗೆ ಸಾಗಾಣಿಕೆಯಾಗುತ್ತಿತ್ತು. ಇದರಿಂದ ಸರಕಾರಕ್ಕೆ ಆಗುವ ನಷ್ಟವನ್ನು ತಪ್ಪಿಸಬೇಕೆಂದು ಮತ್ತು ಇದನ್ನು ಹೀಗೆ ಬಿಟ್ಟರೆ ಆಗುವುದಿಲ್ಲ ಎಂದು ಸರಕಾರಕ್ಕೆ ಈ ಮೂಲಕ ರೆವಿನ್ಯೂ ತೆಗೆದುಕೊಳ್ಳ ಬೇಕೆಂದು ವಿಚಾರ ಮಾಡಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ : ಮಾನ್ಯ ಅಧ್ಯಕ್ಷರೇ, ಈಗ ಆರೋಪ ಏನೆಂದರೆ, ರಾತ್ರಿ ಬೆಳಗಾಗುವುದರೊಳಗೆ ನೂರಾರು ಜನರಿಗೆ ಕ್ವಾರಿಯಿಂಗ್ ಲೈಸೆನ್ಸ್ ಕೊಟ್ಟಿದ್ದಾರೆಂದು. ಅದಕ್ಕೆ ಉತ್ತರವಾಗಿ ಏನು ಹೇಳಿದರು ಎಂದರೆ, ಹಿಂದೆ ಗ್ರಾನೈಟ್ ಮಂಗಳೂರಿಗೆ ಹೋಗುತ್ತಿತ್ತು. ಮತ್ತು ಲಾರಿಗಳಲ್ಲಿ ತುಂಬಿಕೊಂಡು, ಗಾಡಿಗಳಲ್ಲಿ ತುಂಬಿಕೊಂಡು ಹೋಗುತ್ತಿತ್ತು. ಅಂದರೆ ಹಿಂದಿನ ಸರ್ಕಾರ ಬುದ್ಧಿಪೂರ್ವಕವಾಗಿ ಇಲ್ಲೀಗಲ್ ಕ್ವಾರಿಯಿಂಗ್‌ಗೆ ಎನ್‌ಕರೇಜ್ ಮಾಡಿತು ಎನ್ನುವ ಅರ್ಥದಲ್ಲಿ ಮಾತನಾಡಿದರು. ಈಗಲೂ ಪುನಃ ಅದನ್ನೇ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ : ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಒಂದು ಹೇಳಿಕೆ ಕೊಟ್ಟಿದ್ದಾರೆ, ಸಾಕಷ್ಟು ಜವಾಬ್ದಾರಿಯಿಂದಲೇ ಅವರು ಹೇಳಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇದು ಕಷ್ಟವೇನಿಲ್ಲ, ಮಂಗಳೂರಿಗೆ ಹೋಗಿ ಅಲ್ಲಿಂದ ಬೇರೆ ದೇಶಕ್ಕೆ ರಫ್ತಾದರೆ, ಅದನ್ನು ಕಳ್ಳ ಸಾಗಾಣಿಕೆ ಮಾಡುವುದಕ್ಕೆ ಬರುವುದಿಲ್ಲ, ಮಂಗಳೂರು ಬಂದರು ಮೂಲಕ ಹೋಗಬೇಕು, ಅಲ್ಲಿ ರಿಜಿಸ್ಟರ್ ಇರುತ್ತದೆ, ಕಾಗದ ಪತ್ರ ಇರುತ್ತದೆ, ಯಾರು ಕಳಿಸಿದರು ಎನ್ನುವುದು ಗೊತ್ತಾಗುತ್ತದೆ. ಈಗ ಒಂದು ಎನ್‌ಕ್ವಯರಿ ಮಾಡಿಸಿಬಿಡಿ. ಎಷ್ಟು ಲಕ್ಷ ಟನ್ ಗ್ರಾನೈಟ್ ಈ ರೀತಿ ಇಲ್ಲೀಗಲ್ ಕ್ವಾರಿ ಮಾಡಿ ರಫ್ತು ಮಾಡಿದ್ದಾರೆ ಎನ್ನುವುದನ್ನು ಬಹಳ ಬೇಗ ಗುರುತು ಹಿಡಿಯಬಹುದು. ಆ ರೀತಿ ಎನ್ ಕ್ವಯರಿ ಮಾಡಿ ಆದರ ಆಧಾರದ ಮೇಲೆ ಹೇಳುತ್ತಿದ್ದೀರೋ ಹೇಗೆ? ಈಗ ಹಿಂದಿನ ಸರ್ಕಾರ ಕೊಟ್ಟಿಲ್ಲ ಎಂದೆ, ಅದಕ್ಕೂ ಹಿಂದಿನ ಸರ್ಕಾರ ಕೊಟ್ಟಿತ್ತು ಎಂ.ಎಂ.ಎಲ್ ಹೊರತಾಗಿ ಬೇರೆ ಅನೇಕ ಖಾಸಗಿಯವರಿಗೂ ಕೂಡ ಹಿಂದಿನ ಸರ್ಕಾರಕ್ಕೂ ಹಿಂದಿನ ಸರ್ಕಾರ ಲೈಸೆನ್ಸ್ ಕೊಟ್ಟಿತ್ತು. ಅವರು ರಫ್ತು ಮಾಡುತ್ತಲೇ

ಬಂದಿದ್ದಾರೆ. ಈಗ ಅವರು ಮಾಡಿದ್ದೆಷ್ಟು ಇಲ್ಲೀಗಲ್ ಕ್ವಾರಿ ಮಾಡಿದ್ದೆಷ್ಟು, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕಲ್ಲ. ದಯವಿಟ್ಟು ಎನ್‌ಕ್ವಯರಿ ಮಾಡಿಸದೆ ಇದ್ದರೆ ಇನ್ನು ಮುಂದೆಯಾದರೂ ಎನ್‌ಕ್ವಯರಿ ಮಾಡಿಸಿ ಅದನ್ನು ಈ ಸದನಕ್ಕೆ ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಹೆಗಡೆಯವರು ಹೇಳಿದ ವಿಚಾರ ಸಾಕಷ್ಟು ಚರ್ಚೆಯಾಗಿ ಹಳತಾಗಿದೆ. ಅದಕ್ಕೆ ಮತ್ತೊಂದು ಸಾರಿ ಉತ್ತರ ಕೊಡುವ ಅವಶ್ಯಕತೆ ಇದೆಯೆಂದು ನಾನು ಭಾವಿಸಿಲ್ಲ. ಆದರೆ ಹೇಳಬಾರದೆಂದಲ್ಲ, ಈಗಾಗಲೇ ನಾನು ಹೇಳಿದ್ದೇನೆ. ಈ ವಿಚಾರದಲ್ಲಿ ಒಂದೆ ದಿನ ಲೈಸೆನ್ಸ್ ಕೊಟ್ಟಿದ್ದೇವೆಂಬುದು ಸತ್ಯಕ್ಕೆ ದೂರವಾದ ವಿಚಾರ. We have issued licences from 19-6-91 to 4-7-91. ಅದು ಒಂದೊಂದು ದಿವಸಕ್ಕೆ ಎಷ್ಟೆಷ್ಟು ಎಂದು ವೇರಿ ಆಗುತ್ತದೆ. ಹೈಕೋರ್ಟ್ ಸ್ಟೇ ಕೊಟ್ಟಿದೆ. ಸ್ಟೇ ಆರ್ಡರನ್ನು ತಂದು ಯಾರೂ ನಮಗೆ ಕೊಡಲಿಲ್ಲ. ಬಹುಶಃ 5ನೇ ತಾರೀಖು ಬೆಳಿಗ್ಗೆ ಪತ್ರಿಕೆಗಳಲ್ಲಿ ಸಂಬಂಧಪಟ್ಟ ಸಚಿವರು ನೋಡಿದರು. ಅವತ್ತಿನಿಂದ ಲೈಸೆನ್ಸ್ ಕೊಡುವುದನ್ನು ನಾವು ನಿಲ್ಲಿಸಿದ್ದೇವೆ. ಇವತ್ತಲ್ಲ ನಾಳೆ ಯಾರಾದರೂ ತಂದು ಸ್ಟೇ ಆರ್ಡರನ್ನು ಕೊಟ್ಟೇ ಕೊಡುತ್ತಾರೆ. ಅವರು ಕೊಟ್ಟ ಮೇಲೆ ನಾವು ಏಕೆ ಕೊಡಬೇಕೆಂಬ ದೃಷ್ಟಿಯಿಂದ we have stopped issuing licences from 5th morning itself. ಅದರ ಬಗ್ಗೆ ಎಲ್ಲಾ ಹೇಳಿದ್ದಾರೆ. ಅದು ಸದನದ ಸ್ವತ್ತಾಗಿದೆ. ಅದರ ಅಂಕಿ ಅಂಶಗಳೆಲ್ಲಾ ಇವೆ. ಇದರಲ್ಲಿ ಇಲ್ಲೀಗಲ್ ಕ್ವಾರಿಯಿಂದ ಎಷ್ಟು ಹಣ ಹೊರಟು ಹೋಗಿದೆ ಎಂದರೆ ಮಂಗಳೂರು ಪೋರ್ಟ್ ಒಂದರಿಂದ 1980-81 ರಿಂದ approximately, 1989-90ರವರೆಗೆ totally 84 ಕೋಟಿಯಷ್ಟು ಹೋಗಿದೆ. 10 ಕೋಟಿ 15 ಲಕ್ಷ ರೂಪಾಯಿಗಳಿಂದ 84 ಕೋಟಿ ರೂಪಾಯಿಗಳವರೆಗೆ ಹೋಗಿದೆ.

12.45 ಪಿ.ಎಂ.

Majority of the exports would be from Karnataka. ಅದು ಮಂಗಳೂರಿನಿಂದ ಹೊರಟು ಹೋಗತಕ್ಕಂಥದ್ದು. ಏಕೆಂದರೆ ತಮಗೆ ಗೊತ್ತಿದೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ vast areas ನಮಗಿಂತಲೂ ಜಾಸ್ತಿ ಇರತಕ್ಕಂಥ ಏರಿಯಾಸ್ ಅಲ್ಲೆಲ್ಲ ಇದೆ. They have got liberalised policy, about stone quarrying. ನಮಗಿಂತಲೂ ಲಿಬರ್ ಲೈಸ್ಡ್ ಪಾಲಿಸಿಯನ್ನು ಅವರು ಇಟ್ಟುಕೊಂಡಿದ್ದಾರೆ. ಸುಮಾರಾಗಿ the revenue loss during these years would be ನನ್ನ ಪ್ರಕಾರ around about Rs.10 crores ಎಂದು ಇಲಾಖೆಯಿಂದ ಒಂದು ಅಂದಾಜನ್ನು ಮಾಡಿ ಇಟ್ಟಿದ್ದಾರೆ. ಈ ಇಲ್ಲೀಗಲ್ ಕ್ವಾರಿಯಿಂಗ್‌ನ್ನು ನಿಲ್ಲಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ, ಒಂದು ಫ್ರಾಗ್ ಮ್ಯಾಟಿಕ್ ವ್ಯೂವನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ, ರೆವಿನ್ಯೂ ರಿಸೋರ್ಸ್‌ನ್ನು ಮೊಬಿಲೈಜ್ ಮಾಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದಲೂ ಕೂಡ ಲಿಬರ್‌ಲೈಜ್ ಪಾಲಿಸಿಯನ್ನು ವಿಚಾರ ಮಾಡತಕ್ಕಂಥದ್ದನ್ನು ಒಳ್ಳೆಯದು ಎಂದು ಸರ್ಕಾರ ಮಾಡಿತು. ಈ ಲೈಸೆನ್ಸ್‌ನ್ನು ಕೊಡಬೇಕು ಎನ್ನತಕ್ಕಂಥ ವಿಚಾರವನ್ನು ಆ ಸಂದರ್ಭದಲ್ಲಿ ಮಾಡಿತು. ಆನಂತರ ಇದರಿಂದ 1972ರಿಂದ 1979ರವರೆಗೆ ನಮಗೆ ಎಷ್ಟು ಹಣ ಬಂದಿದೆ ಎನ್ನತಕ್ಕಂಥ ವಿಚಾರವನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಹಣವನ್ನು ಅವರಿಂದ ಯಾವ ರೀತಿ ವಸೂಲು ಮಾಡುತ್ತಿದ್ದೀರಿ? ತಮಗೆ ನಾನು ಸಹಾಯ ಮಾಡುತ್ತಿದ್ದೇನೆ, ಇದರಿಂದ ಸರ್ಕಾರಕ್ಕೆ ಅನುಕೂಲವಾಗಲಿ ಎನ್ನತಕ್ಕಂಥ ದೃಷ್ಟಿಯಿಂದ ಕೇಳುತ್ತಿದ್ದೇನೆ. ಯಾರು ತಿಂದರು, ಬಿಟ್ಟರು ಎನ್ನುವುದಕ್ಕಿಂತ ಹೆಚ್ಚಾಗಿ ಯಾವ ರೂಪದಲ್ಲಿ ಹಣವನ್ನು ವಸೂಲು ಮಾಡುತ್ತಿದ್ದೀರಿ? ಯಾವುದಾದರೂ ಒಂದು ರೂಪದಲ್ಲಿ ಅದನ್ನು ವಸೂಲು

ಮಾಡಬೇಕಲ್ಲಾ? ಆ ಹಣವನ್ನು ವಸೂಲು ಮಾಡುವವರು ಯಾರು? ಅದಕ್ಕೇನಾದರೂ ರಸೀತಿಯನ್ನು ಕೊಡುತ್ತಿದ್ದಾರೆಯೇ? ಆ ರಸೀತಿಯನ್ನು ಕೊಡುವವರು ಯಾರು? ಇದಕ್ಕಾಗಿ ಸದನದ ಒಂದು ಸಮಿತಿಯನ್ನು ಮಾಡುತ್ತೇವೆ ಎಂದು ಅಧ್ಯಕ್ಷರು ಮತ್ತು ತಾವು ಮಾತುಕತೆ ಆಡಿದ್ದೀರಿ ಎಂದು ಹೇಳಿದ್ದೀರಿ......

ಶ್ರೀ ಎಸ್. ಬಂಗಾರಪ್ಪ : ಏತಕ್ಕೆ ಆ ವಿಷಯವನ್ನು ಮತ್ತೆ ಎತ್ತುತ್ತಿದ್ದೀರಿ? ಅದನ್ನು ಎತ್ತುವುದಕ್ಕೆ ಹೋಗಬಾರದು?

ಶ್ರೀ ವಾಟಾಳ್ ನಾಗರಾಜ್ : ತಾವು ವಿವರಕ್ಕೆ ಹೋಗುತ್ತಿದ್ದೀರಿ. ಅದಕ್ಕೋಸ್ಕರ ಈ ವಿಚಾರವನ್ನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ : ಆ ವಿಚಾರವನ್ನು ದಯವಿಟ್ಟು ಪ್ರಸ್ತಾಪ ಮಾಡುವುದು ಬೇಡ. ನಾವು ಮಾನ್ಯ ಅಧ್ಯಕ್ಷರಿಗೆ ಅಧಿಕಾರವನ್ನು ಕೊಟ್ಟ ಮೇಲೆ ಮತ್ತೆ ಅದನ್ನು ಪ್ರಸ್ತಾಪ ಮಾಡುವುದು ಒಳ್ಳೆಯದಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅದು ಬೇಡ. ಆಮೇಲೆ ಅದನ್ನು ಮಾತನಾಡಿಕೊಳ್ಳೋಣ ಎಂದು ಅದಕ್ಕೆ ತಮಗೆ ಸೂಕ್ಷ್ಮವಾಗಿ ಹೇಳಿದೆ. ಆದಾಯದ ಬಗ್ಗೆ ಹೇಳುತ್ತೇನೆ. ಆದಾಯದ ಬಗ್ಗೆ ನಾನು ಅದನ್ನು ಮುಚ್ಚಿಡಬೇಕು ಎನ್ನತಕ್ಕಂಥದ್ದು ಏನೂ ಇಲ್ಲ, 1972ರಿಂದ 79ರವರೆಗೆ ಕ್ವಾರಿಯಿಂಗ್ ಎಲ್ಲೆಲ್ಲಿ ನಡೆದಿದೆ ಅದರಿಂದ Revenues absolutely nil ಅನಂತರ 1980-81ರಲ್ಲಿ 45.50ಲಕ್ಷ ರೂಪಾಯಿ ಅಂದರೆ ೪೫ ೧/೨ ಲಕ್ಷ ರೂಪಾಯಿಗಳು ಮಾತ್ರ. 1981-82ರಲ್ಲಿ 20 ಲಕ್ಷ, 1982-83ರಲ್ಲಿ 21 ಲಕ್ಷ, 1983-84 ರಲ್ಲಿ 22 ಲಕ್ಷ, 1984-85 ರಲ್ಲಿ 59 ಲಕ್ಷ, 1985-86 ರಲ್ಲಿ 85 ಲಕ್ಷ, 1986-87 ರಲ್ಲಿ ಮತ್ತೆ ಡ್ರಾಪ್ ಆಗಿದೆ. 85 ಲಕ್ಷ ರೂಪಾಯಿಗಳಿಂದ 27 ಲಕ್ಷ ರೂಪಾಯಿಗಳಿಗೆ ಇಳಿದಿದೆ. 1987-88 ರಲ್ಲಿ 25 ಲಕ್ಷ ರೂಪಾಯಿ, 1988-89ರಲ್ಲಿ 55 ಲಕ್ಷ ರೂಪಾಯಿಗಳು, 1989-90 ರಲ್ಲಿ 59.43 ಲಕ್ಷ ರೂಪಾಯಿಗಳು, 1990-91ರಲ್ಲಿ ನಾವು ಅಧಿಕಾರಕ್ಕೆ ಬಂದ ಮೇಲೆ 133ಲಕ್ಷ ರೂಪಾಯಿಗಳು.

ಶ್ರೀ ವಾಟಾಳ್ ನಾಗರಾಜ್ : ಇದು ಒಂದು ಗಣಿಯಲ್ಲಿ ಒಂದು ತಿಂಗಳಲ್ಲಿ ಬರತಕ್ಕಂಥ ಹಣ.

ಶ್ರೀ ಎಸ್.ಬಂಗಾರಪ್ಪ : ಅದು ಇರಲಿ.

ಶ್ರೀ ವಾಟಾಳ್ ನಾಗರಾಜ್ : ಇದು ಒಂದು ಗಣಿಯಲ್ಲಿ ಒಂದು ತಿಂಗಳಲ್ಲಿ ಬರತಕ್ಕಂಥ ಹಣ.

ಶ್ರೀ ಎಸ್. ಬಂಗಾರಪ್ಪ : ಆಮೇಲೆ ತಮಗೆ ಇನ್ನೊಂದು ಇನ್ ಫರ್ಮೇಷನನ್ನು ಮಾನ್ಯ ಅಧ್ಯಕ್ಷರ ಮುಖೇನ ನಾನು ಕೊಡುತ್ತಿದ್ದೇನೆ. 1991-92 ಅಂದರೆ ಈ ವರ್ಷದ ಸಾಲಿನಲ್ಲಿ ಏಪ್ರಿಲ್‌ನಿಂದ ಜುಲೈ ಅಂದರೆ ಮೊನ್ನೆ ಕಳೆದಿರತಕ್ಕಂಥ ಜುಲೈ ತಿಂಗಳವರೆಗೆ ಏಪ್ರಿಲ್, ಮೇ, ಜೂನ್, ಜುಲೈ ನಾಲ್ಕು ತಿಂಗಳಲ್ಲಿಯೇ ಎಷ್ಟು ಆದಾಯ ಬಂದಿದೆ ಎಂದರೆ 64 ಲಕ್ಷ ರೂಪಾಯಿಗಳು ಆದಾಯ ಈ ನಾಲ್ಕು ತಿಂಗಳಲ್ಲಿಯೇ ಬಂದಿದೆ. ನಾನು ರೆವಿನ್ಯೂ ಲಾಸ್ ಇಲ್ಲ ಎನ್ನತಕ್ಕಂಥ ಮಾತನ್ನು ಆಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ವರ್ಷಕ್ಕೆ 50 ಕೋಟಿ ರೂಪಾಯಿಗಳನ್ನು ನಾನೇ ಕೊಡುತ್ತೇನೆ, ನನಗೆ ಕೊಟ್ಟು ಬಿಡಿ. ಅದನ್ನು ನಮಗೆ ಕೊಡಿ. ವರ್ಷಕ್ಕೆ ಒಂದು ಸಾರಿ ಯಾವ ತಾರೀಖಿಗೆ ಬೇಕೋ ಹೇಳಿ. ಮಾನ್ಯ ಅಧ್ಯಕ್ಷರೇ ನಾನು ಇಲ್ಲಿ ಓಪನ್ ಛಾಲೆಂಜ್ ಮಾಡುತ್ತಿದ್ದೇನೆ. 50 ಕೋಟಿ ರೂಪಾಯಿಯನ್ನು ವರ್ಷಕ್ಕೆ ನಾವು ಕೊಡುತ್ತೇವೆ. ಅದನ್ನು ನಮಗೆ ಕೊಡುತ್ತೀರಾ? ಇದಕ್ಕೆ ಒಂದು ಇಲಾಖೆ ಏತಕ್ಕೆ

ಬೇಕು? ವರ್ಷಕ್ಕೆ 50 ಕೋಟಿ ರೂಪಾಯಿಯನ್ನು ನಾವು ಕೊಡುತ್ತೇವೆ. ನಮಗೆ ಅದನ್ನು ಕೊಟ್ಟುಬಿಡಿ.

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ ನೀವು 50 ಕೋಟಿ ರೂಪಾಯಿಗೆ ಒಪ್ಪಿಕೊಂಡಿದ್ದೀರಲ್ಲಾ, ಅದನ್ನು ನೀವು ದೇವರಾಜ್ ಹತ್ತಿರ ಡಿಪಾಸಿಟ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ದೇವರಾಜ್ ಹತ್ತಿರ ನಾವು ಡಿಫಾಸಿಟ್ ಮಾಡಿದರೆ ನಮ್ಮನ್ನು ದೇವರೇ ಕಾಪಾಡಬೇಕು.

MR. Speaker : He is stating the factuals.

ಶ್ರೀ ಎಸ್.ಬಂಗಾರಪ್ಪ : ನಿಮಗೆ ಫ್ಯಾಕ್ಟನ್ನು ಕೊಡುತ್ತಿದ್ದೇನೆ. ಫ್ಯಾಕ್ಟ್ ಬೇಡ ಅನುಕೂಲ ಬೇಡ, ಅಂದರೆ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೀಗೆ ಮುಂದೆ ಹೋದರೆ, ನಾಳೆ ವಿಧಾನ ಸೌಧವನ್ನು ಬಾಡಿಗೆಗೆ ಕೊಡಿ , ನಾವು ಇಷ್ಟು ಬಾಡಿಗೆ ಜಾಸ್ತಿ ಕೊಡುತ್ತೇವೆ ಎಂದು ಕೇಳುವಂಥ ಕಾಲ ಬರುತ್ತದೆಯೋ ಏನೋ ಎನ್ನುವ ಭಯವಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ : ನೀವು ಪ್ರಾರಂಭ ಮಾಡಿ. ನಿಮ್ಮ ಪಕ್ಷ ಎಲ್ಲೆಲ್ಲಿ ಅಧಿಕಾರದಲ್ಲಿದೆಯೋ ಅಲ್ಲಿಂದ ಸ್ಟಾರ್ಟ್ ಮಾಡಿ ಯು.ಪಿ. ಮಧ್ಯ ಪ್ರದೇಶದಲ್ಲಿ ಮೊದಲು ಶುರು ಮಾಡಿ. ಆಮೇಲೆ ನೋಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ಈಗಾಗಲೇ ವಿಧಾನ ಸೌಧವನ್ನು ಯಾರಿಗಾದರೂ ಬರೆದು ಕೊಟ್ಟಿದ್ದಿರೋ ಏನೋ ಅನುಮಾನ ಆಗುತ್ತದೆ. ದಾಖಲೆಗಳನ್ನೆಲ್ಲಾ ನೋಡಬೇಕಾಗುತ್ತದೆ. ಇವತ್ತಿನ ಸ್ಥಿತಿ ನೋಡಿದರೆ, ಇವರು ನಡೆದುಕೊಳ್ಳುವ ಸ್ಥಿತಿ ನೋಡಿದರೆ ಅನುಮಾನ ಬರುತ್ತದೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನಿಮ್ಮಿಂದ ನಾನು ಅದನ್ನು ನಿರೀಕ್ಷೆ ಮಾಡುವುದಿಲ್ಲ, ವಿಧಾನ ಸೌಧದ ವಿಚಾರದಲ್ಲಿ ಅಷ್ಟು ಲಘುವಾಗಿ ....

ಮಾನ್ಯ ಒಬ್ಬ ಸದಸ್ಯರು : ಈ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಬಹಳ ಬೇಜವಾಬ್ದಾರಿಯಿಂದ ಮಾತನಾಡುತ್ತಾರೆ.

ಶ್ರೀ ಎಸ್.ಬಂಗಾರಪ್ಪ : ಇದರಲ್ಲಿ ಏಪ್ರಿಲ್‌ನಿಂದ ಜುಲೈ ತಿಂಗಳವರೆಗೆ 64.63 ಲಕ್ಷ ರೂಪಾಯಿ ಬಂದಿದೆ ಅಂದರೆ, ನಿರ್ಯಾಲಿ 2 ಕೋಟಿ ಈ ವರ್ಷದ ರೆವಿನ್ಯೂ ಜಾಸ್ತಿ ಮಾಡುವುದಕ್ಕೆ ವಿಚಾರ ಮಾಡಿದ್ದೇವೆ. ಇಲ್ಲದಿದ್ದರೆ ಏನಾಗುತ್ತದೆ ಅಂದರೆ , ಇಲ್ಲೀಗಲ್ ಕ್ವಾರಿಯಿಂದ 5 ಪೈಸೆ ಬರುವುದಿಲ್ಲ, ವಸ್ತುಗಳೆಲ್ಲ ಹಾಳಾಗಿ ಹೋಗುತ್ತದೆ, ಕಲ್ಲು ಹೊರಟು ಹೋಗುತ್ತಿರುತ್ತದೆ, ರೇಟ್ ಹೋಗುತ್ತದೆ, ಇನ್ ಕಂ ಬರುವುದಿಲ್ಲ. ಈ ದೃಷ್ಟಿಯಿಂದ ನಾವು ಕಾರ್ಯಕ್ರಮವನ್ನು ಹಾಕಿದ್ದೇವೆ. ನಮ್ಮ ರಾಜ್ಯದ ಬೊಕ್ಕಸಕ್ಕೆ ಬರತಕ್ಕ ಆದಾಯದ ದೃಷ್ಟಿಯಿಂದ ನಾವು ಈ ಕಾರ್ಯಕ್ರಮವನ್ನು ಹಾಕಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರ್ಕಾರಕ್ಕೆ ಕಲ್ಲುಗಣಿ ಮಾಲೀಕರುಗಳು ಕೊಡತಕ್ಕ ಭಿಕ್ಷೆ ಇದು.

MR. Speaker : That in your opinion ಅದು ನಿಮ್ಮ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್ : ಅಭಿಪ್ರಾಯದಲ್ಲಿ ಪ್ರಾಮಾಣಿಕತೆ ಇದೆ ಎಂದು ತಮಗೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಪ್ರಾಮಾಣಿಕತೆ ಇರಬಹುದು. ಅಭಿಪ್ರಾಯಗಳಿಗೆ ಪ್ರಾಮಾಣಿಕತೆ ಲೇಪ. ನಾನು ಅರ್ಥಮಾಡಿಕೊಳ್ಳಬಲ್ಲೆ. ಅಭಿಪ್ರಾಯವನ್ನು ಹೇಳತಕ್ಕ ಸ್ವಾತಂತ್ರ್ಯ ಕೂಡ ಇದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ನಾಗರಾಜ್‌ರವರೆ ತಾವು ಒಂದು ಕೆಲಸ ಮಾಡಿ, ಈಗ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್ ಮೇಲೆ ಚರ್ಚೆ ಬರುತ್ತದೆ, ಆಗ ತಾವು ಸಲಹೆಗಳನ್ನು ಕೊಡಿ. ನೀವು ಸಲಹೆಗಳನ್ನು ಕೊಡುವುದು ಬೇಡ, ನಿಮ್ಮ ಸಲಹೆ ಒಳ್ಳೆಯದಲ್ಲ ಎಂದು ನಾನೇನು ಹೇಳಿಲ್ಲ. I am sorry. Certainly it is true as far as more revenues are concerned. ಈ ಸಮಯದಲ್ಲಿ ನಾನು ಹೆಚ್ಚು ಕಳೆಯುವುದಕ್ಕೆ ಹೋಗುವುದಿಲ್ಲ. ಆ ಇಲಾಖೆಯ ಬೇಡಿಕೆ ಚರ್ಚೆಗೆ ಬಂದಾಗ ತಾವು ಸಲಹೆಯನ್ನು ಕೊಡಿ. ಅದಕ್ಕೆ ಏನು ಉತ್ತರ ಕೊಡಬೇಕು ಎನ್ನುವುದನ್ನು ಸಂಬಂಧಪಟ್ಟ ಸಚಿವರು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾರೆ. ರೆವಿನ್ಯೂ ಜಾಸ್ತಿ ಮಾಡಬೇಕು ಎನ್ನತಕ್ಕದ್ದು ನಮ್ಮ ಆಸೆ ಇದೆ. ಆ ಸಲಹೆಗಳನ್ನು ತಾವು ಕೊಡುತ್ತಿದ್ದೀರಿ, ಆ ರೀತಿ ನಾವು ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಿದ್ದೇವೆ. Details of the exports of granites from Mangalore Port, Quantity - 1,74,134 Metric tonnes, Value in lakhs Rs.1,279 lakhs in 1980-81. ಬರಬರುತ್ತಾ ಅದು ಜಾಸ್ತಿಯಾಗುತ್ತಿದೆ. In 1990-91 financial year it is 4,04,447 metric tonnes value Rs.8,346 lakhs. ಒಟ್ಟು ಇಷ್ಟು ವ್ಯಾಲ್ಯು ಇರತಕ್ಕದ್ದನ್ನು ನಾವು ಎಕ್ಸ್‌ಪೋರ್ಟ್ ಮಾಡಿದ್ದೇವೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಉಳಿದಿರತಕ್ಕ ವಿವರಗಳಿಗೆ ನಾನು ಹೋಗುವುದಿಲ್ಲ. ಏಕೆಂದರೆ ಈ ಇಲಾಖೆಯ ಮೇಲೆ ಚರ್ಚೆ ಬಂದಾಗ ತಾವು ಸಲಹೆಗಳನ್ನು ಕೊಡಿ. ಇದರಲ್ಲಿ ಸರ್ಕಾರದ ಯಾವುದೇ ತಮ್ಮ ಅಧಿಕಾರ ದುರುಪಯೋಗಪಡಿಸಿದ್ದಾಗಲಿ, ಯಾರಿಗಾದರೂ ಸಹಾಯ ಮಾಡಿದ್ದಾಗಲಿ ಮತ್ತೊಂದು ಇಲ್ಲ. ಇದರಿಂದ ನಾವು ರೆವಿನ್ಯೂ ಜಾಸ್ತಿ ತೋರಿಸಿದ್ದೇವೆ. ರಾಜ್ಯದ ಬೊಕ್ಕಸಕ್ಕೆ ಹಣವನ್ನು ಸೇರಿಸಿದ್ದೇವೆ. ನಾವು ರಿಸೋರ್ಸ್ ಮೊಬಲೈಸ್ ಮಾಡತಕ್ಕ ವಿಚಾರದಲ್ಲಿ ಇವೆಲ್ಲವೂ ಕೂಡ ಒಂದೊಂದು ವಿಚಾರಧಾರೆ ಎನ್ನತಕ್ಕ ದೃಷ್ಟಿಯಿಂದ ಮಾತ್ರ ನಾನು ಹೇಳಿದ್ದೇನೆ. ಈ ಇಲಾಖೆಯ ಮೇಲೆ ಚರ್ಚೆ ಬಂದಾಗ ಮತ್ತೆ ವಿವರವಾಗಿ ನಾವು ಉತ್ತರವನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಕೂಡ ನಾನು ಹೇಳುತ್ತೇನೆ. ಈಗ ಉಳಿದಿರತಕ್ಕಂಥದ್ದು Furnishing of the Ministers residences. ಮಿನಿಸ್ಟರ್‌ಗಳ ಬಂಗಲೆಗಳಿಗೆ ಯಾರ್‍ಯಾರ ಕಾಲದಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ ಎಂದು ಭಾಷಣ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಪೀಠೋಪಕರಣಗಳ ಬಗ್ಗೆ ನಾವು ಮಾತನಾಡಲಿಲ್ಲವಲ್ಲ?

ಶ್ರೀ ಎಸ್. ಬಂಗಾರಪ್ಪ : ಯಾರೂ ಮಾತನಾಡಿಲ್ಲ ಅಂದರೆ, ತಾವು ಮಾತನಾಡಿದ್ದಿರಲ್ಲಾ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಲೆಯ ಮೇಲೆ ಕುರ್ಚಿಗಳನ್ನು ಹಾಕಿ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತುಂಬಾ ದೊಡ್ಡ ದೊಡ್ಡ ವಿಷಯಗಳನ್ನು ಎತ್ತಿದ್ದರಿಂದ ಈ ಪೀಠೋಪಕರಣಗಳ ಬಗ್ಗೆ ನಾವು ಮಾತನಾಡುವುದಕ್ಕೆ ಹೋಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಹಿಂದಿನ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಇದೇ ಸದನದಲ್ಲಿ ಅಪ್ಪಣೆ ಕೊಡಿಸಿದ್ದರು. ಹೆಲಿಕಾಪ್ಟರನ್ನು ಮಾರುತ್ತೇವೆ, ಮಂತ್ರಿಗಳ ಮನೆಗೆ ಫರ್ನಿಶ್ ಮಾಡಿರುವುದಕ್ಕೆ ಖರ್ಚಾಗಿರುವ ಹಣದ ಬಗ್ಗೆ ಡೀಟೈಲ್ಸ್‌ನ್ನು ಕೊಡಿಸುತ್ತೇನೆಂದು ಹೇಳಿದ್ದರು. ಆ ಕಾಂಟೆಕ್ಸ್ಟ್ ಮೇಲೆ ಈ ಎರಡು ವಿಚಾರಗಳ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದು

ಶ್ರೀ ಗೋಪಾಲ ಮುಕುಂದ ಕಾನಡೆ : ಹೆಲಿಕಾಪ್ಟರನ್ನು ಮಾರುವವರೆಗೆ ನಿಮಗೆ ಸಮಾಧಾನವಿಲ್ಲವೆಂದು ಕಾಣುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಮಗಲ್ಲ, ನಿಮ್ಮ ಮುಖ್ಯ ಮಂತ್ರಿಯವರು ಹೇಳಿದ್ದರೆಂದು ಹೇಳಿದ್ದೇನೆ. ನಮಗೆ ಸಮಾಧಾನವಾಗುವ ಪ್ರಶ್ನೆಯಲ್ಲ. ಈ ಸದನದಲ್ಲಿ ಹೇಳಿರುವುದನ್ನು ಉಳಿಸಿಕೊಂಡಿದ್ದೀರಾ ಎಂದು ಕೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಹೆಲಿಕಾಪ್ಟರಿನ ಬಗ್ಗೆ ಈಗಲೇ ಹೇಳುವುದು ಒಳ್ಳೆಯದೆಂದು ಕಾಣುತ್ತದೆ. ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಹೇಳಿರತಕ್ಕಂಥ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇದನ್ನು ಡಿಸ್ ಪೋಸ್ ಆಫ್ ಮಾಡುವುದಕ್ಕೆ ಟೆಂಡರ್ ಕರೆದಿದ್ದು ಎಷ್ಟು ಆಫರ್ ಬಂದಿದೆ ಎಂದರೆ , HAL has offered only for Rs.80 lakhs. United Breweries offered to purchase at Rs.85 lakhs. The price of the new helicopter now is round about Rs.4 crores.

ಈ ಸೆಕೆಂಡ್ ಹ್ಯಾಂಡ್ ಹೆಲಿಕಾಪ್ಟರನ್ನು ಒಂದು ಕೋಟಿ ರೂಪಾಯಿಗೆ ಕೊಂಡುಕೊಳ್ಳಲು ಯಾರೂ ಕೂಡ ಮುಂದೆ ಬರಲಿಲ್ಲ. ಇದು ಸಿಂಗಲ್ ಎಂಜಿನ್ ಹೆಲಿಕಾಪ್ಟರ್. ಡಬಲ್ ಎಂಜಿನ್‌ದು ಇನ್ನೂ ಜಾಸ್ತಿಯಾಗುತ್ತದೆ. 80ಲಕ್ಷ ರೂಪಾಯಿಗಳಿಗೆ ಇದನ್ನು ಮಾರಿದರೆ ಬಹಳ ಲಾಸ್ ಆಗುತ್ತದೆಂಬ ದೃಷ್ಟಿಯಿಂದ ಇದನ್ನು ಹಾಗೆಯೇ ಇಟ್ಟುಕೊಂಡಿದ್ದೇವೆ. ಇನ್ನೂ ಮಾರಿಲ್ಲ.

ಅಧ್ಯಕ್ಷರು : ಶ್ರೀ ವಾಟಾಳ್ ನಾಗರಾಜ್‌ರವರೇ, ಇದನ್ನು ಖರೀದಿ ಮಾಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಇಡೀ ಗ್ರಾನೈಟ್ ಗುತ್ತಿಗೆಯನ್ನು ನನಗೆ ಕೊಡುವ ಹಾಗಿದ್ದರೆ ನಾನು ತೆಗೆದುಕೊಳ್ಳುತ್ತೇನೆ. ಮುಖ್ಯಮಂತ್ರಿಯವರು ಆಫರ್ ಕೊಡುವುದಾದರೆ, ನಾನು ರೆಡಿ ಇದ್ದೇನೆ.

SRI S.Bangarappa : I am just giving you the details about the amount spent on furnishing Ministers residences. ಅದನ್ನು ತಮ್ಮ ಅವಗಾಹನೆಗೆ ತರಲು ಒಂದು ವಾಕ್ಯದಲ್ಲಿ ಹೇಳುತ್ತೇನೆ. ಶ್ರೀ ರಾಮಕೃಷ್ಣ ಹೆಗಡೆ ಮಿನಿಸ್ಟ್ರಿ ಕಾಲದಲ್ಲಿ 1-4-87 ರಿಂದ 31-8-88ರವರೆಗೆ....

ಶ್ರೀ ಆರ್.ವಿ. ದೇಶಪಾಂಡೆ : ಇದನ್ನು ಹೇಳಬೇಕಾದರೆ, 1983ರಿಂದ ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ : ಅದನ್ನು ಬೇಕಾದರೂ ಕೊಡುತ್ತೇನೆ. ಮಾನ್ಯ ಚಂದ್ರೇಗೌಡರೆ ಆಲಾಪನೆ ಇಲ್ಲದೆ ತಬಲ ಹೊಡೆಯುವುದಕ್ಕೆ ಆಗುವುದೇ? ಅದಕ್ಕೆ ಅಲಾಪನೆ ರಾಗ ಹಾಕಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆಲಾಪನೆ ಇಲ್ಲದೆ ತಬಲ ಹೊಡೆಯುತ್ತಿದ್ದಾರೆ.

ಶ್ರೀ ಎಸ್ ಬಂಗಾರಪ್ಪ : ಅವರು ಕೇಳಿದ್ದಾರೆ, ಅಂಕಿ ಅಂಶಗಳನ್ನು ಕೊಡುತ್ತಿದ್ದೇನೆ. ಇದಕ್ಕಾಗಿ ಶ್ರೀ ರಾಮಕೃಷ್ಣ ಹೆಗಡೆಯವರ ಮಿನಿಸ್ಟ್ರಿ ಇದ್ದಾಗ 1-4-87ರಿಂದ 31-3-88 ರವರೆಗೆ 29,08,713-00 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 1988-89 ರಲ್ಲಿ ಶ್ರೀ ಬೊಮ್ಮಾಯಿಯವರ ಮಿನಿಸ್ಟ್ರಿ ಕಾಲದಲ್ಲಿ ಇದು ಮತ್ತೆ ಫರ್ನಿಶ್ ಆಯಿತು. 27 ಲಕ್ಷ 40 ಸಾವಿರ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡಲಾಯಿತು. ಶ್ರೀ ವೀರೇಂದ್ರ ಪಾಟೀಲ್ ರವರ ಮಿನಿಸ್ಟ್ರಿ ಕಾಲದಲ್ಲಿ 46ಲಕ್ಷ 66ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಯಿತು. ಇದು ಏಕೆ ಜಾಸ್ತಿಯಾಗುತ್ತದೆ ಎಂದರೆ ರೇಟೂ ಕೂಡ ಜಾಸ್ತಿಯಾಗುತ್ತಿರುತ್ತದೆ. ಏಕೆಂದರೆ, ಪ್ರತಿಯೊಂದು ಮೆಟೀರಿಯಲ್ ರೇಟೂ ಜಾಸ್ತಿಯಾಗುತ್ತಿರುತ್ತದೆ. ಇರುವ ವಿಚಾರವನ್ನು ನಾನು ನಿಮ್ಮ ಮುಂದಿಟ್ಟಿದ್ದೇನೆ. ಆಮೇಲೆ ಪ್ರೆಸೆಂಟ್ ಮಿನಿಸ್ಟ್ರಿ ಎಂದರೆ, ನಮ್ಮ ಕಾಲದಲ್ಲಿ ......

ಶ್ರೀ ರಾಮಕೃಷ್ಣ ಹೆಗಡೆ : ಈಗ ನಾನು ಮುಖ್ಯ ಮಂತ್ರಿಯಾಗಿದ್ದ ಐದೂವರೆ ವರ್ಷಗಳಲ್ಲಿ ಹೆಲಿಕಾಪ್ಟರ್ ಉಪಯೋಗಿಸಿದ ಮೇಲೆ ಆದ ಒಟ್ಟು ಖರ್ಚು ಹೇಳಿ?

ಶ್ರೀ ಎಸ್. ಬಂಗಾರಪ್ಪ : ಹೆಲಿಕಾಪ್ಟರ್ ಅಲ್ಲ, ಮನೆ, ಮಿನಿಸ್ಟರ್ ಬಂಗಲೆಗಳಿಗೆ ಖರ್ಚು ಮಾಡಿರುವುದು.

ಶ್ರೀ ರಾಮಕೃಷ್ಣ ಹೆಗಡೆ : ನನ್ನ ಮನೆಗೆ ಖರ್ಚುಮಾಡಿರುವುದು?

ಶ್ರೀ ಎಸ್. ಬಂಗಾರಪ್ಪ : ದಯಮಾಡಿ ತಾವು ಕುಳಿತುಕೊಂಡರೆ ನಾನು ಹೇಳುತ್ತೇನೆ. ತಮಗೆ ಪ್ರಶ್ನೆ ಅಥವಾ ಸಮಸ್ಯೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. helicopter matter is closed. ಮಿನಿಸ್ಟರ್ ಬಂಗಲೆಗಳಿಗೆ ಫರ್ನಿಶಿಂಗ್‌ಗಾಗಿ ಎಷ್ಟು ಖರ್ಚಾಗಿದೆಯೆಂದು ಕೇಳಿದ್ದರು, ಅದಕ್ಕೋಸ್ಕರ ಹೇಳುತ್ತಿದ್ದೇನೆ. ಪ್ರಸೆಂಟ್ ಮಿನಿಸ್ಟ್ರಿ 31-10-90ರಿಂದ 31-7-91 ವರೆಗೆ 29 ಲಕ್ಷವಾಗಿದೆ. ಸ್ವಾಮಿ, ನಾನು ಕೇಳುತ್ತಿದ್ದೇನೆ, ರೇಟ್ ಇಷ್ಟು ಜಾಸ್ತಿಯಾದರೂ ಕೂಡ ನಾನು ಮಂತ್ರಿ ಮಂಡಲವನ್ನು ರಚನೆ ಮಾಡಿದ ನಂತರ ರೇಟನ್ನು ಹೆಚ್ಚಿಸಿಲ್ಲ. ನಾನು ತಮ್ಮ ಎದುರಿಗೆ ಇಡುತ್ತಿದ್ದೇನೆ. ನಾವು ಕೂಡ ಅದರ ಬಗ್ಗೆ ಹೆಚ್ಚು ಖರ್ಚನ್ನು ಮಾಡದೆ, ಅದಕ್ಕೆ ಅಷ್ಟು ವೇಸ್ಟ್ ಆಗಬಾರದು ಎಂಬ ದೃಷ್ಟಿಯಿಂದ ಮಾಡಿದ್ದೇವೆ. ಒಂದೊಂದು ಸಾರಿ ಆಗುತ್ತದೆ, ಮೆಟೀರಿಯಲ್ ಕಾಸ್ಟ್ ಮತ್ತೊಂದು ಜಾಸ್ತಿಯಾದಾಗ ವೇರಿಯಾಗುತ್ತದೆ. ಅದು ನಿಮ್ಮ ಕಾಲದಲ್ಲಿ ಆಗಿದೆ, ನಮ್ಮ ಕಾಲದಲ್ಲೂ ಕೂಡ ಆಗಿದೆ. ಆಮೇಲೆ ತಾವು transfers ವಿಚಾರ ಹೇಳಿದ್ದೀರಿ. ಈ ವಿಚಾರದಲ್ಲಿ the present government headed by me has actually minimised the transfers compared to earlier years.

ನಾನು ಮೊದಲಿನಿಂದಲೂ ಅಂಕಿ-ಅಂಶ ಇಟ್ಟು ಮಾತನಾಡುತ್ತಿದ್ದೇನೆ. ಈಗಲೂ ಕೂಡ ಅಂಕಿ ಅಂಶ ಇಟ್ಟುಕೊಂಡೆ ಮಾತನಾಡುತ್ತಿದ್ದೇನೆ. ಬೇರೆ ಯಾವುದು ಮಾತನಾಡುತ್ತಿಲ್ಲ. ಅಂಕಿ ಅಂಶ ಬಿಟ್ಟು ಯಾರೂ ಹೋಗುವುದಕ್ಕಾಗುವುದಿಲ್ಲ. ಇದರಲ್ಲಿ ಟ್ರಾನ್ಸ್‌ಫರ್ ಯಾರು ಕೇಳಿದ್ದಾರೆ? I think, 90-95% ಅವರವರೇ ಕೇಳಿದ್ದರಿಂದ ಅಲ್ಲಿ ಟಿ.ಎ, ಡಿ.ಎ. ಕೊಡತಕ್ಕಂಥ ಪ್ರಶ್ನೆ ಬಂದಿಲ್ಲ. ನಾವು ಅದರ ಮೇಲೆ ಹಣವನ್ನು ಖರ್ಚು ಮಾಡಿಲ್ಲ. ಮಾನ್ಯ ಸದಸ್ಯರು ಮಾತನಾಡತಕ್ಕಂಥ ಕಾಲದಲ್ಲಿ ಬಹಳ ಹಣ ಖರ್ಚಾಗಿದೆ ಎಂಬ ಮಾತನ್ನು ಹೇಳಿದರು. Transfers are nade on their own request. ನಾವು ಅದಕ್ಕೆ ಹಣ ಕೊಡತಕ್ಕಂಥ ಪ್ರಶ್ನೆ ಬರುವುದಿಲ್ಲ. This is the basic approach. They are not entitled to this travelling alowance. Therefore, in many of the transfers there is no expenditure incurred by the state exchequer, Besides , there were no transfers in April and May, '91, and also June 91 on account of elections to parliament. ಆದುದರಿಂದ ನಾವು ಸ್ಟಾಪ್ ಮಾಡಿದ್ದೇವೆ.

ಚುನಾವಣೆ ಬಂದುದರಿಂದ ಟ್ರಾನ್ಸ್‌ಫರ್ ಯಾವುದೂ ಕೂಡ ಮಾಡಬಾರದು ಎನ್ನುವ ದೃಷ್ಟಿಯಿಂದ ಸ್ಟಾಪ್ ಮಾಡಿದ್ದೇವೆ. Also, on account of the tragic assassination of former Prime Minister and our bdoved leader Sri Rajiv Gandhi-ಆ ದೃಷ್ಟಿಯಿಂದ ಕೂಡ ಎಲ್ಲಾ ನಿಲ್ಲಿಸಬೇಕಾಗಿ ಬಂತು. ಈ ಟ್ರಾನ್ಸ್‌ಫರ್ ವಿಚಾರದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ತಮ್ಮ ಕಾಲದಲ್ಲೂ ಟ್ರಾನ್ಸ್‌ಫರ್ ಆಗಿದೆ. ನಮ್ಮ ಕಾಲದಲ್ಲೂ ಟ್ರಾನ್ಸ್‌ಫರ್ ಆಗಿದೆ. ಟ್ರಾನ್ಸ್‌ಫರ್ ಇಡೀ ವರ್ಷ ನಡೆಯುತ್ತಿರುತ್ತದೆ. ಅದೇನಾಗುತ್ತದೆ ಎಂದರೆ, ಕೆಲವರು ರಿಟೈರ್ ಆಗುತ್ತಾರೆ, ಅಥವಾ ಡೆತ್ ಆಗಿಬಿಡಬಹುದು, ಕೆಲವರಿಗೆ ಪ್ರೊಮೋಷನ್ ಬರುತ್ತದೆ. ಈ ದಿಸೆಯಲ್ಲಿ ನಮಗೆಲ್ಲರಿಗೂ ಒಂದೇ ಕಾನೂನು ಪಕ್ಷ ಬೇರೆ ಬೇರೆ ಇದ್ದರೂ ಕಾನೂನು ಒಂದೇ.

ಅನಂತರ ಕೆಲವು ಸಾರಿ ಕ್ಯಾನ್ಸರ್, ಕಿಡ್ನಿ ತೊಂದರೆ ಮತ್ತೊಂದು ಬರುತ್ತದೆ, ಹಸ್ಬೆಂಡ್ ವೈಫ್‌ಗೆ ಬರುತ್ತದೆ, ಇವೆಲ್ಲವನ್ನೂ ಕೂಡ ನೋಡಿದಾಗ ಒಂದೊಂದು ಸಾರಿ ಅನಿವಾರ್ಯವಾಗಿ ಒತ್ತಡ ಬಂದಾಗ ಅಥವಾ ವಿಷಯ ಗಮನಕ್ಕೆ ಬಂದಾಗ, ತಿಳಿದುಕೊಂಡಾಗ, ಏಕೆ ಟ್ರಾನ್ಸ್‌ಫರ್ ಮಾಡಬಾರದು? ಎಂಬ ದೃಷ್ಟಿಯಿಂದ ಹೆಲ್ಪ್ ಮಾಡುತ್ತಿದ್ದೇನೆ. ಮಾನ್ಯ ಸ್ನೇಹಿತರು ಈ ಕಡೆ ಕುಳಿತಿರಬಹುದು, ಆ ಕಡೆ ಕುಳಿತಿರಬಹುದು, ಹೆಸರಿನ ಪ್ರಶ್ನೆ ಅಲ್ಲ, ಜೆನ್ಯೈನ್ ಕಾರಣ ಇದ್ದಾಗ ಹೇಳತಕ್ಕಂಥ ಹಕ್ಕು ಪ್ರತಿಯೊಬ್ಬರಿಗೂ ಇದೆ. ಆ ಹಕ್ಕನ್ನು ಈ ಸರ್ಕಾರ ಮಾನ್ಯತೆ ಮಾಡುತ್ತದೆ. ಸಕಾರಣ ಇದ್ದಾಗ ಏಕೆ ಮಾಡಬಾರದು ಎಂಬ ಪ್ರಶ್ನೆ ಇಟ್ಟುಕೊಂಡು ನಾವು ಮುಂದಕ್ಕೆ ಹೋಗುತ್ತಿದ್ದೇವೆ. ಹೀಗಾಗಿ ಇಡೀ ವರ್ಷ ಟ್ರಾನ್ಸ್‌ಫರ್ ನಡೆಯುತ್ತದೆ. ಆದರೆ, ಜನರಲ್ ಟ್ರಾನ್ಸ್‌ಫರ್ ಟೈಪ್ ವರ್ಷದ ಮಧ್ಯೆ ನಡೆಯಬಾರದು. ಈ ಒಂದು ಪ್ರಿನ್ಸಿಪಲನ್ನು ನಾವು ಇಟ್ಟುಕೊಂಡು ಹೋಗಬೇಕಾಗುತ್ತದೆ. ಈ ಮಾತಿಗೆ ನಾವು ಕಟ್ಟು ಬಿದ್ದಿದ್ದೇವೆ ಈ ಸಂದರ್ಭದಲ್ಲಿ ಟ್ರಾನ್ಸ್‌ಫರ್ ಮಾಡತಕ್ಕಂಥ ಕಾಲದಲ್ಲಿ ಎಷ್ಟೆಷ್ಟು ಮಾಡಿದ್ದೇವೆ ಎನ್ನತಕ್ಕಂಥದ್ದರಲ್ಲಿ ಕೆಲವನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಜಾಲಪ್ಪನವರು ಈ ವರ್ಗಾವಣೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಅವರು ಪ್ರಸ್ತಾಪ ಮಾಡಿದ್ದಾರೆ. ಪ್ರತಿಯೊಂದು ಪ್ರತ್ಯೇಕವಾದ ಪ್ರಶ್ನೆಗೂ ಉತ್ತರವನ್ನು ಕೊಡಲು ಆಗುವುದಿಲ್ಲ. ನೂರೆಂಟು, ಸಾವಿರಾರು ಇರುತ್ತದೆ ಬೈರೇಗೌಡರೆ, ತಾವು ಕೂಡ ಸಚಿವರಾಗಿ ಕೆಲಸ ಮಾಡಿದ್ದೀರಿ. ನಾನು ಪ್ರಿನ್ಸಿಪಲ್ಲಾಗಿ ಜನರಲ್ಲಾಗಿ ಇಟ್ಟುಕೊಂಡು ಹೋಗುತ್ತಿದ್ದೇನೆ. ಇನ್ನು ಕಳೆದ 5 ವರ್ಷಗಳಲ್ಲಿ ಐಎಎಸ್ ಅಧಿಕಾರಿಗಳು ವರ್ಗಾವಣೆ. ಏಕೆಂದರೆ ಕಂಡಕಂಡಂತೆ ವರ್ಗಾವಣೆ ಮಾಡಿದಿರಿ ಇಲಾಖೆಗಳಿಗೆ ಬಿಸಾಕಿದಿರಿ, ಎತ್ತಿ ಹೊಡೆದಿರಿ ಎನ್ನುವ ಮಾತುಗಳೆಲ್ಲಾ ಬಂದಿವೆ. 1987 ರಲ್ಲಿ 91 ಐಎಎಸ್ ಅಧಿಕಾರಿಗಳ ವರ್ಗಾವಣೆಯಾಗಿದೆ, 1988 ತಮ್ಮ ಕಾಲದಲ್ಲಿ 130 ಐಎಎಸ್ ಅಧಿಕಾರಿಗಳ ವರ್ಗಾವಣೆಯಾಗಿದೆ, 1989ರಲ್ಲಿ 110 ಆಗಿದೆ, 1990ರಲ್ಲಿ ಶ್ರೀ ವೀರೇಂದ್ರ ಪಾಟೀಲ್‌ರವರ ಕಾಲದಲ್ಲಿ 143 ಆಗಿದೆ. ಸ್ವಾಮಿ, ನನ್ನ ಕಾಲದಲ್ಲಿ 1991ರಲ್ಲಿ ಕೇವಲ 75 ಜನ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದೇವೆ. ಇದರಲ್ಲಿ ಏನು ತಪ್ಪಿದೆ, ನಾನು ಈ ಪ್ರಶ್ನೆಯನ್ನು ತಮಗೆ ಇಡುತ್ತಿದ್ದೇನೆ, ಇವತ್ತು ತೆಗೆದುಕೊಂಡು ಬಿಸಾಕಿದ್ದಾರೆ. ಎಂದು ಹೇಳಿಕೆಯನ್ನು ಕೊಟ್ಟು ಏನು ನೂರಾರುಗಟ್ಟಲೆ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದಕ್ಕೆ ಗ್ರೌಂಡ್ ಎಲ್ಲಿದೆ ಎನ್ನುವ ಮಾತನ್ನು ಹೇಳುತ್ತೇನೆ. ಆಮೇಲೆ ಕೆಎಎಸ್ ಅಧಿಕಾರಿಗಳ ವರ್ಗಾವಣೆ, ಪದೇ ಪದೇ ಏಕೆ ಹೇಳುತ್ತಿದ್ದೇನೆಂದರೆ ಇದು ರೆಕಾರ್ಡ್‌ನಲ್ಲಿ ಬಂದುಬಿಡಲಿ, ಆದುದರಿಂದ ನಾನು ರೆಕಾರ್ಡ್ ರೆಡಿ ಮಾಡಿಸಿದ್ದೇನೆ. ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಸರ್ವೀಸ್‌ಗೆ ಸೇರಿರತಕ್ಕವರ ವರ್ಗಾವಣೆ ಈ ರೀತಿ ಇದೆ. 1986ರಲ್ಲಿ 190, 1987ರಲ್ಲಿ 216, 1988ರಲ್ಲಿ 235, 1989ರಲ್ಲಿ 195 ಇದಿಷ್ಟು ತಮ್ಮ ಕಾಲದ್ದು. 1990ರಲ್ಲಿ ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲಿ 188 ಆಗಿದೆ. ನಮ್ಮ ಕಾಲದಲ್ಲಿ ಆದರೆ, ನಾನು ಮುಖ್ಯ ಮಂತ್ರಿಯಾದ ಮೇಲೆ 1991ರಲ್ಲಿ 153 ಆಗಿದೆ ಸ್ವಾಮಿ, ಇವತ್ತು ನಾನು ಕೇಳುತ್ತೇನೆ ಈ 190 , 216, 235, 195, ನನ್ನದು ಬರೀ 153 ಅಂದ ಮೇಲೆ ತಾವು ಹೇಳಿದ ಹಾಗೆ ಎಲ್ಲಿದೆ? ಇವತ್ತು ಏನು ವರ್ಗಾವಣೆ ಮಯ ವರ್ಗಾವಣೆಯ ಯುಗ ಎಂದು ಹೇಳಿದಿರಲ್ಲ ಯಾರ ಕಾಲದಲ್ಲಿ ಈ ಯುಗವಿತ್ತು? ನೀವು ವರ್ಗಾವಣೆ ಮಾಡಿದ್ದ ಯುಗ ನಡೆದಿರತಕ್ಕದ್ದು, ತಮ್ಮ ಕಾಲದಲ್ಲಿ ಎನ್ನತಕ್ಕಂಥ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಿಜ ಹೇಳಬೇಕೆಂದರೆ, ನಾನು ವ್ಯವಸಾಯ

ಮಂತ್ರಿಯಾಗಿದ್ದಾಗ ಸುಮಾರು 18 ಸಾವಿರ ಚಿಲ್ಲರೆ ಒಟ್ಟು ನೌಕರರು ಇದ್ದರು. ಬೇಕಾದರೆ ತೆಗೆದು ನೋಡಿ, ಅನಿವಾರ್ಯವಾಗಿ ಕೇವಲ 200-300 ಒಳಗೆ ಮಾತ್ರ ವರ್ಗಾವಣೆ ಮಾಡಿದ್ದೆವು ಇನ್ನು ಶ್ರೀ ಪುಟ್ಟಸ್ವಾಮಿಗೌಡರ ಕಾಲದಲ್ಲಿ ಬರೀ 100ರೊಳಗೆ ವರ್ಗಾವಣೆ ಮಾಡಿದ್ದಾರೆ. ಇನ್ನು ಈ ಉಳಿದಿರತಕ್ಕ ಕೇಡರ್‌ಗಳಲ್ಲಿ ಕೆಳಮಟ್ಟದ ನೌಕರವರ್ಗದಲ್ಲಿ ಎಷ್ಟು ಆಗಿದೆ ಎನ್ನುವುದನ್ನು ಸಹ ಕೊಡುತ್ತೇನೆ. ಒಟ್ಟಾರೆ ನಮ್ಮ ರಾಜ್ಯದಲ್ಲಿ 4,55,948 ಜನ ಸರ್ಕಾರಿ ನೌಕರರಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಐಎಎಸ್ ಮತ್ತು ಕೆಎಎಸ್ ಅನ್ನು ಬಿಟ್ಟೇ?

ಶ್ರೀ ಎಸ್. ಬಂಗಾರಪ್ಪ : ಐಎಎಸ್ ಮತ್ತು ಕೆಎಎಸ್ ಎಲ್ಲಾ ಸೇರಿ ಇಷ್ಟು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ಪಬ್ಲಿಕ್ ಸೆಕ್ಟರ್ ಸೇರುತ್ತಾ, ಇಲ್ಲದಿದ್ದರೆ ಕರೆಕ್ಟ್ ಮಾಡಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಆಯಿತು 200-300 ಸ್ವಲ್ಪ ಹೆಚ್ಚು ಕಡಿಮೆ ಸೇರಿಸಿ ಕೊಳ್ಳಿ. ಏನೂ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದರಲ್ಲಿ ತಪ್ಪೇನಿಲ್ಲ ಬಿಡಿ, ಸೇರಿಸಿಕೊಳ್ಳಬಹುದು..

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಸಮಾಧಾನಕ್ಕೆ ಹೇಳಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಏನು ಬೇಕಾದರೂ ಸೇರಿಸಿಕೊಂಡು ಹೋಗಬಹುದು, ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ, ನಾವು ಸುಮ್ಮನೆ ಕುಳಿತು ಕೇಳುತ್ತಿದ್ದೇವೆ. ತಾವು ಅಪ್ಪಣೆ ಕೊಡಿಸಿರುವ ಪ್ರಕಾರ ನಾನು ಹೇಳುತ್ತಿದ್ದೇನೆ. ಸ್ವಲ್ಪ ಹೆಚ್ಚು ಕಡಿಮೆ ಸೇರಿಸಿಕೊಳ್ಳಿ ಏನಂತೆ?

ಶ್ರೀ ಎಸ್. ಬಂಗಾರಪ್ಪ : ಆ ಪರಿಸ್ಥಿತಿ ನಿಮಗೆ ಬಂದಿದ್ದಕ್ಕಾಗಿ ನನಗೆ ದುಃಖವಾಗಿದೆ. 1988ರಲ್ಲಿ ತಮ್ಮ ಕಾಲದಲ್ಲಿ 24,298 ಜನರನ್ನು ಇತರೆ ಕೇಡರ್ ಗಳನ್ನು ಸೇರಿಸಿಕೊಂಡಂತೆ ವರ್ಗಾವಣೆ ಮಾಡಿದ್ದೀರಿ. 1989ರಲ್ಲಿ 17,900 ಎಂದರೆ 18,000 ಜನರ ವರ್ಗಾವಣೆಯಾಗಿದೆ. 1990ರಲ್ಲಿ 35,000 ಜನರ ವರ್ಗಾವಣೆಯಾಗಿದೆ. ನನ್ನ ಕಾಲದಲ್ಲಿ ಅಂದರೆ 1991ರಲ್ಲಿ 13,108 ಜನ ಮಾತ್ರ ಕೆಎಎಸ್ ಮತ್ತು ಐಎಎಸ್ ಎಲ್ಲಾರನ್ನು ಒಳಗೊಂಡು ವರ್ಗಾವಣೆಯಾಗಿದ್ದಾರೆ. ಏನು ಭಾಷಣ ಮಾಡಿದ್ದೇ ಮಾಡಿದ್ದು, ಅಲ್ಲಿ ವರ್ಗಾವಣೆ ಇಲ್ಲಿ ವರ್ಗಾವಣೆ, ಎಲ್ಲೆಲ್ಲೂ ವರ್ಗಾವಣೆ ಎಂದು ಹೇಳಿದ್ದೆ ಹೇಳಿದ್ದು. ನಿಮ್ಮ ಕಾಲದಲ್ಲಿ ಇದ್ದ ಸ್ಪೇಗಿಂತ ಈಗ ಹೆಚ್ಚಾಗಿದೆ, ನಾವು ಜಾಸ್ತಿ ವರ್ಗಾವಣೆ ಮಾಡಬಹುದಾಗಿತ್ತು. ಅದು ಬಿಟ್ಟು ಟ್ರಾನ್ಸ್‌ಫರ್ಸ್, ಟ್ರಾನ್ಸ್‌ಫರ್ಸ್ ಎಂದು ಹೇಳಿದರಲ್ಲ ಇಷ್ಟೇ. ಈ ಅಂಕಿ ಅಂಶಗಳನ್ನು ತೆಗೆದುಕೊಂಡು ಹೋಗಿ ಇನ್ನು ಮೇಲೆ ಭಾಷಣ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಂ.ಪಿ.ಎಂ. ವಿಚಾರ ಇದೆ ಸಾಧ್ಯವಾದರೆ ಸ್ವಲ್ಪ ಹೇಳಿ.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೇ ಇನ್ನು ಉಳಿದಿರತಕ್ಕಂಥ ವಿಚಾರಗಳು political interference and frequent change of portfolios and ministers. ಅದಕ್ಕಿಂತ ಮೊದಲು ಇನ್ನು ಎರಡು ವಿಚಾರಗಳನ್ನು ಹೇಳುತ್ತೇನೆ. ಮಾನ್ಯ ಸಚಿವರಾದ ಶ್ರೀಮಾನ್ ಡಿ.ಕೆ. ಶಿವಕುಮಾರ್ ಮತ್ತು ಮಾನ್ಯ ಸದಸ್ಯರಾದ ಶ್ರೀಮಾನ್ ಶಿವರಾಮೇಗೌಡರವರ ಬಗ್ಗೆ ಹೇಳಿರತಕ್ಕಂಥ ವಿಚಾರಗಳು. ಶ್ರೀಮಾನ್ ಶಿವರಾಮೇಗೌಡರ ವಿಚಾರದಲ್ಲಿ this is a complaint made on 25.11.89 under so many Sections - 43,47, 147, 148, 307,448, 323, 325,395 read with 506 of I.P.C.

ಶ್ರೀ ವಾಟಾಳ್ ನಾಗರಾಜ್ : ಇರುವುದನ್ನೆಲ್ಲಾ ಹಾಕಿಬಿಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಇದನ್ನೆಲ್ಲಾ ಹಾಕಿದರು, ಚುನಾವಣೆ ಕಾಲದಲ್ಲಿ ಅವರು ಕ್ಯಾಂಡಿಡೇಟ್ ಆಗಿದ್ದರು. ಆ ವಿವರಗಳೆಲ್ಲವನ್ನೂ ಹೇಳುವುದಕ್ಕೆ ಸಮಯವಿಲ್ಲ. ಏಕೆಂದರೆ ಅವರು ಅದರ ಬಗ್ಗೆ ಹೇಳಿದ್ದಾರೆ. ಇನ್ನೂ ಕೂಡ ಚಾರ್ಜ್‌ಶೀಟ್ ಹಾಕಿಲ್ಲ ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಆ ಸಂದರ್ಭದಲ್ಲಿ ಶ್ರೀಮಾನ್ ಶಿವರಾಮೇಗೌಡರು ಆಗ ಮುಖ್ಯ ಮಂತ್ರಿಯಾಗಿದ್ದ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಇದು ನನ್ನ ಮೇಲೆ ಮಾಡಿರತಕ್ಕಂಥ ಅನ್ಯಾಯದ ಅಲಿಗೇಷನ್ ಅನ್ಯಾಯವಾಗಿದೆ. ಬೇರೆ ಸರಿಯಾದ ಇನ್‌ವೆಸ್ಟಿಗೇಟಿಂಗ್ ಆಫೀಸರ್‌ರವರನ್ನು ಹಾಕಿ ಇದನ್ನು ವಿಚಾರ ಮಾಡಿ, ನಂತರ ನನ್ನ ಮೇಲೆ ಕ್ರಮ ತೆಗೆದುಕೊಳ್ಳಬಹುದೆಂದು ಕ್ಲಿಯರಾಗಿ ಲೆಟರ್ ಬರೆದಿದ್ದಾರೆ. ಅವರ ಕಾಪಿ ಕೂಡ ಅವರ ಹತ್ತಿರ ಇದೆ .ನಂತರ ಇನ್‌ವೆಸ್ಟಿಗೇಟಿಂಗ್ ಆಫೀಸರ್‌ರವರು ಚೇಂಜ್ ಆದರು. ಸುಮಾರು ಒಂದೆರಡು ಸಾರಿ ಚೇಂಜ್ ಆಗುತ್ತಾರೆ. ಆಮೇಲೆ ಎಲೆಕ್ಷನ್ ಬೇರೆ ಬಂತು. ಈಗ ನಾವು ಇಲಾಖೆಗೆ ಆ ಒಂದು ಕಾರ್ಯಕ್ರಮಕ್ಕೆ ಸೂಚನೆ ಕೊಟ್ಟಿದ್ದೇವೆ. ನೀವೆಲ್ಲಾ ಹೇಳಿದ್ದೀರಿ. ಎ.ಬಿ.ಸಿ.ಡಿ. ಯಿಂದ ಜಡ್ ವರೆಗೆ ಅವರ ಕ್ಯಾಟಗರಿಯಲ್ಲಿ ಇವೆ, ಕೇಸ್ ಹಾಕುತ್ತೇವೆ. ಎಂದಾದರೂ ಹೇಳಿ ಬಿ. sheet ತೆಗೆದುಕೊಳ್ಳುತ್ತೇವೆಂದಾದರೂ ಹೇಳಿ ನೀವೇನಾದರೂ ಹೇಳಿ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಈಗ ನಾವು ಏನಾದರೂ ಒಂದು ಹಾಕುವುದಲ್ಲ ಕಾನೂನು ಪ್ರಕಾರ ನಾವು ತನಿಖೆ ನಡೆಸಿ ಅದರ ಮೇಲೆ ನಾವು ಕಾರ್ಯಕ್ರಮ ಹಾಕಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅವರ ಮೇಲೆ ಕೇಸ್ ಇಟ್ಟುಕೊಂಡೇ ಇರಬೇಡಿ, ತೆಗೆಯಿರಿ, ಇಲ್ಲವೇ ನಿಮ್ಮ ಕೊನೆಯವರೆಗೂ ಇಟ್ಟುಕೊಂಡಿದ್ದರೆ, ಪಾಪ ಅವರು ಆ ಭಯಕ್ಕೆ ನಿಮ್ಮ ಜೊತೆಯಲ್ಲೇ ಇರುವುದು, ಕೇಸ್ ತೆಗೆದು ಬಿಡಿ ಸಂತೋಷಪಡುತ್ತಾರೆ. ನಿಮಗೆ ಸಪೋರ್ಟ್ ಮಾಡುವುದು ಇದೆಲ್ಲಾ ಇರುವುದು ಬೇಡ. ತೆಗೆಯುವುದಾದರೆ 'ಬಿ' ಶೀಟ್ ತೆಗೆದು ಬಿಡಿ ನಾನು ಸಂತೋಷ ಪಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಾನು ತಮ್ಮ ಮೂಲಕ ಅವರಲ್ಲಿ ಮನವಿ ಮಾಡುತ್ತಿದ್ದೇನೆ. ಇದನ್ನು ಮುಂದುವರಿಸುವುದು ಬೇಡ. ಇದರಲ್ಲಿ ಸತ್ಯಾಂಶ ಇಲ್ಲ ಎನ್ನುವುದಾದರೆ, ಅದನ್ನು 'ಬಿ' ಶೀಟ್ ಹಾಕಿದ್ದರೆ ನಾಳೆ ಕೂಡಲೇ ಅವರು ಆರೋಪದಿಂದ ಮುಕ್ತಿ ಎಂದು ಹೇಳಿ. ಸುಮ್ಮನೆ ಅದನ್ನು ನೀವು ಕೊನೆಯವರೆಗೂ ಇಟ್ಟುಕೊಂಡು ಹೋಗಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಈ ವಿಚಾರದಲ್ಲಿ ಇಲ್ಲಿ ಯಾರದೋ ಚಾರಿತ್ರ್ಯ ಹರಣ ಮಾಡಬೇಕು ಎಂದು ತರಲಿಲ್ಲ. ಅವರು ಕೇಳಿದರು ಎನ್ನುವ ಕಾರಣಕ್ಕಾಗಿ ಹೇಳಿದೆ. ನಾವು ಶಾಸಕರು ಇಲ್ಲಿ ಕುಳಿತಿದ್ದೇವೆ. ಮುಖ್ಯ ಮಂತ್ರಿಗಳಿಗೆ ಪತ್ರ ಬರೆಯುತ್ತೇವೆ. ಅದು ಎರಡು ವರ್ಷದ ತನಕ ಚಾರ್ಜ್‌ಶೀಟ್ ಹಾಕದೆ ಉಳಿಯುತ್ತದೆ. ಇದೇ ಅನುಕೂಲತೆಗಳು ಸಾಮಾನ್ಯ ಜನರಿಗೂ ಇದೆಯೇ? ಇದು ಒಂದು ಪ್ರಶ್ನೆ. ಎರಡನೆಯ ಪ್ರಶ್ನೆ ಏನೆಂದರೆ, ಇವರು ಅರ್ಜಿ ಕೊಟ್ಟರು ಎಂದು ಹೇಳಿದ ಕೂಡಲೇ ಅಲ್ಲಿಂದ ಎಲ್ಲ ಫೈಲ್‌ಗಳನ್ನು ಇಲ್ಲಿ ಹೋಮ್ ಸೆಕ್ರೆಟರಿ ಯವರ ಹತ್ತಿರ ತರಿಸುತ್ತೀರಿ. ತರಿಸಿ ಹಾಗೆಯೇ ಇಟ್ಟುಕೊಳ್ಳುತ್ತೀರಿ ಏಕೆ? ಅದೇ ನನ್ನ ಪಾಯಿಂಟ್.

ಶ್ರೀ ಎಸ್.ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ ಈ ಸಂದರ್ಭದಲ್ಲಿ ಇದರಲ್ಲಿ ಡಕಾಯಿತಿ ಸೆಕ್ಷನ್ಸ್ ಇದೆ, ಮತ್ತೊಂದು ಇದೆ, there a large number of witnesses

have to be examined. ನಾನು ಅದನ್ನು ನೋಡಿದೆ. ಸಿಕ್ಕಾ ಪಟ್ಟೆ ಜನರದ್ದು ಹಾಕಿಬಿಟ್ಟಿದ್ದಾರೆ. ಒಟ್ಟು 45 ಜನರ ಮೇಲೆ ಕಂಪ್ಲೈಂಟ್ ಇರುವುದರಿಂದ ಇನ್ನು ವಿಟ್‌ನೆಸ್ ಲೆಕ್ಕವನ್ನು ತಾವೇ ಹಾಕಿಕೊಳ್ಳಬೇಕು. ಇದು ನಂಬರ್ ಒನ್. ಡಕಾಯಿತಿ ಸೆಕ್ಷನ್ ಇದ್ದಾಗ ತಾವು ಏನು ಮಾಡಬೇಕಾಗುತ್ತದೆ ಎಂದರೆ ನೀವು material ರೆಕವರಿ ಮಾಡಿಕೊಳ್ಳಿರಿ, ಅಂದರೆ ನಿಮ್ಮ ಡಕಾಯಿತಿ ಸೆಕ್ಷನ್ ಉಳಿಯುವುದಿಲ್ಲ. ಈಗ ಕೇಸ್ ಅಂತೂ ಕ್ರಿಮಿನಲ್, ಇನ್‌ವೆಸ್ಟಿಗೇಷನ್, ಟ್ರೈಯಲ್, ಇತ್ಯಾದಿ ಗೊತ್ತಿರತಕ್ಕಾಂಥದ್ದು ತಮಗೆ ಅರ್ಥವಾಗುತ್ತದೆ. ಆದ್ದರಿಂದ ಡಕಾಯಿತಿ ಸೆಕ್ಷನ್ 28 ಸೆಕ್ಷನ್ ಸೇರಿಸಿ ಇಟ್ಟುಕೊಂಡುಬಿಟ್ಟರೆ, ಅದರಲ್ಲಿ material recovery......

ಶ್ರೀ ವಾಟಾಳ್ ನಾಗರಾಜ್ : ಪೋಲೀಸಿನವರದ್ದು ಇದು ಒಂದು ವರ್ತನೆ. ಈ ತರಹ ಸಿಕ್ಕಿದಾಗಲೆಲ್ಲಾ ಡಕಾಯಿತಿ ಕೇಸ್ 25 ಹಾಕುವುದು ಯಾವಾಗಲೂ ಇದ್ದೇ ಇರುತ್ತದೆ. ಇದು ನಡೆದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಶಾಸಕರಾದರೆ ಕ್ರಿಮಿನಲ್ ಪ್ರೊಸಿಜರ್ ಕೋಡ್ ಬೇಡವೇ?

ಶ್ರೀ ಎಲ್.ಆರ್. ಶಿವರಾಮೇಗೌಡ : ಏತಕ್ಕೋಸ್ಕರ ತಡವಾಯಿತು ಅಂದರೆ ಆಗ ಮುಖ್ಯ ಮಂತ್ರಿಗಳು ಮಾನ್ಯ ಪುಟ್ಟಸ್ವಾಮಿಗೌಡರನ್ನು ಡೆಪ್ಯೂಟ್ ಮಾಡಿದ್ದರು. ಪುಟ್ಟಸ್ವಾಮಿಗೌಡರು ಬಂದಾಗ ಎಲ್ಲರನ್ನೂ ಕರೆದು ಹೇಳಿದರು. ಇನ್ನು ಮೇಲೆ ಯಾವ ತಾಪತ್ರಯ ಇಲ್ಲದ ಹಾಗೆ ನಮ್ಮ ಊರಿನಲ್ಲಿ ನಾವು ಸರಿಯಾಗಿ ಇರುತ್ತೇವೆ ಎಂದು ಹೇಳಿದ ಮೇಲೆ ಯಾವ ಕೇಸು ವಗೈರೆ ಹಾಕುವುದು ಬೇಡ ಎಂದು ಆಯಿತು.

ಅಧ್ಯಕ್ಷರು : ಈಗ ಅವಿಶ್ವಾಸ ನಿರ್ಣಯ ಇರುವುದು ಬಂಗಾರಪ್ಪನವರ ಮಂತ್ರಿ ಮಂಡಲದ ಮೇಲೆ. ಶಿವರಾಮೇಗೌಡರು .....

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ, ಯಾರು ಯಾರು ಮಂತ್ರಿ ಮಂಡಲದ ಪರವಾಗಿ ಇದ್ದೇವೋ, ಅವರ ಪರವಾಗಿ ಹೇಳುತ್ತೇವೋ, ಅವರುಗಳ ಮೇಲೆಲ್ಲಾ ಅವಿಶ್ವಾಸ ನಿರ್ಣಯ ಮಂಡಿಸುತ್ತಿದ್ದಾರಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಕೇಸ್ ಚಾರ್ಜ್‌ಶೀಟ್ ಏತಕ್ಕೆ ಹಾಕಲಿಲ್ಲ, ಎಂದು ಕೇಳಿದ್ದಾರೆ. ಅದಕ್ಕಾಗಿ ನಾನು ಏನು ಹೇಳಿದೆ, unless the materials are recovered connected with the dacoity section, no case can be made out against the accused persons.

ಕೇಸು ರಿಜಿಸ್ಟರು ಮಾಡುವುದು ಸುಲಭ, ಚಾರ್ಜ್‌ಶೀಟ್ ಹಾಕುವುದು ಸುಲಭ, ನಾಳೆ ಕೋರ್ಟಿನಲ್ಲಿ ನೀವು ಏತಕ್ಕೆ ಹಾಕಿದಿರಿ, ನೀವು ಮೆಟಲ್ ರಿಕವರಿ ಮಾಡಲಿಲ್ಲ, ಇನ್‌ವೆಸ್ಟಿಗೇಷನ್ ಮಾಡಿ ಎನ್ನುವುದು ಅದು ಬೇರೆ ಅಬ್ಜಕ್ಷನ್ ಬರುತ್ತದೆ. ಇದೆಲ್ಲಾ ಪ್ರಶ್ನೆ ಇರುವುದರಿಂದ, ಫೇರ್ ಇನ್ ವೆಸ್ಟಿಗೇಷನ್ ಇರಬೇಕು ಎನ್ನತಕ್ಕದ್ದು ನೋಡುತ್ತೇವೆ. ಅದು ಕೇಸ್ ಇದೆ ಅಂದರೆ, ಅವರ ಮೇಲೆ ಈ ಚಾರ್ಜ್‌ಶೀಟ್ ಹಾಕಲಿಕ್ಕೆ ನಾವು ಹಿಂದೇಟು ಹಾಕುವುದಿಲ್ಲ, ಇಲ್ಲ ಅಂದರೆ ಚಾರ್ಜ್‌ಶೀಟ್ ಹಾಕಲಿಕ್ಕೆ ಕಾರಣ ಬರುವುದಿಲ್ಲ, ಬಿ ಶೀಟ್ ವಗೈರೆ ಹಾಕಲೇಬೇಕಾಗುತ್ತದೆ. ಅದು ಕಾನೂನು ಇದೆ. ತಾವು ಆಗಲೇ ಹೇಳಿದಿರಿ, ಇದರ ಬಗ್ಗೆ ನಾವು ನಿಷ್ಪಕ್ಷಪಾತವಾಗಿ ವಿಚಾರ ಮಾಡಿ ಆದಷ್ಟು ಶೀಘ್ರ ಇದರ ಬಗ್ಗೆ ನಾವು ಕಾರ್ಯಕ್ರಮವನ್ನು ಹಾಕುತ್ತೇವೆ. ಇನ್ನೊಂದು ವಿಚಾರ ನಮ್ಮ ಮಂತ್ರಿಮಂಡಲದ ಸದಸ್ಯರಾದ ಶ್ರೀ ಡಿ.ಕೆ. ಶಿವಕುಮಾರ್ ಅವರ ಮೇಲೆ ಇರತಕ್ಕಂಥಾದ್ದು. This case was registered on 28.9.86 against the Sri Shivakumar and 5 others in Kodihalli police station.......

ಇದು ಸೊಸೈಟಿಗೆ ಸಂಬಂಧಪಟ್ಟಿದ್ದು ಇದೆ. ನನಗೆ ಅರ್ಥವಾಗುತ್ತಿಲ್ಲ, why the case was registered under the provisions of People's Representation Act?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ Let me explain myself. ನಾನು ಈ ಕೇಸಿಗೆ ಸಂಬಂಧಪಟ್ಟ ವಿವರಣೆ ಕೇಳಲಿಕ್ಕೆ ಹೋಗಲಿಲ್ಲ, ನಾನು ಕೇಳಿದ್ದಾದರೂ ಏನೆಂದರೆ, ರಾಜ್ಯಾಂಗಬದ್ಧವಾಗಿರುತ್ತೇವೆಂದು ಹೇಳಿ ಪ್ರಮಾಣವಚನ ಸ್ವೀಕಾರ ತೆಗೆದುಕೊಂಡಿರುತ್ತೀರಿ ಎಂದು ಅಷ್ಟೆ Why do you go into the details in the matter.

ಶ್ರೀ ಎಸ್. ಬಂಗಾರಪ್ಪ : ಆಗಲಿ, Thank very much

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಗೊತ್ತಾಗುತ್ತದೆ....

ಶ್ರೀ ವಾಟಾಳ್ ನಾಗರಾಜ್ : ನನಗೇನೂ ಗೊತ್ತಾಗುವುದಿಲ್ಲ, ಯಾವ ಕೇಸುಗಳೂ ನಮ್ಮ ಮೇಲಿಲ್ಲ. ಗೊತ್ತಾಗುವುದೇನಿದೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ವಾಟಾಳ್ ನಾಗರಾಜ್ ರವರ ಮೇಲೆ ಯಾವ ಕೇಸೂ ಇಲ್ಲ ಎಂದರೆ ನಾನು ಬಹಳ ಸಂತೋಷ ಪಡುತ್ತೇನೆ. ಏಕೆಂದರೆ , ಅವರ ಮೇಲೆ ಕೇಸು ಇಲ್ಲದೇ ಇರತಕ್ಕ ದಿನವನ್ನೇ ನಾನು ನೋಡಿಲ್ಲ. ಆದುದರಿಂದ ನಾನು ಹೇಳಿದ್ದು. ಇಲ್ಲಿ ಮಾನ್ಯ ಶಿವಕುಮಾರ್‌ರವರ ಮೇಲೆ ಎಂಥದ್ದೇ ಕೇಸು ಇರಲಿ, OK I will confine to that point only. ಹಾಗಿದ್ದಾಗ Rule of law is that one will have to respect the court existing laws, everything ಎಂಬುದು ತಮ್ಮ ಅಭಿಪ್ರಾಯ. I may be a Chief Minister, Minister, MLA or anybody else, but law does not distinct between an ordinary citizen and a Chief Minister or a Minister of an ordinary citizen, and an MLA or an officer like that I could see. ಒಂದು ಕೇಸು ಇರುವಾಗ ಅದು ಸರಿಯೋ ತಪ್ಪೋ ಆಮೇಲೆ ಎವಿಡೆನ್ಸ್ ರೆಕಾರ್ಡಿಂಗ್ ಆರ್ಗ್ಯುಮೆಂಟ್ ಆಗಿ ಅವರು ಏನು ತೀರ್ಪು ಕೊಡುತ್ತಾರೋ ಕೊಟ್ಟುಕೊಳ್ಳಲಿ. ಆದರೆ ಕೋರ್ಟಿಗೆ ನಾವು ಗೌರವ ಕೊಡಬೇಕಾಗಿದೆ ಎನ್ನತಕ್ಕ ವಿಚಾರದಲ್ಲಿ ತಾವು ಮಾತನಾಡಿದ್ದೀರಿ.

ಇದರಲ್ಲಿರತಕ್ಕ ಪ್ರೊಸೀಜರ್ ಏನು ಎಂದರೆ ಸಮನ್ಸ್. ಕೇಸ್ ಆದ ಕೂಡಲೇ ಮೊದಲು ಸಮನ್ಸ್ ಹೊರಡುತ್ತದೆ. ಪಾರ್ಟಿ ಬರದಿದ್ದರೆ ಕಳಿಸಿಕೊಡುತ್ತಾರೆ. ಮತ್ತೆ ರಿಪೀಟ್ ಮಾಡಬಹುದು. ಕೋರ್ಟಿನ ಆರ್ಡರನ್ನು ಷೀಟನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ ಅದು ಗೊತ್ತಾಗುವುದಿಲ್ಲ, ಇಲ್ಲವೆಂದರೆ ಬಿ.ಡಬ್ಲ್ಯೂ ಅಂದರೆ ಬೇಲಬಲ್ ವಾರಂಟ್ ಎಂದು ಇಷ್ಯೂ ಮಾಡುತ್ತಾರೆ. ಒಬ್ಬ ಕಾನ್‌ಸ್ಟೇಬಲ್ ಹೋಗಿ ವಾರಂಟ್ ಕೊಟ್ಟು ನೆನಪು ಮಾಡಿ ಇಂಥ ತಾರೀಖು ಕೇಸು ಇದೆ, ನೀವು ಹೋಗಿ ಹಾಜರಾಗಿ ಎಂದು ಹೇಳುತ್ತಾನೆ. ಅದಕ್ಕೂ ಹೋಗದಿದ್ದರೆ ಎನ್ ಬಿ.ಡಬ್ಲ್ಯೂ ಎಂದು ಇಷ್ಯೂ ಮಾಡುತ್ತಾರೆ. ಅಂದರೆ ನಾನ್ ಬೇಲಬಲ್ ವಾರಂಟ್ ಇಷ್ಯೂ ಮಾಡುತ್ತಾರೆ. ಆಗ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಹೋಗಿ ಅದನ್ನು ಜಾರಿ ಮಾಡಿ ಅವರನ್ನು ಕೋರ್ಟಿಗೆ ಕರೆದುಕೊಂಡು ಹೋಗಿ ಹಾಜರು ಪಡಿಸಬೇಕು. ಇದರಲ್ಲಿ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ನಾನು ವಿವರಕ್ಕೆ ಹೋಗಿಲ್ಲ. Though FIR speaks of some other Shivakumar S/o Doreswamy ಎಂದು ಇದ್ದರೂ ಕೂಡ ಇವರು ಡಿ.ಕೆ. ಶಿವಕುಮಾರ್, ಸನ್ ಆಫ್ ಕೆಂಪೇಗೌಡ, ಅವರ ತಂದೆ ಹೆಸರು ನನಗೆ ಸರಿಯಾಗಿ ನೆನಪಿಲ್ಲ, ಈ ಕೇಸೇ ಉಳಿಯುವುದಿಲ್ಲ, ಇದು ಎಫ್.ಐ.ಆರ್.ನಲ್ಲೇ ಇದೆ. ಆದರೂ ಕೂಡ ಹಾಕಿದ್ದಾರೆ. ರೂಲ್ ಆಫ್ ಲಾಗೆ ನಾವು ಗೌರವ ಕೊಡಬೇಕು ಎಂದು.

ಶ್ರೀ ವಾಟಾಳ್ ನಾಗರಾಜ್ : ನಮಗೆ ಒಳ್ಳೆಯ ವಕಿಲರು ಸಿಕ್ಕಿದ್ದೀರಿ ಭೇಷ್

ಶ್ರೀ ಎಸ್. ಬಂಗಾರಪ್ಪ : ಆದರೂ ಕೂಡ ರೂಲ್ ಆಫ್ ಲಾ ಕೇಸು ಹಾಕಿದ್ದಾರೆ ಹೋಗಬೇಕಾಗುತ್ತದೆ ಕೋರ್ಟ್‌ಗೆ ಗೌರವ ಹಾಜರಾಗಿದ್ದಾರೆ. ಸಮನ್ಸ್ ಜಾರಿಗೆ ಕಾರಣ ಏನು ಎಂಬುದನ್ನು ಪತ್ತೆ ಹಚ್ಚುವುದಕ್ಕೆ ನಮಗೆ ಆಗುವುದಿಲ್ಲ.

ಅಧ್ಯಕ್ಷರು : ಕೋರ್ಟ್‌ಗೆ ಏತಕ್ಕೆ ಹೋಗಬೇಕು? ಏಕೆಂದರೆ ಅಪ್ಪನ ಹೆಸರು ಬೇರೆ ಇದೆ. ಆದ್ದರಿಂದ ನಾನು ಕೋರ್ಟ್‌ಗೆ ಏತಕ್ಕೆ ಹೋಗಬೇಕು?

ಎಸ್. ಬಂಗಾರಪ್ಪ : ಛಾರ್ಜ್‌ಷಾಟನ್ನು ಇವರ ಹೆಸರು ಇರುತ್ತದೆ.

MR SPEAKER : If the identity of the person is under dispute, there is no obligation cast on this Hon'ble Member as a citizen of this country to go to the court

ಶ್ರೀ ಎಸ್. ಬಂಗಾರಪ್ಪ : ಅದು ಹೀಗಿದೆ. ಲೀಗಲ್ ಆಗಿ ತಾವು ಒಂದು ಪಾಯಿಂಟನ್ನು ಸ್ವಲ್ಪ ವಿಚಾರ ಮಾಡುವುದು ಒಳ್ಳೆಯದು. ಶಿವಕುಮಾರ್ ಸನ್ ಆಫ್ ದೊರೆಸ್ವಾಮಿ ಎನ್ನತಕ್ಕದ್ದು ಎಫ್.ಐ.ಆರ್. ನಲ್ಲಿ ಬರಬಹುದದು ಅಥವಾ ಎವಿಡೆನ್ಸ್‌ನಲ್ಲಿ ಬರಬಹುದು. ಆದರೆ ಛಾರ್ಜ್ ಷೀಟ್‌ನಲ್ಲಿ ಡಿ.ಕೆ.ಶಿವಕುಮಾರ್ ಸನ್ ಆಫ್ ಕೆಂಪೇಗೌಡ ಎಂದು ಹಾಕಿಬಿಟ್ಟರು ಕೋರ್ಟ್ ಮುಂದೆ ಹೋಗಿ ನಿಂತುಕೊಳ್ಳಲೇಬೇಕು ಅಲ್ಲಿ ಹೋಗಿ ನಾನಲ್ಲ ಸ್ವಾಮಿ ಎಂದು ಹೇಳಿಯೇ ಬರಬೇಕಾಗುದ್ದತೆ. ಇದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಅದು ನನಗಾಗಲಿ ಸಮನ್ಸ್ ಬಂತು ಎಂದರೆ ಆದು ಬಹಳ ಕಷ್ಟ

SRI AZEEZ SAIT: I was the victim of this. There was an F.I.R. against me and my name did not appear in the chargesheet but they have no alternative and they framed the charge but the Judge acquitted.

ಶ್ರೀ ಎಸ್. ಬಂಗಾರಪ್ಪ : ಕೋರ್ಟ್‌ಗೆ ನಾವು ಹೋಗಲೇಬೇಕಾಗುತ್ತದೆ ಅದು ಬಹಳ ಕಷ್ಟವಾಗುತ್ತದೆ. ಫ್ರೀ ಛಾರ್ಜ್ ಎಂದು ಇದ್ದರೆ ಅದನ್ನು ಎಸ್ ಛಾರ್ಜ್ ಎಂದು ತೆಗೆದುಕೊಳ್ಳಬಹುದು. ಆದರೆ ಕೊರ್ಟಿಗೆ ಹಾಜರಾಗಲೇಬೇಕು. ಏಕೆಂದರೆ ಸಮನ್ಸ್ ಬಂದೇ ಬರುತ್ತದೆ. ಇವರ ತಂದೆಯ ಹೆಸರು ಕೆಂಪೇಗೌಡ ಆದರೆ ಅವರ ತಂದೆಯ ಹೆಸರು ದೊರಸ್ವಾಮಿ ಇಷ್ಟಾದರೂ ಕೂಡ ಕೋರ್ಟಿಗೆ ಹೋಗಲೇಬೇಕಾಗುತ್ತದೆ. ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. The Hon'ble Minister Sri D.K.Shivakumar has respected the court directions; He has appered before the court. ಜಾಮೀನು ತೆಗೆದುಕೊಂಡು ಇದನ್ನೆಲ್ಲಾ ಮಾಡಿದ್ದಾರೆ. ಏಕೆಂದರೆ ಐಡಿಂಟಿಫೈ ಆಫ್ ದಿ ಪರ್ಸನ್ ವ್ಯತ್ಯಾಸ ಇದ್ದುದರಿಂದ ನಾನಲ್ಲ ಎಂದು ಹೇಳಿ ಇದು ಬೇರೆ ಬೇರೆ ಕಡೆ ಸಮನ್ಸ್‌ಹೋಗಿ ಬಂದಿದೆ ಎಂದು ಭಾವನೆ ಇದ್ದುದರಿಂದ ಈ ವ್ಯತ್ಯಾಸವೇ ಹೊರತು ಗೌರವ ಕೊಡಬಾರದು ಎನ್ನತಕ್ಕ ವಿಚಾರ ಅವರ ಮನಸ್ಸಿನಲ್ಲಿಲ್ಲ.

SRI D.B.CHANDRE GOWDA: Don't forget the fact that the concerned Asst. Public prosecutor has not represented that he happens to be the Minister.

ಶ್ರೀ ಎಸ್. ಬಂಗಾರಪ್ಪ : ಮಿನಿಸ್ಟರ್ ಆದ ಮೇಲೆ ಬಂದಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಬ್ಬ ಮಂತ್ರಿಯ ಐಡಿಂಟಟಿ ಗೊತ್ತಿಲ್ಲದವರನ್ನು ಅಸಿಸ್ಟೆಂಟ್ ಪಬ್ಲಿಕ್ ಪ್ರಾನಿಕ್ಯೂಷ್ಟರ್ ಆಗಿ ಹಾಕಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಅವರು ತಮ್ಮ ಕಾರದಿಂದ ಈ ಇದ್ದಾರೋ ಅಥವಾ ನಮ್ಮ ಕಾಲದಲ್ಲಿ ಹುಟ್ಟಿ ಬಂದಿದ್ದಾರೋ ಎಂಬುದನ್ನು ನೋಡಬೇಕಾಗುತ್ತಿದೆ ಅದು ಇರಲಿ

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಕೈಗೆ ಇವರ ಕಾಲ ಸಿಕ್ಕಿ ನಮ್ಮನ್ನು ಫಜೀತಿ ಮಾಡುತ್ತಿದ್ದೀರಲ್ಲಾ.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ನಾವು ಶ್ರೀ ಮಾನ್ ಡಿ.ಕೆ. ಶಿವಕುಮಾರ್‌ರವರು ನಮ್ಮ ಸಚಿವ ಮಂಡಲದ ಸದಸ್ಯರಾಗಿ ಏನಿದ್ದಾರೆ ಅವರು ಮೇಲೆ ಅನ್ಯಾಯವಾಗಿ ಕೇಸ್ ಬಿದ್ದಿದೆ ಎನ್ನುವ ಬಾವನೆ ಈ ಸದನಕ್ಕೆ ಬಂದು ಅದು ನಿಜವಾಗಿದ್ದರೆ ನಿಜಕ್ಕೂ ಬಹಳ ಮನಸ್ಸಿಗೆ ನೋವಾಗುವಂತ ಈ ವಿಚಾರವೆನ್ನತಕ್ಕಂಥ ಮಾತು ಎಂದು ಈ ಸಂದರ್ಭದಲ್ಲಿ ಹೇಳುತ್ತಿದೆ. ಇಲ್ಲಿ ತಪ್ಪು ತಿಳಿದುಕೊಳ್ಳುವುದಕ್ಕೆ ಕಾರಣವಿಲ್ಲ, ಅಷ್ಟಾದರೂ ಕೂಡ ರೆಸ್ಪೆಕ್ಟೆಡ್ ಟು ಕೋರ್ಟ್ ಡೈರೆಕ್ಷನ್ ಹೋಗಿದ್ದಾರೆ ಹಾಜರಾಗಿದ್ದಾರೆ. ಇದಕ್ಕಿಂತ ಹೆಚ್ಚು ವಿಚಾರವನ್ನು ಪ್ರಸ್ತಾಪ ನಾನು ಮಾಡುವುದಕ್ಕೆ ಹೋಗುವುದಿಲ್ಲ.

ಮಾನ್ಯ ಅಧ್ಯಕ್ಷರೇ ಇನ್ನು ಉಳಿದಿರತಕ್ಕಂಥದ್ದು ಶ್ರೀ ಮಾನ್ ಎಂ.ವಿ.ಮೂರ್ತಿ ಎಸ್.ಪಿ.ಆಫ್ ಕಾರವಾರ ಅವರ ಬಗ್ಗೆ ತಾವು ಅಥವಾ ಬೇರೆ ಬೇರೆ ಮಿತ್ರರು ಮಾತನಾಡಿದ್ದಾರೆ. ಅದರಲ್ಲಿ Allegations against the police officer in Veerappan case ನಲ್ಲಿ ಅವನು ಎಸ್ಕೇಪ್ ಆಗಲಿಕ್ಕೆ ಕಾರಣನಾದ ಎಂದಿದ್ದರೂ ಆಕ್ಷನ್ ತೆಗೆದುಕೊಳ್ಳುವ ಬದಲು ಅವರಿಗೆ ಪ್ರಮೋಷನ್ ಕೊಟ್ಟರಿ ಎಂದು ಹೇಳಿದರು. Promotions action atc., these are all matters of enquiry. ಒಂದು ಎನ್‌ಕ್ವಯರಿಗೆ ಬಂದ ತಕ್ಷಣ ಅದರಲ್ಲಿ ಮತ್ತೊಂದು ನಿಲ್ಲುವುದಕ್ಕಾಗುವುದಿಲ್ಲ ಕಾನೂನು ತಮಗೆ ಗೊತ್ತಿದೆ ಒಂದು ಆ ಕಾನೂನು ಪ್ರಕಾರ ಕೊಟ್ಟಿದ್ದೇವೆಯೇ ವಿನಃ ಮತ್ತೆ ಯಾವುದೂ ಇಲ್ಲವೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ಮಾನ್ಯ ಅಧ್ಯಕ್ಷರೆ .....

ಶ್ರೀ ಸಿ. ಬೈರೇಗೌಡ: ಚೀಫ್ ಸೆಕ್ರೆಟರಿಯವರ ಬಗ್ಗೆ ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ : ಬರುತ್ತಿದ್ದೇನೆ. ಚೀಫ್ ಸೆಕ್ರೆಟರಿ ಬಗ್ಗೆ ತಾವು ನೆನಪು ಮಾಡಿ ಕೊಟ್ಟಿದ್ದೀರಿ ಬಹಳ ಸಂತೋಷ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಪದೇ ಪದೇ ಇಂಟರ್‌ಫಿಯರ್ ಮಾಡುತ್ತಿದ್ದೇನೆಂದಲ್ಲ ನಾನು ಈ ಮೂರ್ತಿ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಪ್ರಸ್ತಾಪ ಮಾಡಿದ ಗುರಿ ಬೇರೆ ಇರುತ್ತದೆ. ಉತ್ತರ ಬೇರೆದಕ್ಕೆ ಹೇಳುತ್ತೀರಿ. ಹಾಗೆಯೇ ಆಗುತ್ತಿದೆ. ಪ್ರತಿಯೊಂದು ಕೇಸ್‌ನಲ್ಲಿ ಮಾನ್ಯ ಶಿವಕುಮಾರ್‌ರವರನ್ನು ಅಪರಾಧಿ ಎನ್ನುವ ಕಾರಣಕ್ಕಾಗಿ ಅವರ ವಿಚಾರವನ್ನು ಇಲ್ಲಿ ತರಲಿಲ್ಲ ನೀವು ವಿವರಣೆಯನ್ನು ಕೊಟ್ಟಮೇಲೆ ನಾನು I only raised the Constitutional propriety of the Chief Minister and the rule of law

SRI S. BANGARAPPA: What is that propriety?

SRI D.B. CHANDRAGOWDA: What I said was case pending ಇದೆ ನಾನ್‌ಬೇಲಬಲ್ ವಾರೆಂಟ್ ಹಾಕಿದ್ದಾರೆ. ಇದನ್ನು ವೇರಿಫಿಕೇಷನ್ ಮಾಡದೆ ನೀವು ಪ್ರಮಾಣ ವಚನವನ್ನು ಸ್ವೀಕಾರ ಮಾಡುವುದಕ್ಕೆ ಕರೆಯುವುದಕ್ಕೆ ಮುಂಚೆ ಈ ವಿಚಾರಗಳನ್ನು ವೆರಿಫೈ ಮಾಡಬೇಕಾಗಿತ್ತು. Having sworn under the Constitution in the name of Constitution ಎನ್ನುವಂಥದ್ದು ಅಷ್ಟೇ ನನ್ನದು. ಇಲ್ಲಿ ಮೂರ್ತಿಯಾವರ

ಕೇಸ್ ಕೂಡ ನಾನು ಹೇಳಿದ್ದೇನೆ. ಕಾಡುಗಳ್ಳ ವೀರಪ್ಪನ್ ಕೇಸ್‌ನಲ್ಲಿ when he was in the forest Dept, he was the man responsible for the release of Veerappan ಎನ್ನುವ ಕಾರಣಕ್ಕಾಗಿ He was kept under suspension. He was not confirmed I.P.S ಈಗ I.P.S. ಅನ್ನೂ ಕನ್‌ಫರ್ಮ್ ಮಾಡುತ್ತೀರಿ. ಪ್ರಮೋಷನ್ ಕೊಡುತ್ತೀರಿ. ನಾವು ಇಲ್ಲಿ ವೀರಪ್ಪನ್ ಕೇಸ್ ಬಗ್ಗೆ ಚರ್ಚೆ ಮಾಡುವುದು. ವಿವಾದಕ್ಕೆ ಕಾರಣವಾದವನಿಗೆ ಪ್ರಮೋಷನ್ ಸಿಕ್ಕಿ ಅವನ್ನು ಇನ್‌ಸ್ಪೆಕ್ಟರ್ ಆಗುವುದಾದರೆ ಅಥವಾ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಆಗುದಾದರೆ ನಾವು ಏತಕ್ಕೆ ಚರ್ಚೆ ಮಾಡಬೇಕು? ಅದನ್ನು ಬಿಟ್ಟು ಬಿಟ್ಟು ಕಾನೂನು ಪ್ರಕಾರ ಮಾಡಿದ್ದೇವೆಂದು ಒಂದು ಉತ್ತರ ಹೇಳಿಬಿಟ್ಟರೆ ನಾನು ಕೇಳಿದಹಾಗೆ ಆಯಿತು. ನೀವು ಹೇಳಿದಹಾಗೆ ಆಯಿತು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ The entire argument boils down on only one point. ಈರೀತಿ ಅಲಿಗೇಷನ್ ಇದೆ ಅಂತಹನನ್ನು ತೆಗೆದುಕೊಂಡು ಹೋಗಿ ಮತ್ತೇ ಪ್ರಮೋಷನ್ ಕೊಟ್ಟು ಕಾರವಾರಕ್ಕೆ ಹಾಕಿದ್ದೀರಿ ಎಂದು ಹೇಳಿದ್ದರಿಂದ ನಾನು ಅದಕ್ಕೆ ಉತ್ತರ ಕೊಟ್ಟಿದ್ದು ನಾನು ಏನು ಹೇಳಿದ್ದೇನೆ ಎಂದರೆ Promotions under the rules will have to be given. If an allegation is made against an Officer, that can never come in the way for promotions. don't forget the basic legal issue. ಅದನ್ನು ಮಾಡಿದ್ದೇವೆ. ಸ್ವಾಮಿ ಅದಕ್ಕೋಸ್ಕರ ನಾವು ಕೊಡದಿದ್ದರೆ ಕೋರ್ಟಿಗೆ ಹೋಗುತ್ತಾನೆ. ಮತ್ತೆ ಅವರಿಗೆ ಪ್ರಮೋಷನ್ ಕೊಡತಕ್ಕಂಥ ಸಂದರ್ಭ ಬರುತ್ತದೆ. ಆದ್ದರಿಂದ ಉತ್ತರವನ್ನು ಕೊಟ್ಟಿದ್ದು ನಿಮ್ಮ ಪಾಯಿಂಟ್‌ಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಅಧ್ಯಕ್ಷರೇ ನಂತರ ತಾವು ಮಾತನಾಡಿರತಕ್ಕಂಥದ್ದು ಮಾನ್ಯ ಶಂಕರನಾರಾಯಣ್ ಚೀಫ್ ಸೆಕ್ರೆಟರಿ ಬಗ್ಗೆ ಅದು ಕೂಡ ಹೊಸದಲ್ಲ ಅದರ ಬಗ್ಗೆ ಚರ್ಚೆಯಾಗಿದೆ. ಆದರೂ ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ ಅದು ಮತ್ತೆ ರೆಕಾರ್ಡ್‌ಗೆ ಉಳಿಯುವುದು ಬೇಡ. ಚೀಫ್‌ಸೆಕ್ರೆಟರಿ ಯಾರನ್ನು ಮಾಡಬೇಕೆನ್ನುವ ವಿಚಾರ It goes by selection ಯಾರನ್ನಾದರೂ ತೆಗೆದುಕೊಂಡು ಬಂದು ಸರ್ಕಾರದವರು ಇಟ್ಟುಕೊಳ್ಳಬಹುದು ಎನ್ನತಕ್ಕಂಥದ್ದು ಅದರ ಅರ್ಥ ಅಂದರೆ Seniourity amongest the Officers ಎನ್ನತಕ್ಕಂಥದ್ದು ಉದಾಹರಣೆಗೆ ಮಾನ್ಯ ನರಸಿಂಹರಾವ್ ಅವರು ಇದ್ದಾಗ ಅವರು ಹೆಲ್ತ್‌ಸೆಕ್ರೆಟರಿಯಾಗಿದ್ದರು. ಸುಮಾರು 3-4 ಜನರನ್ನು ಸೂಪರಸೀಡ್ ಮಾಡಿ ಚೀಫ್ ಸೆಕ್ರೆಟರಿ ಆದರೂ ನಂತರ Shankaranarayan himself was made the Chief Secretary superseding the senior most other Officers.

ಅದು ಕೂಡ ನಡೆದಿದೆ. ಇಲ್ಲಿ ಪ್ರಭಾಕರಾವ್‌ರವರನ್ನು ಚೀಫ್ ಸೆಕ್ರೆಟರಿ ಮಾಡತಕ್ಕಂಥ ವಿಚಾರದಲ್ಲಿ ಇವರಿಗೆ ಅನ್ಯಾಯವಾಗಿದೆ ಎನ್ನತಕ್ಕಂಥ ವಿಚಾರ ಬಂದಿದೆ ಏನು ಅವರ ಮೇಲೆ ಅಲಿಗೇಷನ್ ಇತ್ತು ಎಂದರೆ ಅವರು ಎನ್.ಜಿ.ಎಫ್.ಗೆ. ಟಾರ್‌ಪೆರೋಸ್ ಕೊಳ್ಳುವ ವಿಚಾರದಲ್ಲಿ That was also an allegation made.ಇದು ಏನಾಯಿತೆಂದರೆ ತಮ್ಮ ಸರ್ಕಾರದಲ್ಲಿ ಶ್ರೀ ಜಿ.ಹೆಚ್. ಪಾಟೀಲರು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದ ಸಂದರ್ಭದಲ್ಲಿ ಇಲ್ಲೇ ಕುಳಿತುಕೊಂಡಿದ್ದ ಸಂದರ್ಭದಲ್ಲಿ ನಾವು ಪ್ರಶ್ನೆ ಮಾಡಿದ್ದೆವು. ಅವರು ಏನು ಉತ್ರ ಕೊಟ್ಟಿರೆಂದರೆ ಪ್ರಭಾಕರ್ ರಾವ್ ಈಗಿನ ಮುಖ್ಯ ಕಾರ್ಯದರ್ಶಿ ಅವರು ಹಿಂದೆ ಎನ್.ಇ.ಎಫ್.ನಲ್ಲಿದ್ದಂತಹವರು ಅವರು ಯಾವುದೇ ತಪ್ಪು ಮಾಡಿಲ್ಲ ಕಾನೂನು ಪ್ರಕಾರ ಎಲ್ಲ ಸರಿಯಾಗಿದೆ ಎಂದು ಅವರೇ ಉತ್ತರ ಕೊಟ್ಟಿದ್ದಾರೆ. ಅದು ರೆಕಾರ್ಡ್‌ನಲ್ಲಿದೆ ನಾವು ಅವರಿಗೆ ಏತಕ್ಕಾಗಿ ಪ್ರೋಮೋಷನ್ ಕೊಟ್ಟು ಮುಖ್ಯ ಕಾರ್ಯದರ್ಶಿಗಳನ್ನಾಗಿ ಮಾಡಿದ್ದೇವೆಂದರೆ ಒಂದೇ ಒಂದು ಕಾರಣ ಅವರ ಸೀನಿಯಾರಿಟಿ ಸೂಪರ್‌ಸೀಡ್ ಆಗಿ ಅನ್ಯಾಯ ಆಗಿತ್ತು ಎಂದು ಆ

ಅನ್ಯಾಯ ಸರಿಯಲ್ಲ ಅವರನ್ನು ಮುಖ್ಯ ಕಾರ್ಯದರ್ಶಿಗಳನ್ನಾಗಿ ಮಾಡತಕ್ಕಂಥ ಅವಶ್ಯಕತೆ ಎನ್ನುವ ದೃಷ್ಟಿಯಿಂದ ನಾವು ಮಾಡಿದ್ದೇವೆ. ಇದರಲ್ಲಿ ಏನು ತಪ್ಪಿದೆ ಎಂದು ತಮ್ಮನ್ನೇ ಮರು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಈಗಾಗಲೇ ಹೇಳಿದ್ದೇನೆ. ವೈಯಕ್ತಿಕವಾಗಿ ಯಾರ ವಿರುದ್ಧವೂ ಸಾಧಾರಣವಾಗಿ ಆರೋಪ ಮಾಡತಕ್ಕ ಅಪರಾಧ ಹೊರಿಸತಕ್ಕ ಸ್ವಭಾವ ನನ್ನದಲ್ಲ ನನ್ನ ಪ್ರಶ್ನೆಯೇ ಒಂದು ನಿಮ್ಮಿಂದ ಬರತಕ್ಕ ಉತ್ತರ ಮತ್ತೊಂದು ಶಂಕರನಾರಾಯಣ ಅವರು ಸಸ್ಪೆಂಡ್ ಆದರೆ ಕೆ.ಎ.ಟಿ.ಯಲ್ಲಿ ಅಥವಾ ಸಿ.ಎ.ಟಿ.ಯಲ್ಲಿ ಅದಕ್ಕೆ ಸ್ಟೇ ಮಾಡಿದರೆ you will shut him out. ಆದರೆ ಇಲ್ಲಿ ಯಾವ ಅಧಿಕಾರಿಯನ್ನು ನೀವು ನೇಮಕ ಮಾಡಿದ್ದೀರಿ. ಇವರು ಸಸ್ಪೆನ್‌ಷನ್ ಆಗಿ ಸ್ಟೇ ಕೊಟ್ಟರೆ ಪ್ರೊಮೋಷನ್ ಕೊಡುತ್ತಾ ಇರುತ್ತೀರಿ. ಈ ವಿಚಾರವನ್ನಷ್ಟೇ ಕುರಿತು ನಾನು ಮಾತನಾಡಿದ್ದೇನೆ. Probably I do not know, how to make myself clear on these points. ಏಕೆಂದರೆ ಕೆಲವು ಸಲ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ನನ್ನ ಅನುಭವದ ಆಧಾರದ ಮೇಲೆ ನಾನು ಇಲ್ಲಿ ಪ್ರಶ್ನೆ ಮಾಡಿರಿತಕ್ಕಂಥಾದ್ದು Accountability of the Administration to the Legislature and posting certain officers to relevant positions of importance when they have suspected thair bona fides.

ಇದು ಬಿಟ್ಟು ನಾನು ಶಂಕರನಾರಾಯಣ ಅವರು ವಿರುದ್ಧ ಇವರ ವಿರುದ್ಧ ಎಂದು ಹೇಳಿಲ್ಲ. ಇವರು ಸಸ್ಪೆನ್‌ಷನ್ ಆದರೆ ಪ್ರೊಮೋಷನ್ ಕೊಟ್ಟು ಇಲ್ಲಿ ಕೂರಿಸುತ್ತೀರಿ. ಶಂಕರನಾರಾಯಣ ಅವರು ಸಸ್ಪೆಷನ್ ಆದರೆ ಅವರನ್ನು shut him out. ಸಸ್ಪೆನ್‌ಷನ್‌ಗೆ ಕಾರಣವೇನು? ಅವರು ಪತ್ರಿಕೆಗೆ ಹೋದರು ಎಂಬ ಒಂದೇ ಒಂದು ಕಾರಣ ಇಲ್ಲಿ Almost Charge sheet.

SRI S. BANGARAPPA : Almost ಅಲ್ಲಿ charge sheet ಆಗಿತ್ತೇ?

ಶ್ರೀ ಡಿ.ಬಿ.ಚಂದ್ರೇಗೌಡರು : ಇದುವರೆಗೆ ಲೋಕಾಯುಕ್ತದಿಂದ ಅಲಿಗೇಷನ್ ಬಂದ ಯಾವ ಐ.ಎ.ಎಸ್. ಅಧಿಕಾರಿಗಳಿಗೂ ಒಂದೇ ಒಂದು ಚಾರ್ಜ್‌ಶೀಟ್ ಹಾಕಿಲ್ಲ ಎನ್ನುವುದು ನನಗೆ ಗೊತ್ತು. What was the nature of allegation?

ಶ್ರೀ ಎಸ್. ಬಂಗಾರಪ್ಪ : ಶಂಕರನಾರಾಯಣ್ ವಿಚಾರದಲ್ಲಿ ಒಂದೇ ಒಂದು ಸ್ಟೇಟ್‌ಮೆಂಟ್‌ಗೋಸ್ಕರ ಎಂದು ಹೇಳಿದಿರಿ. ನಾನು ತಮ್ಮ ಭವಿಷ್ಯತ್‌ನಲ್ಲಿ ಶುಭ ಹಾರೈಕೆ ಮಾಡುತ್ತೇನೆ ತಾವು ಕೂಡ ಒಂದು ಸಾರಿ ಚೀಫ್ ಮಿನಿಸ್ಟರ್ ಆಗಿ ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಯಾವಾಗ?

ಶ್ರೀ ಎಸ್. ಬಂಗಾರಪ್ಪ : ಯಾವಾಗ ಅಂದರೆ ತಾರೀಖು ಜಾತಕ ಬರೆದುಕೊಂಡುವುದಕ್ಕಾಗುತ್ತದೆಯೆ? ತಾವು ಮುಖ್ಯ ಮಂತ್ರಿಯಾಗಿ ಎಂದು ಶುಭ ಹಾರೈಸುತ್ತೇನೆ. ಸಾಧ್ಯವಿದ್ದರೆ ಈ ದೇಶದ ಜನ ಒಪ್ಪಿದರೆ ಎಂದು ಆ ಷರತ್ತಿನ ಮೇಲೆ ಹೇಳುತ್ತಿದ್ದೇನೆ. ಆಗ ನಿಮಗೆ ಒಬ್ಬರು ಮುಖ್ಯ ಕಾರ್ಯದರ್ಶಿ ಇರುತ್ತಾರೆ. This is very serious matter. ಒಬ್ಬ ಚೀಫ್ ಸೆಕ್ರೆಟರಿಯವರು ಸರ್ಕಾರದ ವಿರುದ್ಧವಾಗಿ ನೇರವಾಗಿ ಪತ್ರಿಕೆಗಳಲ್ಲಿ ಬೈಯ್ಯುತ್ತಾರೆ ನೇರವಾಗಿ ಮುಖ್ಯ ಮಂತ್ರಿ ನಿಮಗೆ ಬೈಯ್ಯುತ್ತಾರೆ. ಆಗ ಸರ್ಕಾರದ ಗತಿ ಏನಾಗುತ್ತದೆ? Please think over the matter. Mr.Naniah in the Upper House appreciated the action ನಾನು ಅನಾವಶ್ಯಕವಾಗಿ ಅವರನ್ನು ಹೊಗಳುತ್ತೇನೆಂದು ತಿಳಿದುಕೊಳ್ಳಬೇಡಿ. Do you know what he said, as per the Statement given by the Ex-Chief Secretary nobody can excuse him. ಎಂಬ ಮಾತನ್ನು ಮಾನ್ಯ ನಾಣಯ್ಯನವರು ಹೇಳಿದ್ದಾರೆ ಆದರೆ ನೀವು ಹೇಳತಕ್ಕದ್ದು......

SRI D.B. CHANDRE GOWDA : I have also said it. It is on record.

ಶ್ರೀ ಎಸ್. ಬಂಗಾರಪ್ಪ : ಇಲ್ಲಿ ಒಬ್ಬರು ಇರುತ್ತಾರೆ. ಅವರು ಇಲ್ಲಿಯೇ ಮಾತನಾಡುತ್ತಾ ಕುಳಿತುಕೊಂಡು ಬಿಟ್ಟರೆ ಆಗ ಗತಿ ಏನಾಗುತ್ತದೆ. ಅವರು ನೇರವಾಗಿ ಪತ್ರಿಕೆಗೆ ಹೋಗಿದ್ದಾರೆ under what rules ಅವರು ಹೋಗಿದ್ದಾರೆ ಮುಖ್ಯ ಕಾರ್ಯದರ್ಶಿಗಳು ಎಂದರೆ ಹೇಗಿರಬೇಕು ಇಡೀ ಸರ್ಕಾರವನ್ನು ನೋಡಿಕೊಳ್ಳತಕ್ಕ ಜವಾಬ್ದಾರಿ ಅವರದು. ಎಲ್ಲಾ ಸೆಕ್ರೆಟರಿಗಳನ್ನು ಎಲ್ಲಾ ಇಲಾಖೆಗಳನ್ನು ಸಾವಧಾನದಿಂದ ಕಾನೂನು ಪ್ರಕಾರ ನೋಡಿ ಕೊಳ್ಳಬೇಕಾಗುತ್ತದೆ. He is the cabinet Secretary also. A Cabinet Secretary says something very serious against the Government and the Chief Minister.ಈ ವಿಚಾರವನ್ನು ನೋಡಿದ ತಕ್ಷಣ KAT, CAT ಮತ್ತೊಂದು ಎಲ್ಲಾ ಸೇರಿ ಅವರನ್ನು ಸಸ್ಪೆಂಡ್ ಮಾಡಿದ್ದು ಕರೆಕ್ಟ್ ಎಂದು ಅದನ್ನು ಎತ್ತಿಹಿಡಿದಿದ್ದಾರೆ. ಕೋರ್ಟ್ ಆರ್ಡರ್ ಇರುವುದರಿಂದ ಅದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ.

Mr. Speaker : You did not mean that "Ugitate" (ಉಗಿಯುತ್ತಾರೆ) ತಾವು 'ಉಗಿಯುತ್ತಾರೆ' ಎಂದು ಹೇಳಿದ್ದೀರೆ. ಆ ಪದ ಬಳಸುವುದು ಬೇಡ.

ಶ್ರೀ ಎಸ್. ಬಂಗಾರಪ್ಪ : ಅದು ಗ್ರಾಮ್ಯಭಾಷೆಯೆಂದು ನಾನು ಹೇಳಿದೆ. ಆಯಿತು ಆ ಪದ ಬೇಡ. ಕಡತದಿಂದ ಆ ಪತ್ರವನ್ನು ತೆಗೆದುಹಾಕುವುದು ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಪದ ರೆಕಾರ್ಡ್‌ನಲ್ಲಿ ಇರಲಿ

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ ....

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಬೈರೇಗೌಡರೇ ಸ್ವಲ್ಪ ತಾಳಿ. ನಾನು ಈಲ್ಡ್ ಆಗಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಜೆ.ಹೆಚ್. ಪಾಟೀಲ್‌ರವರು ಹೇಳಿದ ಮಾತನ್ನು ಹೇಳಿದ್ದಾರೆ. ಅವರ ಪಕ್ಕದಲ್ಲಿ ಕುಳಿತಿರತಕ್ಕ ಮಾನ್ಯ ವೀರಪ್ಪಮೊಯಿಲಿಯವರು ಏನು ಹೇಳಿದ್ದಾರೆಂಬುದನ್ನು ತಾವು ಹೇಳಲಿಲ್ಲ. ಜೆ.ಹೆಚ್. ಪಟೇಲರು ಹೇಳಿರುವ ಮಾತಲ್ಲ. ವೀರಪ್ಪಮೊಯಿಲಿಯವರು ಸಹ ಒಪ್ಪಿದ್ದಾರೆ. ಎರಡೂಮುಕ್ಕಾಲು ಕೋಟಿ ರೂಪಾಯಿ ನಮಗೆ ಬರಬೇಕಾಗಿದೆ ಎನ್ನತಕ್ಕ ಮಾತನ್ನು ಹೇಳಿ ತಾವು ಕಮಿಟ್ ಆಗಿದ್ದೀರಿ. ಅವರು ಇಲ್ಲವೆಂದು ಹೇಳಲಿ. ಅವರು ಅಲ್ಲೆ ಕುಳಿತ್ತಿದ್ದಾರೆ. ಮೊಯಿಲಿಯವರು ಅದನ್ನು ಒಪ್ಪಿದ್ದಾರೆ. ನಾನು ಈ ರೀತಿ ವಿಧಾನಪರಿಷತ್‌ನಲ್ಲಿ ಹೇಳಿದ್ದು ಇಲ್ಲವೆಂದು ಅಥವಾ ಹೌದು ಎಂದು ಆ ಮಾತನ್ನು ಇವತ್ತು ಹೇಳಲಿ. ಜೆ.ಹೆಚ್. ಪಟೇಲರು ಹೇಳಿದ ಮಾತನ್ನು ಮಾತ್ರ ಹೇಳುತ್ತಾರೆ. ಅವರ ಪಕ್ಕದಲ್ಲಿ ಕುಳಿತಿರತಕ್ಕ ಮೊಯಿಲಿಯವರು ಹೇಳಿದ ಮಾತನ್ನು ಏತಕ್ಕೆ ಹೇಳಬಾರದು? ಅದನ್ನು ಅವರೇ ಒಪ್ಪಿದ್ದಾರೆ. ಅದು ರೆಕಾರ್ಡ್‌ನಲ್ಲಿದೆ. 2.47ಕೋಟಿ ರೂಪಾಯಿ ಬರಬೇಕಾಗಿದೆ ಎನ್ನುವ ಮಾತನ್ನು ವೀರಪ್ಪಮೊಯಿಲಿಯವರು ಹೇಳಿದ್ದಾರೆ. ಅದು ಇಲ್ಲವೆಂದು ಹೇಳಲಿ.

SRI D.B. CHANDREGOWDA : Regarding 2.47 crores doubtful claim in NGEF, please get, it examined.

ಶ್ರೀ ಎಸ್. ಬಂಗಾರಪ್ಪ: ಇಲ್ಲಿರತಕ್ಕ ವಿಚಾರ ಏನೆಂದು ತಮಗೆ ಗೊತ್ತೇನು? ಆ ವಿಚಾರವನ್ನು ಚರ್ಚೆಗೆ ನಾವು ಇಲ್ಲಿ ತೆಗೆದುಕೊಂಡಿಲ್ಲ.

ಶ್ರೀ ಸಿ. ಬೈರೇಗೌಡ : ನಾನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಸ್ ಬಂಗಾರಪ್ಪ : ಬೈರೇಗೌಡರೆ, ನೀವು ಪ್ರಸ್ತಾಪ ಮಾಡಿರಬಹುದು. ಇಲ್ಲಿ ಆಗಿರತಕ್ಕ ವಿಚಾರದ ಬಗ್ಗೆ ಅವರು ರೈಸ್ ಮಾಡಿದ್ದರೆ, ಅವರ ಕಾಲದ ಸಚಿವರೇ ಏನು ಉತ್ತರ ಕೊಟ್ಟರು ಎಂಬುದನ್ನು ನಾನು ಹೇಳಿದ್ದೇನೆ. ಇದು ಒಂದನೆಯದು. ಇನ್ನು ಎರಡನೆಯದಾಗಿ, ಒಂದು ಅಲಿಗೇಷನ್ ಆದ ತಕ್ಷಣ ಅದು ಪ್ರೂಫ್ ಅಲ್ಲ. ನಿನ್ನೆ ನೀವು ಅಡ್ವೊಕೇಟ್ ಅಲ್ಲ ಎಂದು ಹೇಳಿದ್ದೀರಿ. ನಮಗೆ ಅದೆ ಬಂದಿರುವುದು ಗೋಳು. ನೀವು ಅಲಿಗೇಷನ್ ಪ್ರೂಫ್ ಎರಡನ್ನೂ ಒಂದೇ ಸಾರಿ ತಕ್ಕಡಿಯಲ್ಲಿ ಹಾಕಿ ತೂಕ ಮಾಡುವುದಕ್ಕೆ ಹೋಗುತ್ತೀರಿ.

ಶ್ರೀ ಸಿ. ಬೈರೇಗೌಡ : ನಿಮಗೆ ಸಾವಿರಾರು ಗೋಳು ಇದೆ ಅದು ನಮಗೆ ಗೊತ್ತಿದೆ. ನಿಮ್ಮ ಗೋಳೇ ರಾಜ್ಯದ ಜನತೆಗೆ ಆಗಿರತಕ್ಕಂಥಾದ್ದು.

ಶ್ರೀ ಎಸ್. ಬಂಗಾರಪ್ಪ : ಅಲಿಗೇಷನ್, ಪ್ರೂಫ್ ಒಂದೂ ಏನೂ ಗೊತ್ತಾಗುವುದಿಲ್ಲ. ವಾಟಾಳ್‌ನಾಗರಾಜ್‌ರವರೇ ನೀವಾದರೂ ಸ್ವಲ್ಪ ಹೇಳಿಕೊಡಿ ಅವರಿಗೆ.

ಶ್ರೀ ವಾಟಾಳ್‌ನಾಗರಾಜ್ : ಬೈರೇಗೌಡರು ಮಾತನಾಡುತ್ತಾರೆ. ಅವರಿಗೆ ಹೇಳಬೇಕಾದದ್ದು ಇಲ್ಲ.

ಶ್ರೀ ಸಿ. ಬೈರೆಗೌಡ: ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಯಿಂದ ಡಿ.ಪಿ.ಎ.ಅರ್‌ಗೆ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೋಗಿದೆ. ಹಾಗಾದರೆ ಅದು ಇಲ್ಲವೆಂದು ಹೇಳಲಿ ನೋಡೋಣ. ಡಿ.ಪಿ.ಎ.ಆರ್.ಗೆ ಹೋಗಿದೆ, ಇವತ್ತು ಡಿಪಿಆರ್‌ಗೆ ಯಾರು ಮುಖ್ಯಸ್ಥರು? ಡಿ.ಪಿ.ಎ.ಆರ್.ಗೆ ಚೀಫ್ ಸೆಕ್ರೆಟರಿ ಮುಖ್ಯಸ್ಥರು. ಅವರ ಮೇಲೆ ಅವರೇ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ವೀರಪ್ಪ ಮೊಯಿಲಿಯವರೇ ನೀವೇ ಗಮನಿಸಬೇಕು. 2.47ಕೋಟಿ ರೂಪಾಯಿ ಡೌಟ್‌ಫುಲ್ ಕ್ಲೈಮ್ಸ್ ಎಂದು ಎನ್‌ಜಿಇಎಫ್‌ನಲ್ಲಿ ಮಾಡುವುದಕ್ಕೆ ಪ್ರಯತ್ನಗಳು ಈಗ ನಡೆಯುತ್ತಿದೆ. ಅದರ ಬಗ್ಗೆ ದಯವಿಟ್ಟು ಎಕ್ಸಾಮಿನ್ ಮಾಡಿ.

ಶ್ರೀ ಎಸ್. ಬಂಗಾರಪ್ಪ : ಅದನ್ನು ಬಿಡಿ. ತಾವು ಸಲಹೆ ಕೊಟ್ಟಿದ್ದೀರಿ ಅದನ್ನು ಇಟ್ಟುಕೊಳ್ಳೋಣ. ಈ ಸಂದರ್ಭದಲ್ಲಿ ಮತ್ತೊಂದು ವಿಚಾರದ ಬಗ್ಗೆ ಹೇಳುತ್ತೇನೆ. ಲೋಕಾಯುಕ್ತದಲ್ಲಿ ಕೆಲಸ ಮಾಡತಕ್ಕ ಇಬ್ಬರು ಪೋಲೀಸ್ ಅಧಿಕಾರಿಗಳು ಒಬ್ಬರು ಆನಂದನ್ ಮತ್ತು ಇನ್ನೊಬ್ಬರು ವೈ.ಎಸ್.ರಾವ್. ಅವರು ಪೋಲೀಸ್ ಅಧಿಕಾರಿಗಳು. ನೀವು ಬೇಕಾದವರನ್ನು ಇಟ್ಟಿದ್ದೀರಿ ಬೇಡವಾದವರನ್ನು ತೆಗೆದಿದ್ದೀರಿ ಎಂದು ಹೇಳಿದ್ದೀರಿ. ನಾನು ಸ್ಪಷ್ಟವಾಗಿ ತಮಗೆ ತಿಳಿಸುತ್ತೇನೆ. ಈ ಇಬ್ಬರು ಅಧಿಕಾರಿಗಳನ್ನು ಚೇಂಜ್ ಮಾಡಬೇಕೆಂದು ಲೋಕಾಯುಕ್ತದಿಂದ ಪತ್ರ ಬಂದ ಮೇಲೆ ಚೇಂಜ್ ಮಾಡಿದ್ದೇವೆ ವಿನಹ, ನಾವಾಗಿಯೇ ಅವರನ್ನು ಚೇಂಜ್ ಮಾಡುವುದಕ್ಕೆ ಹೋಗಿಲ್ಲ. ಅವರು ನಮಗೆ ಬೇರೆ ಆಫೀಸರ್ಸ್ ಬೇಕು ಎಂದು ಪತ್ರ ಬರೆದಿದ್ದಾರೆ. ಈ ರೀತಿ ಲೋಕಾಯುಕ್ತದವರು ಪತ್ರ ಬರೆದಿದ್ದರಿಂದ ನಾವು ಚೇಂಜ್ ಮಾಡಿದ್ದೇವೆಯೇ ವಿನಹ ಬೇರೆ ಯಾವುದೇ ಕಾರಣಕ್ಕಲ್ಲ. Let me place all these things on record. ಇದರ ಬಗ್ಗೆ ಇಷ್ಟು ಸಾಕೆಂದು ಕಾಣುತ್ತದೆ. ಇನ್ನು ಉಳಿದಿರತಕ್ಕದ್ದು the political aspect of the matter. I will touch about it and close my reply.

ಶ್ರೀ ಕೆ.ಎಸ್. ಈಶ್ವರಪ್ಪ : ಅಲೆಗ್ಸಾಂಡರ್‌ರವರ ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸಂತೋಷ, ತಾವು ಕುಳಿತುಕೊಳ್ಳಿ. ಅಲೆಗ್ಸಾಂಡರ್ ಅವರ ಬಗ್ಗೆ ಮಾತನಾಡಿದರೆ ಸಬ್‌ಜ್ಯುಡಿಸ್ ಆಗುತ್ತದೆಂದು ನಾನು ಈಗ ಅಂದುಬಿಡಬಹುದು. ನಿನ್ನೆ ನೀವು ಹೇಳಿರುವುದರಿಂದ ಅದು ರೆಕಾರ್ಡ್‌ಗೆ ಹೋಗಿದೆ. ಅದಕ್ಕೆ ಒಂದು ಸ್ವಲ್ಪ ಉತ್ತರ ಕೊಡುವುದು ಬಹಳ ಒಳ್ಳೆಯದೆಂದು ಭಾವಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, the basic principle of understanding, allegation and the proof ಅದರ ಬಗ್ಗೆ there is no dispute at all ಎಂದು ನಾನು ಭಾವಿಸುತ್ತೇನೆ. ಇವತ್ತು Intelligence Department ಇರಬಹುದು, Police Wing of Lokayukta ಇರಬಹುದು, or regular police ಇರಬಹುದು, P.C. Act ಇರಬಹುದು.

ನಾವು ಯಾವುದೇ ಕಾರ್ಯಕ್ರಮ ತೆಗೆದುಕೊಂಡರೂ ಕೂಡ ಅದು ಪ್ರೂಫ್ ಅಲ್ಲ ಎನ್ನತಕ್ಕಂಥ ವಿಚಾರವನ್ನು ತಾವು ಮರೆಯಬಾರದು. ಅಧಿಕಾರಿ ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡಲಿ, ಯಾವುದೇ ರಾಜ್ಯ ಸರ್ಕಾರದಲ್ಲಿ ಕೆಲಸ ಮಾಡಲಿ ಅಥವಾ ಯಾವುದೇ ಇಲಾಖೆಯಲ್ಲಿ ಕೆಲಸ ಮಾಡಲಿ, There are innumerable High Court and Supreme Court rulings on the matter of giving postings, promotions - You cannot stop it.

ಆಗ ಏನಾಗುತ್ತದೆ ಎಂದರೆ ಸಂಬಳ ಮತ್ತೊಂದು ಅನ್ಯಾಯವಾಗಿ ಕೊಡಬೇಕಾಗುತ್ತದೆ. ಕೆಲಸವಿಲ್ಲದೆ ಆರಾಮವಾಗಿ ಕುಳಿತುಕೊಳ್ಳುತ್ತಾನೆ. ನಾವು ಸಂಬಳ ಕೊಡುತ್ತಾ ಹೋಗಬೇಕಾಗುತ್ತದೆ. ಇದು ಪಬ್ಲಿಕ್ ಮನಿ - ಆ ಕಾಲದಲ್ಲಿ ಸಸ್ಪೆಂಡ್ ಮಾಡತಕ್ಕ ಕ್ರಮವನ್ನು ಸರ್ಕಾರ ಏನು ತೆಗೆದುಕೊಂಡಿದೆ ಅದಕ್ಕೆ ಸ್ಟೇ ತಂದಿದ್ದಾರೆ. ಅದು ಸಿ.ಎ.ಟಿ.ಗೆ ಹೋಗಿರತಕ್ಕದ್ದು, ಇನ್ನು ಕೆಲವು ವಿಚಾರಗಳು ಸುಪ್ರೀಮ್ ಕೋರ್ಟಿಗೆ ಹೋಗಿ ಪೆಂಡಿಂಗ್ ಇದೆ. ಇದನ್ನೆಲ್ಲಾ ಹೇಳಿ ಸಬ್‌ಜ್ಯುಡೀಸ್ ಎಂದು ಇಲ್ಲಿಗೇ ನಿಲ್ಲಿಸಬಹುದಿತ್ತು. ಆದರೂ ತಾವು ಹೇಳುತ್ತಿದ್ದೀರಿ, ಆಗ ಅಡ್ಡ ಬರುವುದಕ್ಕೆ ನನಗೆ ಅಷ್ಟೊಂದು ಇಷ್ಟವಾಗಲಿಲ್ಲ. ಅವರನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹಾಕಿದ್ದೀರಿ, ರೆವಿನ್ಯೂ ವಿಚಾರದ ಬಗ್ಗೆ ರೀಸೋರ್ಸಸ್ ಬಗ್ಗೆ ಎಲ್ಲಾ ಇಲಾಖೆಗಳ ಕಂಟ್ರೋಲ್ ಮಾಡುವ ಪ್ರೆಸ್ಟೀಜಿಯಸ್ ಪೋಸ್ಟ್ ಎಂದು ಹೇಳಿದ್ದೀರಿ. ಸರ್ಕಾರದಲ್ಲಿ ಪ್ರೆಸ್ಟೀಜಿಯಸ್.....

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಎಕ್ಸೈಸ್ ಇಲಾಖೆಯಲ್ಲಿ ಕಮಿಷನ್ ರಾಗಿದ್ದಾಗ ಮಾಡಿದಂಥ ಪಾಪವನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಇಲ್ಲಿಗೆ ತಂದಿದ್ದೀರಿ ಎನ್ನುವ ಮಾತನ್ನು ನಾನು ಇಲ್ಲಿ ಹೇಳಿದ್ದೇನೆ. ಅದು ರಿಕಾರ್ಡ್‌ನಲ್ಲಿದೆ.

ಶ್ರೀ ಎಸ್. ಬಂಗಾರಪ್ಪ : ತಾವು ಇನ್ನೂ ಅನೇಕ ವಿಚಾರಗಳನ್ನು ಹೇಳಿದ್ದೀರಿ. ಇವತ್ತು ಫೈನಾನ್ಸ್, ಇಂಡಸ್ಟ್ರೀಸ್ ಅಗ್ರಿಕಲ್ಚರ್, ಫಾರೆಸ್ಟ್ ಅಥವಾ ಸೋಶಿಯಲ್ ವೆಲ್ ಫೇರ್ ಯಾವುದೇ ಇಲಾಖೆ ಇರಬಹುದು, ಈ ಇಲಾಖೆಗಳಲ್ಲಿ ಯಾವುದು ಪ್ರಿಸ್ಟೀಜಿಯಸ್ ಯಾವುದು ನಾನ್ ಪ್ರಿಸ್ಟೀಜಿಯಸ್ ಎಂದು ಅಲ್ಲ. ಎಲ್ಲ ಇಲಾಖೆಗಳೂ ಅಷ್ಟೆ ಮುಖ್ಯ; ಅಷ್ಟೇ ಪ್ರೆಸ್ಟೀಜಿಯಸ್. ಒಬ್ಬ ಅಧಿಕಾರಿ ಸೀನಿಯರ್ ಮೋಸ್ಟ್ ಅಧಿಕಾರಿಗಳ ಗುಂಪಿನಲ್ಲಿ ಇದ್ದಾಗ ಆದಷ್ಟು ಅವರ ಅನುಭವದ ಹಿನ್ನೆಲೆಯನ್ನು ನೋಡಿ ನಾವು ಪೋಸ್ಟಿಂಗ್ಸ್ ಕೊಡುತ್ತೇವೆ. ಹಿಂದೆ ಎಕ್ಸೈಸ್ ಹೋಮ್ ಡಿಪಾರ್ಟ್‌ಮೆಂಟಿನಲ್ಲಿ ಇತ್ತು. ಇದು ರೆವಿನ್ಯೂ ಬರುವ ಇಲಾಖೆಯಾದ್ದರಿಂದ ಇದನ್ನು ಫೈನಾನ್ಸ್‌ಗೆ ತಂದಿದ್ದೇವೆ. ಅಲೆಕ್ಸಾಂಡರ್‌ರವರು ಆ ಇಲಾಖೆಯನ್ನು ಹ್ಯಾಂಡಲ್ ಮಾಡುತ್ತಿದ್ದಾರೆ. ಅವರು ಈ ಇಲಾಖೆ ವಹಿಸಿಕೊಂಡ ಮೇಲೆ ರೆವಿನ್ಯೂ ಎಷ್ಟು ಹೆಚ್ಚಾಗಿದೆ ಎಂದು ಅಂಕಿ ಅಂಶಗಳ ಮೂಲಕ ಹೇಳಿದ್ದೇನೆ. ಗ್ರಾನೈಟ್ ಇರಬಹುದು, ಎಕ್ಸೈಸ್ ಇರಬಹುದು, ಆದಾಯ ನಮ್ಮ ರಾಜ್ಯಕ್ಕೆ ಅವರ ಕಾಲದಲ್ಲಿ ಜಾಸ್ತಿಯಾಗಿದೆ ಎಂದು ಅಂಕಿ ಅಂಶಗಳ ಸಹಿತ ನಾನು ಹೇಳಿದ್ದೇನೆ. ಇದಕ್ಕಿಂತಲೂ ಇನ್ನೇನು ಹೇಳಬೇಕೋ ಗೊತ್ತಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಭೇಷ್, ಭೇಷ್.

ಶ್ರೀ ಎಸ್. ಬಂಗಾರಪ್ಪ : ಅವರು ಹೈಕ್ಲಾಸ್ ಆಫೀಸರ್ ಎಂದು ನಾನು ಹೇಳುತ್ತಾ ಇಲ್ಲ, ಅವರ ಕಾಲದಲ್ಲಿನ ಅಂಕಿ ಅಂಶಗಳನ್ನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರ ಎಂದರೆ ....

ಶ್ರೀ ಬಿ.ಎಸ್. ಯಡಿಯೂರಪ್ಪ : ಇದಕ್ಕಿಂತಲೂ ಪಾಪದ ಕೆಲಸ ಬೇರೊಂದಿಲ್ಲ. ಸಿಓಡಿ, ಸಿಬಿಐ, ಲೋಕಾಯುಕ್ತ ತನಿಖೆಯಲ್ಲಿರುವವರ ಮೇಲೆ ಈ ರೀತಿಯ ಸರ್ಟಿಫಿಕೇಟನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡುವುದಾದರೆ ಬಹುಶಃ ಈ ರಾಜ್ಯವನ್ನು ಭಗವಂತನೇ ಕಾಪಾಡಬೇಕು.

ಶ್ರೀ ಎಸ್. ಬಂಗಾರಪ್ಪ : ಅಂಕಿ ಅಂಶ ಕೊಟ್ಟು ನಾನು ಮಾತನಾಡಿದ್ದೇನೆ. ಈ ಸಂದರ್ಭದಲ್ಲಿ ಒಂದು ವಿಷಯ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದೊಂದೇ ಕಾರಣದ ಮೇಲೆ ಬಹಳ ದೊಡ್ಡ ಆಫೀಸರ್ ಹೈಕ್ಲಾಸ್ ಆಫೀಸರ್ ಎಂದು ಹೇಳುತ್ತಾ ಇಲ್ಲ. ಅವರ ಕಾಲದಲ್ಲಿ ಅಂಕಿ ಅಂಶದ ಆಧಾರದ ಮೇಲೆ ಹೀಗೆ ನಡೆದಿದೆ ಎಂದು ಮಾತ್ರ ನಾನು ಸದನದ ಗಮನಕ್ಕೆ ತಂದಿದ್ದೇನೆ. ನಾಳೆ ನ್ಯಾಯಾಲಯದಲ್ಲಿ ಅಲೆಕ್ಸಾಂಡರ್ ಬಗ್ಗೆ ಇರಬಹುದು, ಮತ್ತೊಬ್ಬರ ಬಗ್ಗೆ ಇರಬಹುದು, ಮುಂದೆ ತಪ್ಪಿತಸ್ಥರು ಎನ್ನುವ ವಿಚಾರ ಬಂದರೆ, ಕೋರ್ಟ್ ಯಾವ ಶಿಕ್ಷೆಯನ್ನು ವಿಧಿಸುತ್ತದೋ, ಆ ಶಿಕ್ಷೆಯನ್ನು ಕೊಡುವುದಕ್ಕೆ ಸರ್ಕಾರ ಸದಾ ಸಿದ್ಧವಿದೆ, ಶಿಕ್ಷೆ ಇಲ್ಲ ಎಂದರೆ ನಾವೂ ನೀವೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಇಷ್ಟು ವಿಚಾರವನ್ನು ನಾನು ತಿಳಿಸಿ, ಇನ್ನು ಉಳಿದಿರತಕ್ಕದ್ದು ಪೊಲಿಟಿಕಲ್ ವಿಚಾರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಹೋಲ್ಡ್ ಆಗಿ. ನಿಮಗೆ ನೋವಾಗುವ ವಿಚಾರವನ್ನು ಹೇಳುವುದಿಲ್ಲ. ಯಾವ ಅಧಿಕಾರಿಯ ಬಗ್ಗೆ ಆರೋಪ ಇದೆ ಅಂತಹವರಿಗೆ ನೀವು ಈ ರೀತಿ ಸರ್ಟಿಫಿಕೇಟ್ ಕೊಡುವುದರಿಂದ , ಪ್ರಾಮಾಣಿಕ ಅಧಿಕಾರಿಗಳು ನಾವು ಇವತ್ತು ಪ್ರಾಮಾಣಿಕತೆಯಿಂದ ಇರುವುದು ಸರಿಯಲ್ಲ ಎನ್ನುವ ತೀರ್ಮಾನಕ್ಕೆ ಬರಬಹುದು.

1.45 ಪಿ.ಎಂ.

ಮತ್ತೆ ನಾಳೆ ಯಾವ ಅಧಿಕಾರಿ ಇವರ ಬಗ್ಗೆ ತನಿಖೆ ಮಾಡಬೇಕೋ ಆ ಅಧಿಕಾರಿಗೆ ಯಾವ ಧೈರ್ಯ ಬರುತ್ತದೆ? ಮುಖ್ಯ ಮಂತ್ರಿಗಳು ಈ ರೀತಿ ಸರ್ಟಿಫಿಕೇಟ್ ಕೊಟ್ಟ ಮೇಲೆ ಆ ಅಧಿಕಾರಿ ಮೇಲೆ ಮತ್ತೆ ತನಿಖೆ ಮಾಡುವ ಧೈರ್ಯ ಲೋಕಾಯುಕ್ತ ಅಧಿಕಾರಿಗಳು ಮಾಡುತ್ತಾರೆಯೇ ಸ್ವಾಮಿ? ಮುಖ್ಯ ಮಂತ್ರಿಯವರ ಇಂಥ ಸರ್ಟಿಫಿಕೇಟ್ ಕೊಟ್ಟ ಮೇಲೆ ಯಾವ ಅಧಿಕಾರಿ ಅಂತಹ ಭ್ರಷ್ಟ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದೆ ಬರುತ್ತಾನೆ? ಅವರಿರಬಹುದು, ಮತ್ತೊಬ್ಬರಿರಬಹುದು.

ಶ್ರೀ ಆರ್. ದಯಾನಂದ ರಾವ್ : ಮ್ಯಾಟರ್‌ನ್ನು ಪೊಲಿಟಿಕಲೈಸ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಮ್ಮ ಮಂತ್ರಿಮಂಡಲದಲ್ಲಿರತಕ್ಕ ಸೀನಿಯರ್ ಮಿನಿಸ್ಟರ್ಸ್ ಇರಬಹುದು, ಮತ್ತೊಬ್ಬರಿರಬಹುದು, ಡಿಫರೆನ್ಸ್ ಆಫ್ ಒಪೀನಿಯನ್ ಇದೆ, ನಮ್ಮ ಪಕ್ಷದಲ್ಲಿ ಡಿಸಿಡೆಂಟ್ಸ್ ಇದೆ ಎನ್ನತಕ್ಕ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು, ಬಹಳ ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ಆಗ ನಾನು ಎದ್ದು ನಿಂತು ಒಂದು ಮಾತನ್ನು ಹೇಳಿದೆ ಎಂದು ಕಾಣಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಒಪೀನಿಯನ್ ಡಿಫರ್ ಆಗುತ್ತದೆ. ಒಬ್ಬ ವ್ಯಕ್ತಿಯಿಂದ ಒಬ್ಬ ವ್ಯಕ್ತಿಗೆ ಒಂದು ಗುಂಪಿನಿಂದ ಮತ್ತೊಂದು ಗುಂಪಿಗೆ ಡಿಫರ್ ಆಗುವುದು ಸಹಜ. ಒಪೀನಿಯನ್ ಡಿಫರ್ ಆಗುವುದನ್ನು ಡಿಸಿಡೆಂಟ್ಸ್ ಎಂದು ಕೆಲವರು ಕರೆದರೆ, ಕೆಲವು ಒಪೀನಿಯನ್ ಡಿಫರ್ ಆಗುತ್ತದೆಂಬ ವ್ಯಾಖ್ಯಾನವನ್ನು ಒಬ್ಬೊಬ್ಬರು ಮಾಡುತ್ತಾರೆ. ಈ ಅಭಿಪ್ರಾಯ ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಒಂದರಲ್ಲೇ ಅಲ್ಲ, ಈ ಅಭಿಪ್ರಾಯ ಎಲ್ಲ ರಾಜಕೀಯ ಪಕ್ಷಗಳಲ್ಲೂ ಕೂಡ ಹಿಂದೆ ಇತ್ತು,

ಈಗ ಇದೆ, ಮುಂದೆಯೂ ಕೂಡ ಬರಬಹುದು. ಮಾನ್ಯ ವಾಟಾಳರಿಗೆ ಬರುವುದಕ್ಕೆ ಕಾರಣ ಇಲ್ಲ, ಸದ್ಯಕ್ಕಂತೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಹೇಳುವುದಕ್ಕಾಗುವುದಿಲ್ಲ, ಮುಂದಿನ ಚುನಾವಣೆ ಆದರೆ ಯಾರು ಯಾರು ಎಷ್ಟೆಷ್ಟು ಜನ ಬರುತ್ತಾರೋ ಹೇಳುವುದಕ್ಕಾಗುವುದಿಲ್ಲ, ಅದಕ್ಕೋಸ್ಕರ.

(ಆಡಳಿತ ಪಕ್ಷದ ಹಲವಾರು ಸದಸ್ಯರು : ಹೌದು, ಹೌದು ಎಂದು ಹೇಳಿದರು)

ಶ್ರೀ ಎಸ್. ಬಂಗಾರಪ್ಪ : ಹೌದು, ಹೌದು, ನಾನು ಇಲ್ಲವೆಂದು ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಪಕ್ಷದವರೇ ಹೌದು ಹೌದು ಎಂದು ಹೇಳುತ್ತಾ ಇದ್ದಾರೆ. ಆದ್ದರಿಂದ ಒಪ್ಪಿಕೊಳ್ಳಲೇಬೇಕು. ನೀವೆಲ್ಲಾ ಸತ್ಯವಂತರ ಗುಂಪು. ಏನೇನಾಗುತ್ತದೆ ಎಂದು ಇಷ್ಟರಲ್ಲೇ ಗೊತ್ತಾಗುತ್ತದೆ ಇರಿ. ಇವರೆಲ್ಲಾ ಹೌದಪ್ಪಗಳು.

ಶ್ರೀ ಆರ್.ದಯಾನಂದರಾವ್ : ನಾಗರಾಜ್ ಅವರೆ, ಇಷ್ಟು ಹೊತ್ತು ಗೊತ್ತಾಯ್ತಲ್ಲ ಉತ್ತರದಲ್ಲಿ.

ಶ್ರೀ ವಾಟಾಳ್ ನಾಗರಾಜ್ : ಉತ್ತರ ಕೇಳಿದ ಮೇಲೆ ನಾನು ಹೋಗೋಣ ಎಂದು ಎರಡು ನಿಮಿಷ ಎದ್ದೆ ಸ್ವಾಮಿ. ಇನ್ನೇನು ಮೂರು ಗಂಟೆಯಿಂದ ಇದನ್ನೇ ಹೇಳಿದ್ದಾರೆ. ಒಂದಾದರೂ ನಾವು ಹೇಳಿರುವುದನ್ನು ಇದು ಸತ್ಯಾಂಶ, ನಾನು ತಿದ್ದಿಕೊಳ್ಳುತ್ತೇನೆ, ಒಪ್ಪುತ್ತೇನೆ ಎಂದು ಇದುವರೆಗೂ ಹೇಳಲಿಲ್ಲ. ನೀವು ಹೇಳುವುದನ್ನು ನೀವು ಹೇಳಿ, ನಾನು ಹೇಳುವುದನ್ನು ನಾನು ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇಲ್ಲಿ ಕುಳಿತು ಪ್ರಯೋಜನ ಇಲ್ಲ ಹೋಗುತ್ತೇನೆ ಸ್ವಾಮಿ.

(ಶ್ರೀ ವಾಟಾಳ್ ನಾಗರಾಜ್ ಅವರು ಸಭೆಯಿಂದ ನಿರ್ಗಮಿಸಿದರು)

ಅಧ್ಯಕ್ಷರು : ವಾಟಾಳ್ ಅವರೆ, ಒಂದು ನಿಮಿಷ ಕುಳಿತುಕೊಳ್ಳಿ. ವಾಟಾಳ್ ನಾಗರಾಜ್ ಇವರೆಲ್ಲಾ ಹೌದಪ್ಪಗಳು ಎಂದು ಹೇಳಿದರು. ಇಲ್ಲಿ ಇಲ್ಲಪ್ಪಗಳೂ ಇರುತ್ತಾರೆ ತಾನೆ?

ಶ್ರೀ ಎಸ್. ಬಂಗಾರಪ್ಪ : ಇವತ್ತು ಹಿರಿಯ ಸಚಿವರಾದ ಶ್ರೀಮಾನ್ ಕೆ.ಹೆಚ್. ಪಾಟೀಲ್‌ಜಿಯವರ ಪತ್ರಿಕಾ ಹೇಳಿಕೆಯನ್ನು ತಾವು ಉದಾಹರಿಸಿದ್ದೀರಿ. ಪತ್ರಿಕೆಯಲ್ಲಿ ಬಂದಂಥ ಅನೇಕ ವಿಚಾರಗಳನ್ನು ತಾವು ಉದಾಹರಿಸಿದ್ದೀರಿ. ಪತ್ರಿಕೆಯಲ್ಲಿ ಬಂದಿರತಕ್ಕ ಕೆಲವು ವಿಚಾರಗಳು ಸತ್ಯವಾಗಿರುತ್ತವೆ, ಕೆಲವು ವಿಚಾರಗಳು ಸತ್ಯವಾಗಿರುವುದಿಲ್ಲ ಎಂದು ನಾನು ಹೇಳಿದ್ದೇನೆ. ನೀವೂ ಹಿಂದೆ ಹೇಳಿದ್ದೀರಿ. ಏಕೆಂದರೆ ಒಂದು ಸಾರಿ ಪತ್ರಿಕೆಯಲ್ಲಿ ಬಂದಿರುವುದು ಸರಿಯಲ್ಲ ಎಂದಾಗ ಇನ್ನೊಂದು ಸಾರಿ ತಿದ್ದಿ ಒಂದು ಹೇಳಿಕೆ ಕೊಡುವುದು ಬಹಳ ಒಳ್ಳೆಯದು. ಯಾರೇ ಇರಬಹುದು ತತ್ವದ ದೃಷ್ಟಿಯಿಂದ ನಾನು ಹೇಳಿದೆ. ಶ್ರೀ ಕೆ.ಎಚ್. ಪಾಟೀಲ್‌ರವರ ಮಾತನ್ನು ಉದಾಹರಿಸಿ ರೆಸಿಗ್ನೇಷನ್ ಬಂಗಾರಪ್ಪನವರು ಕೇಳಿಲ್ಲ, ಹೈಕಮಾಂಡ್ ಕೇಳಿದರೆ ವಿಚಾರ ಮಾಡುತ್ತೇನೆ ಎಂದು ಹೇಳಿದ್ದಾರೆ ಎಂಬ ವಿಚಾರ ಬಂದಿದೆ. ಸ್ವಾಮಿ, ನಾನು ಹೇಳುತ್ತೇನೆ ಕೆಲವು ವಿಚಾರದಲ್ಲಿ ಒಪೀನಿಯನ್ ಡಿಫರ್ ಆಗಿರಬಹುದು. ಪಾಟೀಲ್‌ಜಿ ಬಗ್ಗೆ ಎಂದು ನಾನು ಹೇಳುತ್ತಿಲ್ಲ, ಯಾರೇ ಇರಬಹುದು. ಹಾಗೆಂದ ತಕ್ಷಣ ಡಿಸಿಡೆಂಟ್ಸ್ ಎನ್ನತಕ್ಕ ಮಾತನ್ನು ನಾವು ಇಟ್ಟುಕೊಂಡಿಲ್ಲ. ಈ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇಲ್ಲ, ಇಲ್ಲ, ನಿಮ್ಮ ಪಕ್ಷದವರೇ ಹೋಗಿ ಮೆಮೊರ್‍ಯಾಂಡಮ್ ಕೊಟ್ಟಿಲ್ಲವೆ ಎಂದು ಇಲ್ಲಿ ಪ್ರಸ್ತಾಪವಾಗಿದೆ. ನಾನು ಆ ಸದನದಲ್ಲೂ ಕೂಡ ಮೊನ್ನೆ ಹೇಳುವಾಗ ನಾನು ಪ್ರಸ್ತಾಪ ಮಾಡಿದೆ. ಇಲ್ಲಿಯವರೆಗೆ ಯಾವುದೇ ಮೆಮೋರ್‍ಯಾಂಡಮ್ ಮತ್ತೊಂದು ನನಗೆ ಗೊತ್ತಿಲ್ಲ, ನನಗೆ ಇಲ್ಲಿಯವರೆಗೆ ಎಂಥದ್ದೂ ಬಂದಿಲ್ಲ, ನನಗೆ ಗೊತ್ತಿಲ್ಲ, ಇದು ಒಂದು. ಆದರೂ ಕೂಡ ಕೆಲವು ವಿಚಾರಗಳನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಇಲ್ಲವೆಂದು ಹೇಳುವುದಿಲ್ಲ, ಅವನ್ನು ನಾನು ಅಲ್ಲಗಳೆದಿದ್ದೇನೆ. ಈಗಲೂ

ಕೂಡ ಅಲ್ಲಗಳೆಯುತ್ತೇನೆ. ಏಕೆಂದರೆ, ಏನು ವಿಚಾರಗಳು ಪತ್ರಿಕೆಯಲ್ಲಿ ಬಂದಿವೆ ಅದೇ ತಾವು ಭಾಷಣದಲ್ಲಿ ಹೇಳಿರತಕ್ಕ ವಿಚಾರಗಳು. ಆ ವಿಚಾರ ಬಿಟ್ಟರೆ ಬೇರೆ ಹೊಸ ವಿಚಾರವನ್ನು ನಾನು ಕಂಡಿಲ್ಲ. ಯಾವುದಾದರೂ ಇದ್ದರೆ ಸಾಂದರ್ಭಿಕವಾಗಿ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂತ್ರಿಗಳು ಇಲ್ಲೇ ಇದ್ದಾರಲ್ಲ ಉತ್ತರ ಹೇಳಿಸಿ. ನಾನು ಹೇಳಿಲ್ಲ ಎಂದು ಹೇಳಲಿ.

ಶ್ರೀ ಎಸ್. ಬಂಗಾರಪ್ಪ : ಏನು ಮಾಡಬೇಕು ಎನ್ನುವುದು ನನಗೆ ಗೊತ್ತಿದೆ.

ಶ್ರೀ ಬಿ.ಎಸ್ ಯಡಿಯೂರಪ್ಪ : ಇದು ನಿಮ್ಮ ಮನೆಯ ವ್ಯವಹಾರ ಅಲ್ಲ. ಮಂತ್ರಿಗಳು ಇಲ್ಲಿ ಕುಳಿತಿರುವಾಗ ಸತ್ಯಾಸತ್ಯತೆಗಳ ಬಗ್ಗೆ ಅವರು ಜವಾಬ್ದಾರಿ ಹೊತ್ತುಕೊಂಡು ಹೇಳಬೇಕಾಗುತ್ತದೆ. ಇದು ಮನೆಯ ವ್ಯವಹಾರ ಅಲ್ಲ, ರಾಜ್ಯದ ಜನತೆಗೆ ಸಂಬಂಧಪಟ್ಟಿದ್ದುದು. ಜವಾಬ್ದಾರಿಯುತರಾದಂಥ ಒಬ್ಬ ಮಂತ್ರಿ ಹೇಳಿದ್ದನ್ನು, ಈ ರೀತಿ ಪತ್ರಿಕೆಯಲ್ಲಿ ಬಂದಿರುವುದನ್ನು ಇಡೀ ನಾಡಿನ ಜನ ನೋಡಿದ್ದಾರೆ. ಅದು ಅಸತ್ಯ ಎನ್ನುವುದಾದರೆ ಆ ಮಾತನ್ನು ಹೇಳಿಲ್ಲ ಎಂದು ಶ್ರೀ ಕೆ.ಎಚ್. ಪಾಟೀಲರು ಹೇಳಲಿ. ಅಲ್ಲಿ ಹೇಳಲಿಲ್ಲವೆಂದರೆ, ಅವರು ಹೇಳಿದ್ದಾರೆ ಸತ್ಯ ಎಂದು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ : ಈಗ ಮಧ್ಯ ಪ್ರದೇಶದಲ್ಲಿ ನಿಮ್ಮ ಮುಖ್ಯ ಮಂತ್ರಿ, ಶ್ರೀ ಪಟ್ವಾ ಇದ್ದಾರಲ್ಲ, ಅವರ ಮೇಲೂ ಕೂಡ ಭಿನ್ನಮತೀಯರು ಆರೋಪ ಹೊರಿಸಿ, ಅವರನ್ನು ತೆಗೆಯಬೇಕೆಂದು ಡೆಲ್ಲಿಗೆಲ್ಲಾ ಹೋಗಿ ಬಂದಿದ್ದಾರೆ. ಇದರ ಬಗ್ಗೆ ಪೇಪರ್ ತುಂಬಾ ಬಂದಿದೆ. ಅದರ ಬಗ್ಗೆ ನಿಮ್ಮವರು ಅಸೆಂಬ್ಲಿಯಲ್ಲಿ ಹೇಳಿಕೆ ಕೊಡಿಸಿದ್ದಾರೆಯೇ? ಅದಕ್ಕಾಗಿ ನಾನು ಹೇಳುವುದು, ಹಾಗೆ ಹೋಗಬೇಡಿ, ಅದು ಆ ರೀತಿ ಅಲ್ಲ.

(ಗೊಂದಲ)

ಶ್ರೀ ಎಸ್. ಯಡಿಯೂರಪ್ಪ : ನಿಮ್ಮ ಮಂತ್ರಿಯನ್ನು ಪಕ್ಕದಲ್ಲಿ ಕೂರಿಸಿಕೊಂಡು ಸತ್ಯಕ್ಕೆ ದೂರವೆಂದು ಹೇಳುವುದು ಸರಿಯಲ್ಲ, ಅವರ ಬಾಯಿಯಿಂದ ಹೇಳಿಸಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಕೆಲವೊಮ್ಮೆ ಅಭಿಪ್ರಾಯ ವಿಭಿನ್ನವಾಗಿ ಬರತಕ್ಕಂಥ ಸಂದರ್ಭಗಳು ಅಲ್ಲಿ ಇರುತ್ತವೆ ಎಂಬ ಮಾತನ್ನು ನಾವು ಗಮನಿಸಬೇಕಾಗುತ್ತದೆ. ಅವರು ಯಾವ ಕಾಂಟೆಸ್ಟ್‌ನಲ್ಲಿ ಹೇಳಿದರೋ ನನಗೆ ಗೊತ್ತಿಲ್ಲ. ಒಂದು ವೇಳೆ ಹೇಳಿದ್ದು ನಿಜವಾದರೆ, ಯಾವ ಕಾಂಟೆಸ್ಟ್‌ನಲ್ಲಿ ಹೇಳಿದರು, ಏನು ಹೇಳಿದರು ಎಂಬುದನ್ನು ನಾವು ವಿಚಾರ ಮಾಡಿಕೊಳ್ಳುತ್ತೇವೆ. ಅದು ನಮಗೆ ಬಿಟ್ಟಿರತಕ್ಕಂಥ ವಿಚಾರ, ಅದು ನಮ್ಮ ಮನೆತನದ ವಿಚಾರ. ಅದು ನಮ್ಮ ಫ್ಯಾಮಿಲಿ ವಿಚಾರ ನಾವು ಮಾತನಾಡಿಕೊಳ್ಳುತ್ತೇವೆ, ಬಿಡುತ್ತೇವೆ. ಅದು ನಮಗೆ ಬಿಟ್ಟಿರತಕ್ಕಂಥ ವಿಚಾರ.

(ಗೊಂದಲ)

SRI S. BANGARAPPA : Even now, I stand by my statement made at Mysore in my Press Conference.

ನಮ್ಮಲ್ಲಿ ಡಿಸಿಡೆಂಟ್ಸ್ ಇಲ್ಲ ಎಂದು ನಾನು ಹೇಳಿದ್ದೇನೆ. ಈ ಮಾತನ್ನು ಮುಖ್ಯ ಮಂತ್ರಿ ಬಂಗಾರಪ್ಪ ಹೇಳುವುದು ಎಂದು ತಿಳಿದುಕೊಳ್ಳುವುದು ಬೇಡ. ನಿಮ್ಮ ಸರ್ಕಾರ ಇದ್ದಾಗ ಶ್ರೀ ರಾಮಕೃಷ್ಣ ಹೆಗಡೆಯವರು ಅವರು ಹೇಳಿದ ಸ್ಟೇಟ್‌ಮೆಂಟ್‌ಗಳು ನನ್ನ ಹತ್ತಿರ ಇವೆ. ಈಗ ನಾನು ಒಂದೊಂದನ್ನೆ ಬಿಚ್ಚುತ್ತಿದ್ದೇನೆ.ಸ್ವಲ್ಪ ಸಮಾಧಾನ ತಂದುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅದನ್ನು ರೆಫರ್ ಮಾಡದೇ ನಿಮಗೆ ಹೇಳುವುದಕ್ಕೆ ಆಗುವುದಿಲ್ಲವೇ?

(ಗೊಂದಲ)

SRI R. DAYANANDA RAO : This is a democratic country, Mr, Gowda!

Mr. SPEAKER : You have made a very profound statement.

ಶ್ರೀ ಎಸ್.ಬಂಗಾರಪ್ಪ : ಇಲ್ಲಿ 9.3.88 ರಲ್ಲಿ ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಒಳ್ಳೆಯ ಟೈಮ್ ಅದು .....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸಭಾನಾಯಕರಿಗೆ ನನ್ನ ಸಲಹೆ ಏನೆಂದರೆ.....

ಅಧ್ಯಕ್ಷರು : ಇಲ್ಲಿಗೆ ಮುಗಿಸಿಬಿಡಿ ಎಂತಲೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮುಗಿಸಿ ಬಿಡುವುದು ಒಳ್ಳೆಯದು. ಏಕೆಂದರೆ , ಹೆಗಡೆಯವರ ಸ್ಟೇಟ್‌ಮೆಂಟ್‌ನ್ನು ನೀವು ರೆಫರ್ ಮಾಡುವುದಕ್ಕೆ ಹೋಗಲೇಬೇಡಿ. ಏಕೆಂದರೆ, ಅವರೂ ನಿಮ್ಮ ಹಾಗೆಯೇ ಹೇಳುತ್ತಿದ್ದರು. ಭಿನ್ನಮತೀಯರು ಇಲ್ಲ ಇಲ್ಲ ಎಂದು ಹೇಳಿ ಕೊನೆಗೆ ಮುಳುಗಿ ಹೋದರು. ನಿಮಗೂ ಹಾಗೆ ಆಗುವುದು ಬೇಡ

(ನಗು)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಾನು 1987ನೇ ಇಸವಿಯಿಂದ ತೆಗೆದುಕೊಳ್ಳುವುದು ಬಹಳ ಒಳ್ಳೆಯದು. ಅದರಲ್ಲಿ ಫೋಟೊ ಗಿಟೋ ಎಲ್ಲಾ ಇದೆ. ಫೋಟೋ ನೋಡಿದ್ದೇನೆ, ಪತ್ರಿಕೆಯಲ್ಲಿ ಬಂದಿದೆಯೆಂದು ಹೇಳಿದ್ದೇನೆ. ಇದರಲ್ಲಿ - No crisis in state Janatha - Shekar. ಎಂದು ಇದೆ. ಮಾಜಿ ಪ್ರಧಾನ ಮಂತ್ರಿಗಳು, ಆಗಿನ ಜನತಾ ಪಕ್ಷದ ಅಧ್ಯಕ್ಷರು.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ನಮ್ಮ ಪಾರ್ಟಿ ಬಗ್ಗೆ ನೋ ಕಾನ್‌ಫಿಡೆನ್ಸ್?

ಶ್ರೀ ಎಸ್. ಬಂಗಾರಪ್ಪ : ನಮ್ಮ ಪಕ್ಷದ ಬಗ್ಗೆ ನೀವು ಮಾತನಾಡಿದ್ದೀರಲ್ಲ? I quote : " Janatha Party President Mr. Chandrashekar claimed here on Thursday that there was no revolt or crisis in his Party in Karnataka, for him to diffuse. Mr. Shekar however, confirmed that he had met Mr. Vishwanatha Reddy Mudnal, a Senior Member of the Party from Gulbarga District and Ports and Fisheries Minister Mr. Raghupathy who was reported to have been unhappy with the prtfolio given to him. Mr. Shekar disclosed that Mr. Mudnal had admitted to him that he had committed an act of indiscipline in not informing his leader before carrying his resignation letter to the Speaker and was prepared to take any punishment for it, but he had told him that only punishment expected from him was the withdrawal of his resignation. Both the Reporters and the MLA s will be disappointed since there is no crisis whatever , he joked. The Chief Minister himself is capable of diffusing whatever there is , of which our intervention is not warranted."

This is the statement of Mr. Chandrashekar

Now, I quote from Deccan Herald, Dated 1-5-1987.

"The Janatha Party President Mr. Chandrashekar today .... "

(Interruptions)

SRI S.BANGARAPPA : I am coming to the Memorandum.

"The Janatha Party President Mr. Chandrashekar today, described the reports that there was crisis in Karnataka with Party Legislators trying to submit a Memorandum expressing dissatisfaction over the manner in which Hegde Ministry was expanded and recomposed..."

I further quote :

"Janatha crisis blows over - The gathering crisis in State Janatha Party over the Ministry expansion issue was dramatically diffused on Friday, when a group of dissatisfied MLA s called on Mr. Chandrashekar, national President of the Party without a Memorandum and were advised by him to wait till the Chief Minister returns from the Foreign Tour to sort out at the meeting of the Janatha Legislature Party.."

I further quote :

"MLAs to route resignation letters through Hegde. Mr. Vishwanatha Reddy Mudnal, the Janatha M.L.A. from Yadgir who had sent in his resignation of Membership, to the Speaker ....."

(Interruptions)

SRI R.V. Deshpande : It is unnecessary. What is the relevance?

(Interruptions)

ಶ್ರೀ ಆರ್.ವಿ. ದೇಶಪಾಂಡೆ : ಇದೆಲ್ಲಾ ಅನಾವಶ್ಯಕ .....

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಡಿಸ್‌ಪ್ಯೂಟನ್ನೇ ಮಾಡಿಲ್ಲ.....

(ಗೊಂದಲ)

ಶ್ರೀ ಎಸ್.ಬಂಗಾರಪ್ಪ : ಲಾಭ ಏನು ಎಂದು ಕೇಳಿದ್ದಾರೆ, ಲಾಭ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಚಂದ್ರೇಗೌಡರು crisis in the ministry-ಎನ್ನತಕ್ಕ ಮಾತನ್ನು ಹೇಳಿದರಲ್ಲ, ಅವರಿಗೆ ಏನು ಲಾಭ ಬಂತು ? ಅದೇ ಲಾಭ ನನಗೂ ಬರುತ್ತದೆ.

(Interruptions)

SRI D.B.Chandregowda : You are running the Government. The destiny of the entire State is involved . You are in charge of the people of Karnataka. You are running the Government. We are not running the Government.

(Interruptions)

ಶ್ರೀ ಎಸ್. ಬಂಗಾರಪ್ಪ : "ಕಳೆದ ಹಲವಾರು ವಾರಗಳಿಂದಲೂ ವ್ಯಾಪಕ ಪ್ರಚಾರ ಪಡೆದಿರುವ ಭಿನ್ನಮತೀಯ ಜನತಾ ಶಾಸಕರ ಚಟುವಟಿಕೆಗಳನ್ನು ನೇರವಾಗಿ ಎದುರಿಸಲು, ಜನತಾ ಪಕ್ಷದ ಒಂದು ಗುಂಪು ಕೆಲವು ಮಂತ್ರಿಗಳ ನೇತೃತ್ವದಲ್ಲಿ ಸಜ್ಜಾಗಿ ನಿಂತಿರುವುದು ಈಗ ಸ್ಪಷ್ಟವಾಗಿದೆ." ಇದು 13-7-87ರ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಕೆಳಗಡೆ ಗೋಯಂಕಾ ಎಂದು ಇವೆಯಾ ನೋಡಿ....

(ಗೊಂದಲ)

ಶ್ರೀ ಎಸ್.ಬಂಗಾರಪ್ಪ : ನಾನು ಏತಕ್ಕೆ ಹೇಳಿದೆ ಎಂದರೆ, ಇಂತಹ ಚಟುವಟಿಕೆಗಳು 1987ರಲ್ಲಿ ದೇಶದ ತುಂಬಾ ಪೇಪರ್ ತುಂಬಾ ಬಂದಿವೆ, 1988ರಲ್ಲೂ ಬಂದಿವೆ. ಒಂದು ರಾಶಿ ರಾಶಿಯಾಗಿದೆ. ಈಗ ನೀವು ನಮಗೆ ಬುದ್ಧಿ ಹೇಳುವುದಕ್ಕೆ ಬರುತ್ತೀರಿ. ಕ್ರೈಸಿಸ್ ಇಲ್ಲಿ ಸಂಪೂರ್ಣವಾಗಿ ಹಾಳಾಗಿ ಹೋಗಿದೆ ಎನ್ನತಕ್ಕಂಥ ಮಾತನ್ನು ನೀವು ಆಡಿದಿರಲ್ಲ, ಇದನ್ನು ಹೇಳುವುದಕ್ಕೆ ನಿಮಗೆ ಯಾವ ನೈತಿಕ ಹಕ್ಕಿದೆ, ನೀವೆಂಥ ಸರ್ಕಾರ ಇಟ್ಟುಕೊಂಡಿದ್ದೀರಿ, ಈ ಮಾತುಗಳನ್ನು ಆಡುವುದಕ್ಕೆ .....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನೈತಿಕ ಹಕ್ಕನ್ನು ಪ್ರಶ್ನೆ ಮಾಡಿದರೆ ನಮ್ಮ ಹತ್ತಿರವೂ ಬೇಕಾದಷ್ಟು ಇದೆ. ನನ್ನ ನೈತಿಕ ಹಕ್ಕನ್ನು ನೀವು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿಲ್ಲ ಬಿಡಿ.

ಶ್ರೀ ಆರ್. ದಯಾನಂದರಾವ್ : ಹೇಳುವುದು ಏನಿದೆ, ಎಲ್ಲವನ್ನು ಹೇಳಿಯಾಗಿದೆ, ಉಳಿದಿರುವುದು ಏನಿದೆ.....

ಶ್ರೀ ಎಸ್. ಬಂಗಾರಪ್ಪ : ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಅತ್ಯಂತ ಹಿರಿಯ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು, ಆ ಕಾಲದಲ್ಲಿ ಏನು ಹೇಳಿದರು ಎನ್ನುವುದನ್ನು ಮಾತ್ರ ಓದುತ್ತೇನೆ.

ಶ್ರೀಮಾನ್ ನಿಜಲಿಂಗಪ್ಪನವರು ಬಹಳ ಹಿರಿಯರು, ಅವರು ಒಂದು ಮಾತು ಏನು ಹೇಳಿದರು ಎಂಬ ಮಾತು ಹೇಳಿ, 87ನೇ ಇಸವಿ ಚರಿತ್ರೆ ಮುಗಿಸುತ್ತೇನೆ. ಆಮೇಲೆ 88ಕ್ಕೆ ಬರುತ್ತೇನೆ.

11-10-1987 ಸಚಿವರು ಶಾಸಕರ ಮನೆಗಳ ಮೇಲೆ ದಾಳಿ - ಎಸ್.ಎನ್. ಸಲಹೆ ದಾವಣಗೆರೆ ಆಗಸ್ಟ್ 10 (ಕನ್ನಡ ಪ್ರಭ) : ಲಂಚಕೋರ ಮಂತ್ರಿಗಳು, ಶಾಸಕರು ಸಂಸತ್ ಸದಸ್ಯರು, ಅಧಿಕಾರಿಗಳ ಮನೆಗಳ ಮೇಲೆ ದಾಳಿ ಮಾಡಿದರೆ 80 ಸಹಸ್ರ ಕೋಟಿ ರೂಪಾಯಿಗಳನ್ನು ಹೊರಗೆ ತೆಗೆಯಬಹುದೆಂದು ರಾಷ್ಟ್ರೀಯ ನಾಯಕ ನಿಜಲಿಂಗಪ್ಪನವರು ನುಡಿದಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಭವಿಷ್ಯ ನುಡಿದಿರಬಹುದು.

ಶ್ರೀ ಎಸ್. ಬಂಗಾರಪ್ಪ : ಲಂಚಕೋರತನ ಕೇಂದ್ರ ಸರಕಾರದಲ್ಲಿ ಮಾತ್ರವಲ್ಲ, ನಮ್ಮ ಕರ್ನಾಟಕ ಸರಕಾರವೂ ಇದಕ್ಕೆ ಹೊರತಾಗಿಲ್ಲ, ಜವಾನನಿಂದ ಹಿಡಿದು ಮಂತ್ರಿಯವರೆಗೆ ತಾಂಡವವಾಡುತ್ತಿದೆ.

ನಮ್ಮ ಪಕ್ಷದ ಲಂಚಕೋರತನ, ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಹಕ್ಕು ನಿಮ್ಮ ಪಕ್ಷಕ್ಕೆ ಎಲ್ಲಿದೆ ಎಂದು ನಾನು ಕೇಳುತ್ತೇನೆ. ನಿಮ್ಮ ಸರಕಾರ ಇದ್ದಾಗ ಏನೇನು ನಡೆಯುತ್ತಿತ್ತು ಎಂದು ಕೇಳುತ್ತೇನೆ.

(ಗೊಂದಲ)

ಶ್ರೀ ಎಸ್. ನಿಜಲಿಂಗಪ್ಪನವರ ಇನ್ನೊಂದು ಸೆಂಟೆನ್ಸ್ ಹೇಳಿಬಿಡುತ್ತೇನೆ, ಪ್ಲೀಸ್. "ನಾನೇ ಎಷ್ಟೋ ಜನ ಬೀದಿಯಲ್ಲಿ ಬಿದ್ದವರನ್ನು ರಾಜಕೀಯವಾಗಿ ಮುಂದೆ ತಂದೆ, ಆದರೆ ಅವರುಗಳು ಇಂದು ಆಗರ್ಭ ಶ್ರೀಮಂತರಾಗಿ ಮೆರೆಯುತ್ತಿದ್ದಾರೆ ಎಂದರು."

ಸಾಕೇ ಸ್ವಾಮಿ,

ಶ್ರೀ ಎಚ್. ಏಕಾಂತಯ್ಯ : ಹೇಗೆ ಸಾಕು ಇನ್ನೂ ಬೇಕು.

ಶ್ರೀ ಎಸ್. ಬಂಗಾರಪ್ಪ : ಬೇಕು ಎಂದರೆ ಮತ್ತೆ ಕೊಡುತ್ತೇನೆ. ಕುಳಿತುಕೊಳ್ಳಿ.

ಬೇಕೆಂದರೆ ಮತ್ತೆ ಕೊಡುವುದಕ್ಕೆ ನನ್ನ ಹತ್ತಿರ ಬೇಕಾದಷ್ಟು ಸರಕು ಇದೆ, ಕೊಡುತ್ತೇನೆ, ಕುಳಿತುಕೊಳ್ಳಿ.

ಆಮೇಲೆ 8-10-1987ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಎಡಿಟೋರಿಯಮ್‌ನಲ್ಲಿ ಈ ರೀತಿ ಬರೆದಿದ್ದಾರೆ.

"Unanimous Election" of Mr. M.P.Prakash as President of the State Janatha Party.

ಯುನಾನಿಮಸ್ ಎಂಬ ಪದವನ್ನು ಇನ್‌ವರ್ಟೆಡ್ ಕಾಮಾಸ್‌ನಲ್ಲಿ ಹಾಕಿದ್ದಾರೆ. ಅದನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಬೇಕಾದಷ್ಟು ವಿಚಾರ ಪ್ರಸ್ತಾಪ ಮಾಡಿ ನೋ ಕಾನ್‌ಫಿಡೆನ್ಸ್ ಮೋಷನ್‌ಗೆ ರಿಪ್ಲೈ ಕೊಡುವಾಗ ನಮ್ಮನ್ನು, ನಾವು ಹೇಳಿರತಕ್ಕಂಥಾದ್ದನ್ನು ಈ ಕಡೆಯ ಸದಸ್ಯರುಗಳು ಮಾತನಾಡಿದ್ದಕ್ಕೆ ಉತ್ತರ ಕೊಟ್ಟು ನಾನು ಗೆದ್ದಿದ್ದೇನೆ ಎಂಬ ಭಾವನೆಯಿಂದ ಈ ಸಭೆಯಿಂದ ಹೊರಗೆ ಹೋಗಬೇಕೆಂದು ಇದ್ದಾರೆ ಎಂದು ಕಾಣುತ್ತದೆ. ಇದರಿಂದ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಎಸ್.ಬಂಗಾರಪ್ಪ : ಆ ರೀತಿ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ತಾವೇನು ರೆಫರ್ ಮಾಡುತ್ತಿದ್ದೀರಲ್ಲ, ಎಲ್ಲಾ ಕಾಲದಲ್ಲೂ, ಎಲ್ಲಾ ಪಕ್ಷಗಳಲ್ಲೂ ಡಿಸಿಡೆಂಟ್ಸ್ ಎಂಬುದು ಇರತಕ್ಕದ್ದೇ.

ಶ್ರೀ ಆರ್. ದಯಾನಂದರಾವ್ : ಅದನ್ನು ಮುಂಚೆಯೇ ಒಪ್ಪಿಕೊಳ್ಳಬೇಕಾಗಿತ್ತು. ಇಲ್ಲಿ ಏತಕ್ಕೆ ರೆಫರ್ ಮಾಡಿದಿರಿ?

ಶ್ರೀ ಎಸ್. ಬಂಗಾರಪ್ಪ : ಸಿಂಧ್ಯರವರೆ, ನೀವು ಒಳ್ಳೆಯ ಮಾತು ಹೇಳಿದಿರಿ, ಸಂತೋಷ, ಈ ಮಾತು ಮಾನ್ಯ ವಿರೋಧ ಪಕ್ಷದ ನಾಯಕರು ನೆನಪಿನಲ್ಲಿಟ್ಟುಕೊಂಡು ಭಾಷಣ ಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಅದನ್ನೆಲ್ಲಾ ತಿಳಿದುಕೊಂಡೇ ಮಾತನಾಡಿದ್ದು. ನನಗೆ ಸಮಯ ಸಿಗಲಿಲ್ಲ, ಇಲ್ಲದೇ ಇದ್ದರೆ ನಾನು ಮಾತನಾಡುತ್ತಿದ್ದೆ. ಇದು ಎಲ್ಲಾ ಕಾಲದಲ್ಲೂ ಇದು ಇರತಕ್ಕದ್ದು, ನಮ್ಮ ಕಾಲದಲ್ಲೂ ಇತ್ತು. ಈಗ ತಾವು ಮೂರು ಘಂಟೆ ಇಪ್ಪತ್ತು ನಿಮಿಷಗಳಿಂದಲೂ ಸಹ. ನೀವು ಅದನ್ನು ಮಾಡಿದಿರಿ, ಅದಕ್ಕೋಸ್ಕರ ನಾನು ಇದನ್ನು ಮಾಡಿದೆ, ನೀವು ಅದನ್ನು ಮಾಡಿದ್ದೀರಿ. ನಾನು ಇದನ್ನು ಮಾಡುತ್ತೇನೆ ಎಂದು ಉತ್ತರ ಕೊಡುತ್ತಿದ್ದೀರೆಯೇ ಹೊರತು ,.....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಜಲಿಂಗಪ್ಪನವರು ಹೇಳಿದ್ದಾರೆ ಎಂದು ಹೇಳಿದ್ದೀರಿ. ನಿಜಲಿಂಗಪ್ಪನವರು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದಾರೆ? ಕೇವಲ ಕರ್ನಾಟಕ ಸರಕಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಜಲಿಂಗಪ್ಪನವರು ಹೇಳಿದುದಾದರೆ, ಕರುಣಾಕರನ್ ರವರೂ ಸ್ಟೇಟ್ ಮೆಂಟ್ ಕೊಟ್ಟಿದ್ದಾರೆ. ಕರುಣಾಕರನ್ ರವರು ಬೆಂಗಳೂರನ್ನೇ ಏತಕ್ಕೆ ಆಪ್ಟ್ ಮಾಡಿಕೊಂಡರು ಎಂದು ಕೇಳಬೇಕಾಗುತ್ತದೆ. ಆದುದರಿಂದ ಅದನ್ನೆಲ್ಲಾ ನೀವು ರೆಫರ್ ಮಾಡುವುದಕ್ಕೆ ಹೋಗಬೇಡಿ. ನಾವು ಜಗಳ ಆಡಿ 22 ಜನಕ್ಕೆ ಬಂದಿದ್ದೇವೆ. ನೀವು 11 ಜನಕ್ಕೆ ಆಗಬೇಡಿ. ಇದನ್ನು ಏತಕ್ಕೆ ರೆಫರ್ ಮಾಡಬೇಕಾಗಿತ್ತು, ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದುದನ್ನು ತಾವು ಗಮನಿಸಲಿಲ್ಲ. ನಾವು ನೀವು ಜಗಳ ಆಡುತ್ತೇವೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಲ್ಪ ತಾಳಿರಿ, ಏತಕ್ಕೆ ಕಿರುಚಿಕೊಳ್ಳುತ್ತೀರಿ. ನಾನು

ಮಾತನಾಡುತ್ತಿದ್ದೇನೆ., ಮಧ್ಯದಲ್ಲಿ ಏನು? ಅವರೇ ಈಲ್ಡ್ ಆಗಿದ್ದಾರೆ, ನೀವೇನು ಬಹಳ ದೊಡ್ಡದಾಗಿ ಏಳುತ್ತೀರಿ, ನೀವೇನು ದೊಡ್ಡ ಪಾರ್ಲಿಮೆಂಟೇರಿಯನ್. I want to make not a point.

(ಗೊಂದಲ)

ಏನು ಮಾಡಿರುವುದು, ಕುಳಿತುಕೊಳ್ಳಿರಿ, ಸಾಕು ಕಂಡಿದ್ದೇನೆ. ಈಗ ಪ್ರಶ್ನೆ ಏನಿದೆ ಎಂದರೆ, ಈಗ ಡಿಸಿಡೆಂಟ್ಸ್ ಇಲ್ಲ ಎಂದು ಇರರು ಹೇಳುತ್ತಿದ್ದಾರೆ. ಪ್ರೆಸ್‌ನಲ್ಲಿ ಡಿಸಿಡೆಂಟ್ಸ್ ಒಂದು ಮೆಮೊರಾಂಡಂ ಕೊಟ್ಟಿದ್ದಾರೆ ಎಂದು ಇದೆ. ಆ ಮೆಮೆರಾಂಡಂಗೆ ಯಾರೂ ಸಹ ಸಹಿ ಮಾಡಿಲ್ಲ ಎಂದು ಹೇಳಿದರು. ಸಹಿ ಯಾರು ಹಾಕಿದ್ದಾರೆ ಎಂದು ಕೇಳಿದರು, ಯಾರೂ ಸಹಿ ಮಾಡಿಲ್ಲ ಹಾಗೆಂದು ಹೇಳಿದರೆ ಡಿಸಿಡೆಂಟ್ಸ್ ಇಲ್ಲ ಎಂದು ನಿಮ್ಮ ಕಾನ್‌ಷಿಯಸ್ ಒಪ್ಪುತ್ತದೆಯೇ? ಇದು ಇರತಕ್ಕದ್ದು ನಿಜ, ಮೆಮೊರಾಂಡಂ ಕೊಟ್ಟಿರತಕ್ಕದ್ದು ನಿಜ ಎಂದು ಎಲ್ಲರಿಗೂ ಸಹಿತ ಗೊತ್ತಿದೆ.

ಆದರೆ ಮೆಮೋರಾಂಡಂ ಕೊಟ್ಟಿತಕ್ಕಂಥಾದ್ದು ಸತ್ಯ ಎಂದು ನಾನು ಹೇಳುವುದಕ್ಕೆ ತಯಾರು ಇಲ್ಲ. ಈ ಮೆಮೋರಾಂಡಂನಲ್ಲಿರತಕ್ಕಂಥವರೆಲ್ಲರೂ ಹರಿಶ್ಚಂದ್ರನ ಮೊಮ್ಮಕ್ಕಳೇನೂ ಅಲ್ಲ. ಆ ಮೆಮೋರಾಂಡಂನಲ್ಲಿ ಏನೇನಿದೆ ಎನ್ನುವುದೂ ಗೊತ್ತಿದೆ. ಆ ಮೆಮೋರಾಂಡಂನಲ್ಲಿ ನಿಮ್ಮ ಉತ್ತರದ ಹಾಗೆಯೇ ಇದೆ. ಹೆಗಡೆಯವರ ಕಾಲದಲ್ಲಿ ಹೀಗೆ ಆಯಿತು, ಹೆಗಡೆಯವರ ಕಾಲದಲ್ಲಿ ಹಾಗೆ ಆಯಿತು ಎಂದು ಇದೆಯೇ ಹೊರತು ಬಾಕಿ ಏನೂ ಇಲ್ಲ. I am not going to confer with them.

ಅದು ಏನೇ ಇರಲಿ. ನಾನು ನಿಮಗೆ ಏನು ಹೇಳುತ್ತೇನೆಂದರೆ, You have lost the confidence of the people of this State and also of this House. The reason is

ಅಧಿಕಾರಿಗಳು ಕಾಯ್ದುಕೊಂಡಿದ್ದಾರೆ. ಯಾವ ಮಂತ್ರಿಗಳ ಪೋರ್ಟ್ ಫೋಲಿಯೋ ಬದಲಾವಣೆಯಾಗುತ್ತದೋ, ಯಾವಾಗ ಇವರು ಹೋಗುತ್ತಾರೋ, ಅವರು ಹೋದ ತಕ್ಷಣ ನಾನು ಈ ಫೈಲ್ ಮಾಡುವುದಿಲ್ಲ ಎಂದು ಹೇಳಿ ಕಳೆದ ಎರಡು ಮೂರು ತಿಂಗಳುಗಳಿಂದ ಸರ್ಕಾರದ ಕೆಲಸ ಸ್ಥಗಿತವಾಗಿದೆ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. This has gone upto the level of Tahsildards, B.D.Os., and police levels. ಅವರು ಕಾಯುತ್ತಿದ್ದಾರೆ. ನಮ್ಮ ಕಾಲದಲ್ಲೂ ಕಾದಿದ್ದರು. ನಿಮ್ಮ ಕಾಲದಲ್ಲೂ ಕಾದಿದ್ದಾರೆ. ಎಂ.ಎಸ್. ರಾಮಯ್ಯನವರು ನಮ್ಮಲ್ಲೂ ಅಧಿಕಾರದಲ್ಲಿದ್ದಂತವರಿಗೆ ಬಹಳ ಬೇಕಾದವರಾಗಿದ್ದರು. ನಿಮಗೂ ಸಹ ಬಹಳ ಬೇಕಾದವರಾಗಿದ್ದಾರೆ. ಇಂತಹವರು ಬಹಳಷ್ಟು ಜನರು ರಾಜ್ಯದಲ್ಲಿದ್ದಾರೆ. ಮಣಿಪಾಲ್‌ನವರು ಇದ್ದಾರೆ, ಅವರದ್ದೂ ಇದೇ ಕಸಬು. ಇದು ಯಾರಿಗೂ ಗೊತ್ತಿಲ್ಲದೇ ಇರುವ ವಿಚಾರವೇ. ಅವರು ನಮ್ಮ ಕಾಲದಲ್ಲೂ ಇದ್ದರು. ನಿಮ್ಮ ಕಾಲದಲ್ಲೂ ಇದ್ದಾರೆ. ಇವತ್ತು ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ. ನಾವೇನು ಮೂರ್ಖರಲ್ಲ, ನಾವು ಇವತ್ತು ವೋಟಿಂಗ್ ಕೇಳಿದ ತಕ್ಷಣ ನಿಮ್ಮ ಸರ್ಕಾರ ಹೊರಟು ಹೋಗಿ, ನಾಳೆ ಮತ್ತೊಬ್ಬ ಮುಖ್ಯಮಂತ್ರಿಗಳಾಗುತ್ತಾರೆಂದು ನಾವೇನೂ ತಿಳಿದುಕೊಂಡಿಲ್ಲ. What I am trying to make out here is that this has affected the Bureaucracy.

ಇವತ್ತು ಏನೂ ಕೆಲಸ ಆಗುತ್ತಿಲ್ಲ, ನಾವು ಎಂ.ಎಲ್.ಎ.ಗಳಾಗಿ ಇದನ್ನು ಅನುಭವಿಸುತ್ತಿದ್ದೇವೆ. ಯಾರೂ ಅಧಿಕಾರಿಗಳು ನಮ್ಮ ಮಾತು ಕೇಳುವುದಕ್ಕೆ ತಯಾರು ಇಲ್ಲ, ನೋಡೋಣ ಸಾರ್, ಅವರು ಹಾಗೆ ಹೇಳಿದ್ದಾರೆ, ಬದಲಾವಣೆ ಬದಲಾವಣೆಯಾಗುವ ಹಾಗೆ ಕಾಣುತ್ತಿದೆ ಅದಾದ ಮೇಲೆ ನಾವು ಯಾವುದನ್ನೂ ಎಫೆಕ್ಟಿಗೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದಕ್ಕೆ ತಾವು ಏನು

ಉತ್ತರ ಕೋಡುತ್ತೀರಿ ದಯಮಾಡಿ ಹೇಳಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಹೊಸದಾಗಿ ಉತ್ತರ ಕೊಡತಕ್ಕಂಥ ಅವಶ್ಯಕತೆ ಇಲ್ಲ. ನನಗೆ ಬಹಳ ಸಂತೋಷ. ಅವರು ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ವಿಶ್ಲೇಶಣೆ ಮಾಡಿದ್ದಾರೆ, ಅರ್ಥ ಮಾಡಿಕೊಂಡಿದ್ದಾರೆ. ಈ ಪರಿಸ್ಥಿತಿ ಡೆಮಾಕ್ರಸಿಯಲ್ಲಿ ಹೇಗೆ ಬರುತ್ತದೆ ಎನ್ನುವುದಕ್ಕೆ ನಾನು ಪೂರ್ವಪೀಠಿಕೆಯಾಗಿ ಹೇಳಿದ್ದೇನೆ. ಆದರೂ ವಿರೋಧಪಕ್ಷದ ನಾಯಕರು ಭಾಷಣ ಮಾಡಿದ್ದಾರೆ. ಅದಕ್ಕೆ ನಾನು ಉತ್ತರ ಕೊಡಬೇಕು. Otherwise , that matter will remain unanswered. ಆ ದೃಷ್ಟಿಯಿಂದ ನಾನು ಉತ್ತರ ಕೊಟ್ಟೆ ವಿನಹಃ ಬೇರೇನು ಅಲ್ಲ. ಏಕೆಂದರೆ, ನನಗನ್ನಿಸುತ್ತದೆ, ಯಾವ ಪರಿಸ್ಥಿತಿ ಇದೆ ಎಂದರೆ, ನೀವು ಅವಿಶ್ವಾಸ ನಿರ್ಣಯ ತರಲು ಪ್ರಯತ್ನ ಪಟ್ಟಿದ್ದೀರಿ ಅಂದರೆ, ಕಬ್ಬಿಣದ ಅಂಗಡಿಗೆ ಹೋಗಿ ಕಡಲೆ ಹುಡುಕಿದಂತೆ ಆಗಿದೆ. ಕಬ್ಬಿಣದ ಅಂಗಡಿಗೆ ಹೋಗಿ ಕಡಲೆ ಹುಡುಕಿದರೆ ಕಡಲೆ ಎಲ್ಲಿ ಸಿಗುತ್ತದೆ ಕಬ್ಬಿಣದ ಅಂಗಡಿಯಲ್ಲಿ ಕಬ್ಬಿಣದ ತುಂಡು ಸಿಗುತ್ತದೆ. ಇವತ್ತು ನಮ್ಮ ಕಾಲದಲ್ಲಾದರೆ ಒಂದು ರೀತಿ, ನಿಮ್ಮ ಕಾಲದಲ್ಲಿ ಆದರೆ ಒಂದು ರೀತಿಯೇ? ಅದೇ ಅತ್ತೆ ಏನಾದರೂ ಹೊಡೆದರೆ ಹಳೆ ಮಡಿಕೆ ಆಗುತ್ತದೆ. ಸೊಸೆ ಹೊಡೆದರೆ ಹಸಿ ಮಡಿಕೆ ಆಗುತ್ತದೆಯೇ? ಇದು ಎಲ್ಲಾದರೂ ಸಾಧ್ಯವಾಗುತ್ತದೆಯೇ?

ಶ್ರೀ ಬಿ. ಎಸ್ ಯಡಿಯೂರಪ್ಪ : ಅಂದರೆ ಅರ್ಥ ಏನಾಗುತ್ತದೆ ಎಂದರೆ, ನೀವಿಬ್ಬರೂ ಒಂದೇ ಮಾಡಿಕೊಂಡು, ಈ ರಾಜ್ಯದ ಜನರನ್ನು ತಬ್ಬಲಿಗಳನ್ನಾಗಿ ಮಾಡಿ ಸರ್ಕಾರರನ್ನು ಲೂಟಿ ಮಾಡಿ ಜನ ಕಣ್ಣೀರಿನಲ್ಲಿ ಕೈ ತೊಳೆಯುವಂತೆ ಮಾಡಿ ಏನು ಸ್ವಾಮಿ, ನಿಮ್ಮ ಬಗ್ಗೆ ನನಗೆ ಗೌರವ ಇದೆ. ಆದರೆ ಈ ಉತ್ತರ ನಿಮ್ಮಿಂದ ನಾನು ನಿರೀಕ್ಷಿಸಿರಲಿಲ್ಲ. ಖಂಡಿತವಾಗಿ ನಾನು ತಮ್ಮಿಂದ ಈ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಯಾರೇ ಇರಬಹುದು, ಇವತ್ತು ನಮ್ಮ ಸರ್ಕಾರದಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ, ನೀತಿ ಇಟ್ಟುಕೊಂಡಿದ್ದೇವೆ, ನಿಜ. ನಮ್ಮ ಕಾಲದಲ್ಲಿ ಲಂಚಗುಳಿತನ ಇಲ್ಲವೆನ್ನುವ ಮಾತನ್ನು ನಾನು ಎಂದೂ ಆಡಿಲ್ಲ, ಇದು ಇವತ್ತಿನದು ಅಲ್ಲ, ಮೊದಲಿನಿಂದಲೂ ಇದ್ದದ್ದೆ ಎನ್ನುವ ಮಾತನ್ನು ನಾನು ಆಡಿದ್ದೇನೆ. ಆದರೆ ಇವತ್ತು ತಾವು ಹೇಳುವುದನ್ನು ನೋಡಿದರೆ ನಿಮ್ಮ ಕಾಲದಲ್ಲಿ ಇರಲಿಲ್ಲವೆಂದೂ, ಈಗ ಹುಟ್ಟಿ ಬಂದಿದೆ ಎನ್ನುವ ರೀತಿಯಲ್ಲಿ ಮಾತನಾಡತಕ್ಕಂಥಾದ್ದು ಬೇಡ. This has acquired a national dimension. ತಮಗೆ ಗೊತ್ತಿದೆ. ಇದನ್ನು ನಿಲ್ಲಿಸಲು ನ್ಯಾಷನಲ್ ಲೆವಲ್‌ನಲ್ಲಿ ಒಂದೆಡೆ ಸೇರಿ ತೀರ್ಮಾನ ಮಾಡಿ ಹೊಸ ಕಾನೂನನ್ನು ತಂದು, ಆ ಮಟ್ಟ ಈ ಮಟ್ಟ ತಂದರೆ ಮಾತ್ರ ಸಾಧ್ಯವಿದೆಯೇ ವಿನಹಃ ಇಲ್ಲದಿದ್ದರೆ ಯಾರೂ ಕೂಡ ಇದನ್ನು ಸರಿಮಾಡುವುದಕ್ಕಾಗುವುದಿಲ್ಲ. ಹಾಗಾದರೆ ನಾವು ಕೈ ಕಟ್ಟಿ ಕುಳಿತುಕೊಲ್ಲಬೇಕೆಂದು ಅಲ್ಲ. ಅದನ್ನು ನಾನು ಒಪ್ಪುವುದಿಲ್ಲ. ಅದಕ್ಕೆ ಯಾವ ಕಾರ್ಯಕ್ರಮ ಹಾಕಬೇಕೋ ಆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನತಕ್ಕಂಥ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ.

ಆದ್ದರಿಂದ ಆಡಳಿತವನ್ನು ಚುರುಕುಗೊಳಿಸತಕ್ಕಂಥ ವಿಚಾರದಲ್ಲಿ ಆಡಳಿತಕ್ಕೆ ಹೊಸ ಆಯಾಮ ತರಬೇಕು ಎನ್ನುವ ವಿಚಾರದಲ್ಲಿ ನಾವು ಪಂಚಸೂತ್ರಕ್ಕೆ ಬಿಲ್ ರೆಡಿ ಮಾಡುತ್ತಿದ್ದೇವೆ. ಅದನ್ನು ಶಾಸನ ಸಭೆಯ ಮುಂದೆ ತಂದು ಇದೇ ಅಧಿವೇಶನದಲ್ಲಿ ಅದನ್ನು ಮಂಜೂರು ಮಾಡಿಸಿಕೊಂಡು, to fix up the responsibility on each of the officers including the lower level ಈಗ ಏನು ಆಗಿದೆಯೆಂದರೆ, ಬರೀ

ಸರ್ಕ್ಯುಲರ್ ಮತ್ತೊಂದರಿಂದ ಕಂಟ್ರೋಲಿಗೆ ಬರುತ್ತಿಲ್ಲ. ಅದನ್ನು ನೋಡಿ ನಾವು ಇದನ್ನು ಪ್ರಾರಂಭ ಮಾಡಬೇಕೆಂದು ಇದ್ದೇವೆ. ತಮಗೆ ಗೊತ್ತಾಗುತ್ತದೆ. ಇನ್ನು ಕೆಲವು ತಿಂಗಳಲ್ಲಿ ಹೊಸ ವಿಚಾರವನ್ನು ಇಟ್ಟು ಹೋಗಬೇಕು, ಹೊಸ ಮುಖ ಕೊಡಬೇಕೆಂಬ ಚಿಂತನೆ ಇಟ್ಟುಕೊಂಡು ಮುಂದೆ ಹೋಗುತ್ತೇವೆ. ಮತ್ತೆ ನಾವು ಬಜೆಟ್‌ನಲ್ಲಿ ಗೌರ್ನರ್ ಸ್ಪೀಚ್‌ನಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ, ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಕೆಲವಕ್ಕೆ ಕಾನೂನು ಬದಲಾವಣೆಯಾಗತಕ್ಕಂಥ ಅವಶ್ಯಕತೆ ಇದೆ. ಅವುಗಳನ್ನೆಲ್ಲ ಮಾಡಿದ ಮೇಲೆ ಕಾನೂನನ್ನು ಜಾರಿಗೆ ಕೊಡುತ್ತೇವೆ. ಕರ್ನಾಟಕ ರಾಜ್ಯದಲ್ಲಿ ದೀನರು, ದಲಿತರು, ಹರಿಜನ ಗಿರಿಜನರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಮತ್ತು ಮುಂದುವರಿದ ಕೋಮು, ಕಡು ಬಡವರು, ರೈತ ವರ್ಗ, ಯಾರೇ ಇರಬಹುದು, ಆ ವರ್ಗಗಳಿಗೆ ಸಂಬಂಧಪಟ್ಟಿರತಕ್ಕಂಥ ಸಮಸ್ಯೆಗಳಿಗೆ ಜವಾಬ್ದಾರಿ ಇರತಕ್ಕಂಥ ಕಾರ್ಯಕ್ರಮವನ್ನು ಹಾಕಿ ನಾವು ಮುಂದಕ್ಕೆ ಹೋಗುತ್ತೇವೆ. ಅಲ್ಲಿ ಆಡಳಿತ ಕ್ಷೇತ್ರದಲ್ಲಿ ಕೆಲವೊಮ್ಮೆ ಅಲ್ಪ ಸ್ವಲ್ಪ ವ್ಯತ್ಯಾಸ ಬರಬಹುದು. ಹಾಗೆ ವ್ಯತ್ಯಾಸ ಬಂದಾಗ ನಾವು ಸರಿಪಡಿಸಿಕೊಂಡು ಹೋಗುತ್ತೇವೆ. ಅಲ್ಲಿ ಗೊತ್ತಿದ್ದೂ ತಪ್ಪಾಗಿಬಿಟ್ಟರೆ ಅದು ತಪ್ಪಾಗುತ್ತದೆ. ಗೊತ್ತಿಲ್ಲದೆ ತಪ್ಪಾದರೆ ನಾವು ಕರ್ನಾಟಕ ರಾಜ್ಯದ ಜನತೆಯ ಕ್ಷಮೆಯನ್ನು ಕೇಳುತ್ತೇವೆ. ಅದರ ಬಗ್ಗೆ ನಿಮಗೆ ಅನುಮಾನ ಬೇಕಾಗಿಲ್ಲ. ಈ ಒಂದು ದೃಷ್ಟಿಯಿಂದ ನಾವು ಆಡಳಿತ ನಡೆಸಿಕೊಂಡು ಹೋಗುತ್ತೇವೆ. ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಆರ್ಥಿಕಾಭಿವೃದ್ಧಿ ಬಗ್ಗೆ ನೀರಾವರಿ ಬಹುದು, ವಿದ್ಯುಚ್ಛಕ್ತಿ ಉತ್ಪಾದನೆ ಇರಬಹುದು, ಅದು ಪ್ಲಾನ್ ಮತ್ತು ನಾನ್ ಪ್ಲಾನ್ ಯಾವುದೇ ಇರಬಹುದು, ಇದರ ಬಗ್ಗೆ ನಾವು ಗಮನವನ್ನು ಹೆಚ್ಚಾಗಿ ಹರಿಸಿದ್ದೇವೆ. plan size for 1991-92ರಲ್ಲಿ ಸುಮಾರಾಗಿ ನಾವು 25-27 ಪರ್ ಸೆಂಟ್ ಜಾಸ್ತಿ ಮಾಡಿಕೊಂಡಿದ್ದೇವೆ. It is a rare increase. ತಮ್ಮ ಗಮನಕ್ಕೆ ತರುವ ಹಾಕಿದ್ದರೆ, ಹಿಂದೆಯೂ ಕೂಡ ನಾನು ಶಾಸನಸಭೆಯಲ್ಲಿ ಹೇಳಿದ್ದೇನೆ. ಆದ್ದರಿಂದ ಮೊನ್ನೆ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ನಡೆದಾಗ ಸಧ್ಯ ಎಲ್ಲಿ ಮತ್ತೆ ಕಡಿಮೆ ಮಾಡುತ್ತಾರೋ ಎಂದು ನನಗೆ ಹೆದರಿಕೆಯಾಗಿತ್ತು.

This is fixed at Rs.1,510 crores for 91-92.

ಮೊನ್ನೆ ಪ್ಲಾನಿಂಗ್ ಕಮೀಷನ್ನಿನ ಉಪಾಧ್ಯಕ್ಷರು ಬಂದಾಗ ಅವರ ಜೊತೆ ನಾವು ಚರ್ಚೆ ಮಾಡಿದ್ದೇವೆ. ಇದು ಏನು ತೋರಿಸುತ್ತದೆಂದರೆ, ಕಾಂಗ್ರೆಸ್ ಗೌರ್ನ್‌ಮೆಂಟ್, ನಮ್ಮ ಸರ್ಕಾರ ಏನಿದೆ, ನಾವು ನಮ್ಮ ಮಂತ್ರಿಮಂಡಲದ ಮುಖಾಂತರ ಸರ್ಕಾರದ ಮುಖಾಂತರ, ಕೆಲಸ ಕಾರ್ಯಗಳನ್ನು ಸ್ಪಷ್ಟವಾಗಿ ಹೃದಯವಿಟ್ಟು ಎಲ್ಲಾ ಸಮಸ್ಯೆಗಳಿಗೂ ಉತ್ತರವನ್ನು ಹುಡುಕತಕ್ಕಂಥ ವಿಚಾರದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಇಷ್ಟು ವಿಚಾರಗಳನ್ನು ನಾನು ಹೇಳಿದ ಮೇಲೆ ನನಗನ್ನಿಸುತ್ತದೆ, ಈ ಅವಿಶ್ವಾಸ ನಿರ್ಣಯ ಏನಿದೆ,

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ವಿಧಾನಸಭೆ ವಿಸರ್ಜನೆ ಮಾಡುವುದಿಲ್ಲವೆ?

ಶ್ರೀ ಎಸ್. ಬಂಗಾರಪ್ಪ : ಬರುತ್ತೇನೆ, ಸ್ವಲ್ಪ ತಾಳಿ. Financial position ಮತ್ತೊಂದು ಬರುತ್ತದೆ. ಬಂದಾಗ ಅದರ ಬಗ್ಗೆ ನಾವು ಮಾತನಾಡೋಣ ಬೇಡ ಎಂದು ಹೇಳುವುದಿಲ್ಲ. ಅದು ಸಪರೇಟ್ ಸಬ್ಜೆಕ್ಟ್ ಆಗುತ್ತದೆ. ತುಂಬಾ ಕಾಲ ಬೇಕಾಗುತ್ತದೆ. Hope , Hon.leader of the opposition agree with this proposal . He has tried to know something about financial position of the state. I am not coming in his way. The point is question of time. This is number one.

Another point is that it takes a lot of time. After all this is a budget session, You are entitled to know and we are bound to give. We will give all those details.

ನಮಗೆ ಇದರ ಬಗ್ಗೆ ಮುಚ್ಚುಮರೆ ಬೇಕಾಗಿಲ್ಲ. ಈಗ ನಾವು ಕಮರ್ಷಿಯಲ್ ಟ್ಯಾಕ್ಸಸ್ ತೆಗೆದುಕೊಂಡು ಹೋಗಿ 1800 ಕೋಟಿ ರೂಪಾಯಿಗಳಿಗೆ ಫಿಕ್ಸ್ ಮಾಡಿದ್ದೇವೆ. ಇದನ್ನು 2000 ಕ್ರೋರ್ಸ್‌ಗೆ ಒಯ್ಯಬೇಕೆನ್ನತಕ್ಕಂಥ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ವಿವರಗಳಿಗೆ ಹೋಗುವುದಿಲ್ಲ. ನಾನು ಆಮೇಲೆ ರೆವಿನ್ಯೂ ಕಲೆಕ್ಷನ್ ವಿಚಾರಕ್ಕೂ ಬರುತ್ತೇನೆ. ಅದು ಸೇಲ್ಸ್ ಟ್ಯಾಕ್ಸ್ ಇರಬಹುದು, ಕಮರ್ಷಿಯಲ್ ಟ್ಯಾಕ್ಸ್ ವ್ಯಾಪ್ತಿಯಲ್ಲಿ ಮತ್ತೊಂದು ಇರಬಹುದು, ಮೋಟಾರ್ ವೆಹಿಕಲ್ ಟ್ಯಾಕ್ಸ್‌ಗೆ ಬರಬಹುದು, ಅದು ಬೇರೆ ಕ್ಷೇತ್ರ. ಅವನ್ನೆಲ್ಲಾ ನಾನು ಸದನದ ಮುಂದೆ ಇಡುತ್ತೇನೆ. ಇಷ್ಟು ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಾ ಇನ್ನು ಕೊನೆಯ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಇಲ್ಲಿ ಏನಾಗಿದೆ ಎಂದರೆ, ಇವತ್ತು ಈ ಒಂದು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ ಸದನದ ಒಪ್ಪಿಗೆಯನ್ನು ಪಡೆಯತಕ್ಕಂಥ ಪ್ರಯತ್ನದಲ್ಲಿ ನಾನು ಅದಕ್ಕೆ ಮೂಲತಃ ಪೀಠಿಕೆಯಲ್ಲಿ ಒಂದು ಮಾತನ್ನು ಆಡಿದೆ. ಪಕ್ಷಾತೀತವಾಗಿ ಜನ ಮನವನ್ನು ಗೆಲ್ಲತಕ್ಕಂಥ ಒಂದು ವಿಚಾರಧಾರೆ ಇಟ್ಟು ಸಕಾರಣವನ್ನಿಟ್ಟು ನೀವು ನಿಮ್ಮ ವಾದವನ್ನು ಮಂಡನೆ ಮಾಡಿ ವಿಷಯದಿಂದ ಪ್ರತಿಪಾದನೆಯನ್ನು ಮಾಡುತ್ತಾ ಹೋಗಿದ್ದರೆ, ನನಗನ್ನಿಸುತ್ತದೆ ಪಕ್ಷದ ದೃಷ್ಟಿಯಿಂದ ನಮ್ಮವರು ಮತಕೊಡುವುದಕ್ಕೆ ಇರಬಹುದು. ಆದರೆ ಒಳಗೊಳಗೆ ನಿಜವಾಗಲೂ ಬಹಳ ಒಳ್ಳೆಯ ವಿಚಾರವನ್ನು ಎತ್ತಿದ್ದಾರೆ. ಬಹಳ ಮೆಚ್ಚತಕ್ಕಂಥ ವಿಚಾರ, ಹೊಸ ಹೊಸ ವಿಚಾರವೆಂದು ನಾವು ಅಭಿಪ್ರಾಯ ಪಡಬಹುದಾಗಿತ್ತು. ಆದರೆ, ಬಾವಿ ಆಳ ಇರುವುದು ಹತ್ತು ಮಾರು, ನಿಮ್ಮ ಹತ್ತಿರ ಹಗ್ಗ ಇರುವುದು ಒಂದು ಗೇಣು. ಆ ಒಂದು ಗೇಣು ಹಗ್ಗದಿಂದ ಬಾವಿ ಒಳಗಿನಿಂದ ನೀರು ಸೇದತಕ್ಕಂಥ ಕೆಲಸ ಮಾಡತಕ್ಕಂಥಾದ್ದು ಏನು ತೋರಿಸುತ್ತದೆ ಎಂದರೆ ನಿಮ್ಮ ಹತ್ತಿರ ವಿಷಯದ ಬಂಡವಾಳ ಇಲ್ಲ, ಹಳೆಯ ವಿಚಾರಕ್ಕಿಂತ ಬೇರೆ ಸಿಕ್ಕಿಲ್ಲ, ಇದು ಬಿಟ್ಟರೆ ನಿಮ್ಮ ಹತ್ತಿರ ಏನೂ ಉಳಿದಿಲ್ಲ ಎನ್ನತಕ್ಕಂಥಾದ್ದು ಸ್ಪಷ್ಟವಾಗಿ ಇದರಿಂದ ಎತ್ತಿ ತೋರಿಸುತ್ತದೆ. ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಏನಾದರೂ ವಿಚಾರ ಹೇಳುವ ಹಾಗಿದ್ದರೆ, ಗೇಣು ಉದ್ದದ ಹಗ್ಗ ಬಿಡಿ. ಉದ್ದದ ಹಗ್ಗ ಹಿಡಿಯಿರಿ. 10 ಮಾರಿನ ಬಾವಿ ಆಳತೆ ನೋಡಿ ನೀವು ಕೈ ಹಾಕಿ ಹಗ್ಗ ಹಿಡಿದು ಎಳೆಯಿರಿ. ಆ ಶಕ್ತಿ ನಿಮಗೆ ಏನಾದರೂ ಇದ್ದರೆ ನೀವು ದಯವಿಟ್ಟು ಅದನ್ನು ಮಾಡಿ, ಅದನ್ನು ಬಿಟ್ಟು ಸಾಂದರ್ಭಿಕವಾಗಿ ಚರ್ಚೆ ಮಾಡಿ ಇರತಕ್ಕಂಥ ಈ ಅಸ್ತ್ರ the rare opportunity, you have lost it. Opposition parties have lost it.

2.15 ಪಿ.ಎಂ.

ಆ ಶಕ್ತಿಯನ್ನು, ಆ ಅಸ್ತ್ರವನ್ನು ಸಂಪೂರ್ಣವಾಗಿ ನೀವೇ ಧ್ವಂಸ ಮಾಡಿಕೊಂಡಿದ್ದೀರಿ ಎಂದು ಪ್ರತಿ ಪಾದನೆ ಮಾಡಿ, ವಿಚಾರವನ್ನು ಇಟ್ಟು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ಯಾರು ಈ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದಾರೆ ಅವರಿಗೆ ನಾನು ಕಿವಿ ಮಾತು ಹೇಳುವುದು ಇಷ್ಟೇ. ತಾವು ಅಂಕಿ ಅಂಶಗಳ ಸಮೇತ ಇಷ್ಟೆಲ್ಲಾ ವಿಚಾರಗಳನ್ನು ಕೇಳಿದ್ದೀರಿ, ನನ್ನ ಹತ್ತಿರ ಇನ್ನೂ ಬೇಕಾದಷ್ಟು ಹೇಳುವುದು ಇದೆ, ಬೇಡ ಎಂದಲ್ಲ ಇದನ್ನೆಲ್ಲಾ ಕೇಳಿದ ಮೇಲೆ ಈಗಲೂ ಕೂಡ ಅವಿಶ್ವಾಸ ನಿರ್ಣಯ ಮಂಡನೆ ಮಾಡಿ ಒತ್ತಾಯ ಮಾಡಬೇಕು ಎನ್ನುವ ಆಸೆ ನಿಮಗೆ ಬರುತ್ತದೆಯೇ? ಅದಕ್ಕಾಗಿ ನಾನು ಕೇಳುತ್ತಿದ್ದೇನೆ. ದಯವಿಟ್ಟು

ಈ ಬಗ್ಗೆ ವಿಚಾರ ಮಾಡಿ. ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ತಾವು ಟೈಮ್ ತೆಗೆದುಕೊಳ್ಳಬಹುದು. ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಬೇಕೇ ಅಥವಾ ಹಿಂದಕ್ಕೆ ತೆಗೆದುಕೊಳ್ಳಬೇಕೇ ಎಂಬ ಬಗ್ಗೆ ವಿಚಾರ ಮಾಡಿ. ಆದ್ದರಿಂದ ದಯವಿಟ್ಟು ಅದನ್ನು ಹಿಂದಕ್ಕೆ ತೆಗೆದುಕೊಂಡರೆ ಅದು ನಿಮಗೆ ಬಹಳ ಒಳ್ಳೆಯದು ಎನ್ನತಕ್ಕ ಸಲಹೆಯನ್ನು ಕೊಡುತ್ತಿದ್ದೇನೆ. ಆ ವಿಚಾರ ನಿಮಗೆ ಬಿಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ನಾನು ಬಹಳ ಕಾಲವನ್ನು ತೆಗೆದುಕೊಂಡಿದ್ದೇನೆ. ನಾನು ಅತ್ಯಂತ ಹೆಚ್ಚು ಕಾಲವನ್ನು ತೆಗೆದುಕೊಂಡಿದ್ದಕ್ಕಾಗಿ ಕ್ಷಮಿಸಬೇಕು. ನಾನು ವಿರೋಧ ಪಕ್ಷದ ನಾಯಕರು, ಎಲ್ಲಾ ಪಕ್ಷಗಳ ನಾಯಕರು, ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು, ನನ್ನ ಸಚಿವ ಮಿತ್ರರುಗಳು, ಶಾಸಕ ಮಿತ್ರರುಗಳು ಎಲ್ಲರಿಗೂ ಬಹಳ ವೇಳೆ ತೆಗೆದುಕೊಂಡಿದ್ದಕ್ಕಾಗಿ ಅಧ್ಯಕ್ಷರಿಗೆ ಮತ್ತೊಮ್ಮೆ ಕ್ಷಮೆಯನ್ನು ಕೇಳುತ್ತೇನೆ. ಇಷ್ಟು ಹೊತ್ತಿನವರೆಗೆ ನನ್ನ ಮಾತನ್ನು ತಾವೆಲ್ಲರೂ ಸಾವಧಾನದಿಂದ ಕೇಳಿದ್ದೀರಿ. ಮಧ್ಯೆ ಮಧ್ಯೆ ತಡೆ ಇರುತ್ತದೆ. ಇದು ಬಹಳ ದೊಡ್ಡದಲ್ಲ, ತಾವು ಕೇಳಬೇಕಾಗುತ್ತದೆ, ನಾನು ಹೇಳಬೇಕಾಗುತ್ತದೆ. It is OK ತಾವೆಲ್ಲರೂ ಸಾವಧಾನದಿಂದ ಕೇಳಿದ್ದಕ್ಕಾಗಿ ಈ ಸಂದರ್ಭದಲ್ಲಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಪತ್ರಿಕೆ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ನಾನು ಮೊನ್ನೆ ಪತ್ರಿಕಾ ಧರ್ಮದ ಬಗ್ಗೆ ಮಾತನಾಡಬೇಕಾದರೆ ಹೇಳಿದ್ದೇನೆ. ಆ ಧರ್ಮ, ಈ ಧರ್ಮ ಎಂಬ ಪ್ರಶ್ನೆ ಬರುವುದಿಲ್ಲ. ಧರ್ಮ ಧರ್ಮವೇ. ಆ ದೃಷ್ಟಿಯಿಂದ ನಾನು ಮಾತನಾಡುತ್ತೇನೆ. ಅದರಲ್ಲಿ ಪೀತ ಪತ್ರಿಕೋದ್ಯಮ ಎನ್ನತಕ್ಕ ವಿಚಾರ ನಮ್ಮ ಮಿತ್ರರಿಗೆ ಗೊತ್ತಿದೆ. ಒಳ್ಳೆಯ ಪತ್ರಿಕೋದ್ಯಮ ನಮಗೂ ಗೊತ್ತಿದೆ, ತಮ್ಮೆಲ್ಲರಿಗೂ ಗೊತ್ತಿದೆ. ಪತ್ರಿಕೋದ್ಯಮದ ಬಗ್ಗೆ ತಾವು ಏನು ಆ ವಿಚಾರ ಹೇಳಿದಿರಿ, ಆ ಸಂದರ್ಭ ಬಂದಾಗ ಅದು ವಾಸ್ತವಾಂಶದ ಆಧಾರದ ಮೇಲೆ ಇರಬೇಕಾಗುತ್ತದೆ. ಇಲ್ಲದಿದ್ದರೆ ಕೆಲವರ ಮನಸ್ಸಿಗೆ ನೋವಾಗುತ್ತದೆ. ನೀವೂ ನೋವು ಅನುಭವಿಸಿದ್ದೀರಿ, ನಾವು ನೋವೂ ಅನುಭವಿಸಿದ್ದೇವೆ. ಅಷ್ಟೇ ಅಲ್ಲ, 1983ರ ಆದ ನಂತರ ಅಧಿಕಾರ ಆ ಕಡೆಗೆ ಹೋದಾಗ ಏನು ಬರೆದರು ಎನ್ನುವುದು. ನನಗೆ ಇನ್ನೂ ನೆನಪು ಇದೆ. ಆದ್ದರಿಂದ ಆ ಕಡತವನ್ನು ನಾನು ಬಿಚ್ಚಿ ಕೊಂಡು ಕುಳಿತುಕೊಳ್ಳುವುದಿಲ್ಲ. ಆದರೂ ಕೂಡ ಸಾಂದರ್ಭಿಕವಾಗಿ ಸೂಕ್ಷ್ಮವಾಗಿ ನಾನು ಪ್ರಸ್ತಾಪ ಮಾಡಿದೆ. ಆ ವಿಚಾರವನ್ನು ಅಲ್ಲಿಗೆ ಬಿಡುತ್ತೇನೆ. ಅದರ ಬಗ್ಗೆ ನನಗೆ ಗೌರವ ಇದೆ, ಅದರ ಬಗ್ಗೆ ಪ್ರಶ್ನೆ ಇಲ್ಲ. 20-25 ವರ್ಷಗಳಿಂದ ಪತ್ರಿಕಾ ಕ್ಷೇತ್ರದಲ್ಲಿ ನಾನು ಬಹಳಷ್ಟು ಜನ ಮಿತ್ರರನ್ನು ಪಡೆದಿದ್ದೇನೆ. ನಾನು ಸಂತೋಷ ಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಇಷ್ಟು ಮಾತನ್ನು ಹೇಳಿ, ಇಷ್ಟೊಂದು ಸಾವಧಾನದಿಂದ ಕೇಳಿದ್ದಕ್ಕೆ ತಮಗೆ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸಿ, ತಮ್ಮ ಮುಖಾಂತರ ಇಡೀ ಸದನಕ್ಕೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

(ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮುಖ್ಯಮಂತ್ರಿಗಳ ಭಾಷಣವನ್ನು ಮೇಜು ಕುಟ್ಟಿ ಸ್ವಾಗತಿಸಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಭಾಷಣ ಪ್ರಾರಂಭ ಮಾಡಿದಾಗ ಶಂಕೆ ಆಗಿತ್ತು, ಉತ್ತರ ಕೇಳಿದ ಮೇಲೆ ಒಳ್ಳೆಯ ಕೆಲಸ ಮಾಡಿದೆ ಎಂದು ಅನಿಸುತ್ತದೆ. ಹಿರಿಯ ಸದಸ್ಯರಾದಂತಹ ಮಾನ್ಯ ಕಾಗೋಡು ತಿಮ್ಮಪ್ಪನವರು ಪತ್ರಿಕೆಯ ವಿಚಾರದಲ್ಲಿ ಒಂದು ಮಾತು ಹೇಳಿದರು. ನೀವು ಬರೀ ಪತ್ರಿಕೆಗಳನ್ನು ಆಧರಿಸಿ ಅಪಾದನೆ ಮಾಡಿದ್ದೀರಿ, ಅವು ಬ್ರಹ್ಮ ಲಿಪಿಯಲ್ಲ ವೇದ ವಾಕ್ಯವಲ್ಲ ಎಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ : ಬರೆದಿದ್ದೆಲ್ಲವೂ ಬ್ರಹ್ಮಲಿಪಿ ಎಂದು ನಾನು ಹೇಳಿಲ್ಲ, ಅಂಥವನ್ನು ಬರೆದಿದ್ದು ಮಾತ್ರ ಹೇಳಿದ್ದೇನೆ. ಈಗಲೂ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಅವರ

ಗಮನವನ್ನು ನಾನು ಸೆಳೆಯ ಬಯಸುತ್ತೇನೆ. ಬಹುಶಃ ಬಾಬ್ ವುಡ್ ವರ್ಡ್ ಅಂಡ್ ಕಾಲ್ ಬೆನ್‌ಸನ್‌ಟನ್ ಇಬ್ಬರೂ ನ್ಯೂಯಾರ್ಕ್ ಟೈಮ್ಸ್‌ನಲ್ಲಿ ವಾಟರ್ ಗೇಟ್ ಹಗರಣವನ್ನು ಬರೆಯದೇ ಇದ್ದಿದ್ದರೆ ಅಮೇರಿಕಾದಲ್ಲಿ ನಿಕ್‌ಸನ್ ಸರ್ಕಾರ ಹೋಗುತ್ತಾ ಇರಲಿಲ್ಲ. ಬಹುಶಃ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಟೆಲಿಫೋನ್ ಹಗರಣವನ್ನು ಪ್ರಸಿದ್ಧಿಗೊಳಿಸದೇ ಇದ್ದಿದ್ದರೆ ಹೆಗಡೆಯವರು ಸರ್ಕಾರವೂ ಹೋಗುತ್ತಾ ಇರಲಿಲ್ಲ. ಪತ್ರಿಕೆಗಳನ್ನು ಅರಬ್ಬೀ ಸಮುದ್ರಕ್ಕೆ ಎಸೆಯಿರಿ ಎಂದು ಹೇಳದೇ ಇದ್ದಿದ್ದರೆ ಗುಂಡೂರಾಯರ ಸರ್ಕಾರ ಹೋಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಆಗ ಡಿಐಜಿ ಕಾರ್ತಿಕೇಯನ್ ಅವರು ಇಂಟೆಲಿಜೆನ್ಸ್ ಆಫೀಸರ್ ಆಗಿದ್ದಾಗ ಕಾಂಗ್ರೆಸ್ ಸದಸ್ಯರ ಆಯ್ಕೆ ಬಗ್ಗೆ ಕೆ ಡಾಕ್ಯುಮೆಂಟ್ಸ್ ಕಳಿಸದೇ ಇದ್ದಿದ್ದರೆ ಬಹುಶಃ ಜನತಾ ಸರ್ಕಾರ ಅಧಿಕಾರಕ್ಕೆ ಬರುತ್ತಾ ಇತ್ತೋ ಇಲ್ಲವೋ ಗೊತ್ತಿಲ್ಲ. ಬೋಫರ್ಸ್ ವಿಚಾರವನ್ನು ಪ್ರಸ್ತಾಪ ಮಾಡದೇ ಇದ್ದಿದ್ದರೆ ರಾಜೀವ್ ಗಾಂಧಿಯವರ ಸರ್ಕಾರ ಹೋಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಇರು ನಮ್ಮ ಮುಂದೆ ಇರತಕ್ಕ ನಿದರ್ಶನಗಳು. Newspapers are most important source of information. To what extent we can depend is different thing.

Just to enlighten myself and my friends I am quoting Page 961 of 'Parliament and the Press' by Kaul & Shakdher.

"The press is the standard vehicle for dissemination of public opinion. It is again the press, which as a popular media, conveys to the people, the substance of the parliamentary legislation and discussion. The press keeps the people informed of what is happening in the parliament. It is through the press that parliament enjoys so much publicity and it is to the Press that Parliament gathers information which helps it to keep surveillance and ensure the responsibility of the executive to it effectively. The press is often called the extension of parliament. It is the press which struggles hard to unearth administrative lapses, scandals and short comings, gives expression to public grievances and hard ships and reports on how policies are being carried out by the administration is affecting the people. It is generally the press that provides the background needed to bring the work of Parliament in time with the demands of time."

So, I have done the samething. I have not gone beyond that. This is the essence of democracy. I would like to do that , ನಾನು ಈ ಚರ್ಚೆಯಾದ ಮೇಲೆ ಬಹುಶಃ ಪತ್ರಿಕೆಗಳವರಿಂದಲೂ ನಮ್ಮ ಈ ಚರ್ಚೆಯ ಬಗ್ಗೆ ಅವರು ಏನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತಾರೆ ಎಂಬುದನ್ನು ನಿರೀಕ್ಷಿಸಿದ್ದೆ. ಆದರೆ ದುರ್ದೈವವೋ, ಸುದೈವವೋ ಅವರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಲಿಲ್ಲ. ಅವರು ಮುಂದೆ ಮಾಡಿಯಾರು ಎಂದು ನಾನು ಆಲೋಚನೆ ಮಾಡುತ್ತೇನೆ. ಅಮೇರಿಕಾ ದೇಶದ ಹಾಗೆ we do not have the theory of separation of powers. ಶಾಸಕಾಂಗ ಬೇರೆ, ನ್ಯಾಯಾಂಗ ಬೇರೆ, ಕಾರ್ಯಾಂಗ ಬೇರೆ ಎಂದು ನಮ್ಮಲ್ಲಿ ಇಲ್ಲ.

In our constitution, there is nothing like separation of powers. But I feel Legislature is the supreme body. parliament is supreme in this country. therefor, the administration is accountable to this House.

ನಾನು ಈ ಟ್ರಾನ್ಸ್‌ಫರ್‌ಗಳ ವಿಚಾರದಲ್ಲಿ 20 ಸಾವಿರ ಆಗಿದೆಯೇ 30 ಸಾವಿರ

ಆಗಿದೆಯೇ, 40 ಸಾವಿರ ಆಗಿದೆಯೇ ಎಂದು ಕೇಳಲಿಲ್ಲ. I raissed the issue of accountability of the administration to this House. That was my basic principle. Unfortunately, the Leader of the House did not reply to that. I did not raise the issue of Alexandar. I did not raise the issue of Shanakaranarayanan Neither they are my favourites nor they are my enemies. I questioned only this. I do admit that no officer, no administrator whatever be the height of the office he occupies, he should not question the authority of the Chief Minister. I am not that small man, not to identify that ಆತನ ಸಸ್ಪೆನ್‌ಷನ್ ಬಂದ ಕೂಡಲೇ ಶಂಟ್ ಔಟ್ ಮಾಡುತ್ತೀರಿ. ಆದರೆ ಇವರ ಶಂಟ್ ಔಟಿಗೆ ಸ್ಟೇ ಕೊಟ್ಟರೂ ಪ್ರಮೋಟ್ ಮಾಡುತ್ತೀರಿ ಮತ್ತು ಅವರಿಗೆ ರಾಜ್ಯದ ಅತ್ಯಂತ ದೊಡ್ಡ ಜವಾಬ್ದಾರಿಯನ್ನು ಕೊಡುತ್ತೀರಿ. ಹೀಗೆ ಮಾಡಿದರೆ ಜನರ ದೃಷ್ಟಿಯಲ್ಲಿ ಸರಕಾರದ ಮೇಲೆ ಎಷ್ಟು ನಂಬಿಕೆ ಬರಬೇಕೋ, ಎಷ್ಟು ವಿಶ್ವಾಸವು ಬರಬೇಕೋ ಅಷ್ಟು ಉಳಿಯುವುದಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಎನ್‌ಜಿಎಫ್ ಬಗ್ಗೆ ಮಾನ್ಯ ಬೈರೇಗೌಡರು ಮಾತನಾಡಿದರು. ಎನ್‌ಜಿಎಫ್‌ಗೆ ಬರತಕ್ಕಂತ, ರಾಜ್ಯ ಸರ್ಕಾರಕ್ಕೆ ಬರತಕ್ಕಂಥ 2.47 ಕೋಟಿ ರೂಪಾಯಿಗಳಷ್ಟು ಕಮಿಶನ್ ಹಣ ಬರಲಿಲ್ಲ. ಹಿಂದಿನ ಮಂತ್ರಿಗಳು ಹೇಳಿದ್ದಾರೆ ಎಂದರೆ ಹಾಗಾದರೆ ಅವರು ಹೇಳಿದ್ದೇ ವೇದವಾಕ್ಯವೆ? ಮಾನ್ಯ ಮೊಯಿಲಿಯವರು ಹೇಳಿದ್ದು ವೇದವಾಕ್ಯವಾಗುವುದಿಲ್ಲವೆ? As a Minister please let us be true to our conscience. Trying to defend is one thing.

ನಾನು ನನ್ನ ಆತ್ಮತೃಪ್ತಿಯಿಂದ ಕೆಲಸ ಮಾಡಿದ್ದೇನೆ. ಯಾರನ್ನೋ ವಿರೋಧ ಮಾಡುವುದಕ್ಕೋಸ್ಕರವಾಗಿ ಅಥವಾ ಯಾರನ್ನೋ ಸಮಾದಾನ ಮಾಡುವುದಕ್ಕೋಸ್ಕರವಾಗಿ ನಾನು ಈ ಕೆಲಸವನ್ನು ಮಾಡಿಲ್ಲ.

ನನ್ನ ಕರ್ತವ್ಯ ನನ್ನ ಜವಾಬ್ದಾರಿಯನ್ನು ಮಾಡಿದ್ದೇನೆ. ಅವರೂ ಕೂಡ ಅದನ್ನು ಹೇಳಬೇಕು. ಈಗ ಏನು ನಡೆದಿದೆ ಎಂದರೆ, ಡೌಟ್‌ಫುಲ್ ಕ್ಲೈಮ್ಸ್ ಎಂದು ಹೇಳಿ 2.47 ಕೋಟಿ ರೂಪಾಯಿಗಳು ಎನ್ ಜಿಎಫ್ ನಿಂದ ಹೊರಕ್ಕೆ ಹೋಗಿದೆಯಂತೆ. ತಾವೂ ಇಂಡಸ್ಟ್ರೀಸ್ ಮಿನಿಸ್ಟರಾಗಿ ಕೆಲಸ ಮಾಡಿದೀರಿ. ಇಂತಹ ವಿಚಾರಗಳಲ್ಲಿ ಸರ್ಕಾರದಿಂದ ಈ ಉತ್ತರ ನಿರೀಕ್ಷೆ ಮಾಡುತ್ತೀರಾ? ಅವರು ಅರಮನೆ ಪ್ರಕರಣ ಹೇಳಿದರು, ಮಾನ್ಯ ರಾಮಕೃಷ್ಣ ಹೆಗಡೆಯವರು ಅದಕ್ಕೆ ಬೇಕಾದ ಉತ್ತರ ಕೊಟ್ಟರು. ನಾನು ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷೆ ಮಾಡಿದ್ದು ಏನು? ಇಂತಹ ಅಪರೂಪವಾದ ಅಸ್ತ್ರವನ್ನು ನೀವು ಸರಿಯಾಗಿ ಬಳಕೆ ಮಾಡಲಿಲ್ಲ, ಕನಿಷ್ಟ ಅವಧಿಯನ್ನಾದರೂ ಕೊಡಬೇಕಾಗಿತ್ತು ಎಂದು ಹೇಳಿದರು.

My no confidence motion was placed on scandals-scandals of excise, scandals of granite or even scandals of housing etc.ಇದು ಒಂದಕ್ಕೂ ಉತ್ತರ ಇಲ್ಲ. ಇವುಗಳ ಬಗ್ಗೆ ಚರ್ಚೆಯಾಗಿದೆ. ಉತ್ತರ ಹೇಳಿದ್ದೀರಿ. ಹಿಂದಿನ ಸರ್ಕಾರ ಹೀಗೆ ಮಾಡಿದೆ ಎಂದು ಹೇಳುವುದು ಉತ್ತರವೇ? ಹಿಂದಿನ ಸರ್ಕಾರದ ಮೇಲೆ ಹೇಳಿ ಈ ಶಾಸನಸಭೆಯಲ್ಲಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು ಉತ್ತರವಾಗುತ್ತದೆಂದು ಆದರೆ ಈ ಶಾಸನಸಭೆಯಲ್ಲಿ ಅದೂ ಒಂದು ಕನ್‌ವೆನ್‌ಶನ್ ಆಗಲಿ. ಮುಂದಿನ ಸರ್ಕಾರದವರು ಯಾರೂ ಉತ್ತರ ಹೇಳಬೇಕಾಗಿಲ್ಲ. ಹಿಂದಿನ ಸರ್ಕಾರದ್ದು ಏನಿತ್ತೋ, ಅದನ್ನು ಹೇಳಿಬಿಟ್ಟು ನೀವು ಮಾಡಿದ್ದೀರಿ, ಎಂದರೆ ನಾವು ಅಪರಾಧ ಮಾಡಿದ್ದೇವೆ ಎನ್ನುವ ಕಾರಣಕ್ಕಾಗಿ ನಮಗೆ ಜನ ಶಿಕ್ಷೆ ವಿಧಿಸಿದ್ದಾರೆ, ಇಲ್ಲಿ ನಾವು ಇಲ್ಲಿ ಕುಳಿತಿದ್ದೇವೆ. ನೀವು ಏನು ಸರಿಮಾಡಿದ್ದೀರಿ ಎಂದು ನಾನು ಕೇಳುತ್ತೇನೆ, ನಾವು ಜನ ಕೊಟ್ಟ ಶಿಕ್ಷೆಯನ್ನು ಒಪ್ಪಿಕೊಂಡಿದ್ದೇವೆ. ನೀವು ಸರಿ ಮಾಡುತ್ತೇವೆಂದು ಬೀದಿ

ಬೀದಿಯಲ್ಲಿ ಹೇಳಿದಿರಲ್ಲ, ಏನು ಮಾಡಿದಿರಿ ? This is all I have to say. ಮಾನ್ಯ ಅಧ್ಯಕ್ಷರೇ, ---- ನಾನು ಉದ್ದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಕ್ಸೈಜ್ ಬಗ್ಗೆ ಉತ್ತರ ಹೇಳಿದ್ದಾರೆ. ರಾಜ್ಯದಲ್ಲಿ ಒಟ್ಟು ಶೇಕಡ ಒಂದರಷ್ಟು ಜಾಸ್ತಿಯಾಗಿದೆ, ಆದರೆ ಬೆಂಗಳೂರಿನಲ್ಲಿ ಶೇಕಡ 40 ರಷ್ಟು ಕಡಿಮೆಯಾಗಿದೆ ಎಂದು ಹೇಳಿದರೆ, ಅದಕ್ಕೆ ಉತ್ತರವಿಲ್ಲ. ಮೈಸೂರಿನಲ್ಲಿ ಕಡಿಮೆಯಾದರೆ ಉತ್ತರವಿಲ್ಲ. ಎಲ್ಲಿ ಅನುಕೂಲವೋ ಅಲ್ಲಿ ಜೆ.ಹೆಚ್. ಪಟೇಲರ ಹೇಳಿಕೆ, ಎಲ್ಲಿ ಅನುಕೂಲವೋ ಅಲ್ಲಿ ರಾಮಕೃಷ್ಣ ಹೆಗಡೆಯವರು ಬರೆದಿದ್ದಾರೆ, ಎಲ್ಲಿ ಅನಾನುಕೂಲವೋ, ಅಲ್ಲಿ ನೀವು ತಪ್ಪು ಮಾಡಿದ್ದೀರಿ ಎಂದು ಹೇಳುವುದು. This is not the reply on a serious matter. ಅವರೇ ಹೇಳಿದ ಹಾಗೆ, ಅಪರೂಪದ ಅಸ್ತ್ರ ಇದೆಯಲ್ಲ ಇದಕ್ಕೆ ಮುಖ್ಯಮಂತ್ರಿಗಳ ಉತ್ತರ ನನ್ನ ನಿರೀಕ್ಷೆಯ ಎತ್ತರಕ್ಕೆ ಬರಲಿಲ್ಲ ಎಂದು ನಾನು ತುಂಬ ನೊಂದುಕೊಳ್ಳಬಹುದು ಅಷ್ಟೆ, ಇನ್ನೇನು ಮಾಡುವುದಕ್ಕೆ ಆಗುತ್ತದೆ. ಮಾನ್ಯ ಅಧ್ಯಕ್ಷರೆ, ನಾನು ಲಕ್ಕಕ್ಕೆ ಹೋಗುವುದಿಲ್ಲ. ಆ ಲೆಕ್ಕವನ್ನು ಯಾವಾಗ ಮಾಡಬೇಕೋ ಆಗ ಮಾಡುತ್ತೇನೆ. ಆದರೆ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಅಪರಾಧವಾಗಿದೆಯೆಂದು ಈಗ ಹೇಳುತ್ತಿದ್ದೀರಲ್ಲ, ಆಗ ವಿರೋಧ ಪಕ್ಷದಲ್ಲಿ ಕುಳಿತು ಸಭಾನಾಯಕರು ಎಕ್ಸೈಜ್ ವಿಚಾರದಲ್ಲಿ ಒಂದು ಮಾತೂ ಆಡಲಿಲ್ಲವಲ್ಲ. ಅದನ್ನು ಈಗ ಹೇಳಲೇ? ನಾನು ಹೇಳುವುದು ಬೇಡ. ಏಕೆಂದರೆ ನನ್ನ ನರೀಕ್ಷಯ ಉತ್ತೀ ನನಗೆ ಬರಲಿಲ್ಲ. ಸರ್ಕಾರದ ಬೊಕ್ಕಸಕ್ಕೆ ಬಂದಿರುವ ದುಡ್ಡು ಏನಿದೆ ಅದು ಕಂಟ್ರಾಕ್ಟರ್ ಜೇಬಿನಿಂದ ಬಂದಿಲ್ಲ, ರಾಜ್ಯದ ಜನ ಬೊಕ್ಕಸಕ್ಕೆ ಕೊಟ್ಟಿದ್ದಾರೆ. ಕಂಟ್ರಾಕ್ಟರಿಂದ ಕೊಡಿಸಿದ್ದಾರೆ ಈ ಸರ್ಕಾರಕ್ಕ ದುಡ್ಡು ಬಂದು ಬಿಟ್ಟಿದಯೆಂದರೆ, ಈಗ ಏನಾಗಿದೆಯೆಂದರೆ ಸಾರಾಯಿ ಮಾರಾಟದ ಬೆಲೆ ನಮ್ಮ ಕಾಲದಲ್ಲಿ ಇದ್ದುದಕ್ಕಿಂತ ಈಗ ದುಪ್ಪಟ್ಟಾಗಿದೆ. ವಿಸ್ಕಿ, ಬ್ರಾಂದಿ, ರವರ್ ಜಿನ್‌ಗಳ ಬೆಲೆ ಕ್ವಾಟರ್‌ಗೆ 8 ರೂಪಾಯಿ ಇದ್ದುದು ಈಗ 11 ರೂಪಾಯಿ ಆಗಿದೆ. ಈಗ 22 ರೂಪಾಯಿ ಆಗಿದೆಯೆಂದು ನಮ್ಮ ಸ್ನೇಹಿತರು ಹೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕುಡಿಯುವವರ ಸಂಖ್ಯೆ ಜಾಸ್ತಿಯಾಗಿದೆ. 1989-90ರಲ್ಲಿ ಮತ್ತು 1990-91ರ ಲೆಕ್ಕ ಹೇಳಿದಿರಲ್ಲ ಅದಕ್ಕೇ ನಾನು ಕೇಳಿದೆ, ಬೆಂಗಳೂರು ನಗರ ಒಂದರಲ್ಲಿ ಶೇಕಡ 40ರಷ್ಟು ಉತ್ಪಾದನೆ ಕಡಮೆಯಾಗಿದೆಯಲ್ಲ, ಕೆಲವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಈ ಕೆಲಸ ಮಾಡಿದಿರಾ ಎಂದು ಕೇಳಿದರೆ ಅದಕ್ಕೆ ಉತ್ತರ ಇಲ್ಲ. ಹಿಂದಿನ ಸರ್ಕಾರ ಯಾರ್ಯಾರಿಗೋ ಪರವಾನಗಿಗಳನ್ನು ಕೊಟ್ಟಿದೆ, ಅದಕ್ಕೇ ನಾವು ಕೊಟ್ಟಿದ್ದೇವೆ, ಎಂದು ಹೇಳಿದಿರಿ.

ನಮ್ಮ ಪ್ರಶ್ನೆ ಅದಲ್ಲ, ನೀವು ಕೊಟ್ಟಿದ್ದು ಅಪರಾಧ ಎಂದು ನಾವು ಹೇಳಲಿಲ್ಲ, ಆ ರೀತಿ ಹೇಳಲೇ ಇಲ್ಲ.

SRI AZEEZ SAIT: Misleading–100% misleading.

SRI D.B. CHANDREGOWDA : I am not misleading.

SRI AZEEZ SAIT : Hon'ble Chief Minister had told the reasons...

SRI D.B. CHANDRE GOWDA : I know you more than quarter century..

ಶ್ರೀ ಅಜೀಜ್ ಸೇಠ್ : ಏನೂ ಇಲ್ಲ, ಸುಮ್ಮನೆ ಏತಕ್ಕೆ ಟೈಮ್ ವೇಸ್ಟ್ ಮಾಡುತ್ತೀರಿ? ಊಟಕ್ಕೆ ನೀವು ಹೋಗಬೇಕು, ನಾವೂ ಹೋಗಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮನ್ನು ಊಟಕ್ಕೆ ಅಲ್ಲ, ಯಾರೂ ನಿಲ್ಲಿಸುವುದಕ್ಕೆ ಆಗುವುದಿಲ್ಲ, ಕ್ಯಾಬಿನೆಟ್‌ನಲ್ಲಿ ಮುಖ್ಯಮಂತ್ರಿಗಳೂ ನಿಲ್ಲಿಸುವುದಕ್ಕೆ ಆಗುವುದಿಲ್ಲ. ನಾನು ಕ್ಯಾಬಿನೆಟ್‌ನಲ್ಲಿ ಇದ್ದು ನೋಡಿದ್ದೇನೆ. ಆದ್ದರಿಂದ ನೀವು ಎಕ್ಸ್‌ಪ್‌ಕ್ಷನ್. ಮಾನ್ಯ ಅಧ್ಯಕ್ಷರೆ, ಇಲ್ಲಿ ರಾಮಯ್ಯನವರ ಪ್ರಕರಣ ಬಂದಾಗ ಯಾವಾಗ ಡಿ-ನೋಟೀಫಿಕೇಷನ್ ಆಯಿತು? ಅರ್ಬನ್ ಲ್ಯಾಂಡ್ ಸೀಲಿಂಗ್‌ಗೆ ಯಾವಾಗ ವಿನಾಯಿತಿಯನ್ನು ಕೊಟ್ಟಿದ್ದೀರಿ? ತಮಗೆ ಕೊಡುತ್ತೇನೆಂದು ಹೇಳಿದರು ಅದು ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಮಗೆ ಇಚ್ಛೆ ಬಂದಾಗ ಕೊಡಿ. ಆದರೆ ನೀವು ತಾರೀಖನ್ನು ಕೊಟ್ಟಿರಲ್ಲಾ, ಆ ತಾರೀಖಿನಲ್ಲಿ ಡಿ.ನೋಟಿಫಿಕೇಷನ್ ಆಗಿಲ್ಲ. Let us put the records straight.

ಶ್ರೀ ಎಸ್. ಬಂಗಾರಪ್ಪ : ಲೆಟರ್ ಬರೆದಿದ್ದಾರೆ ಎಂದು ನಾವೇ ಹೇಳಿದ್ದೇವೆ. ಡಿ.ನೋಟಿಫಿಕೇಷನ್ ಡೇಟ್ ಅಲ್ಲ, ಲೆಟರ್ ಬರೆದಿರುವ ಡೇಟ್, ಅದನ್ನು ಕೊಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾವು ಕೇಳಿದ್ದು ಡಿ-ನೋಟಿಫಿಕೇಶನ್ ಆಗಿರುವ ಡೇಟ್, ಅದಕ್ಕೆ ಉತ್ತರ ಬಂದಿಲ್ಲ. ಇನ್ನು ಹೌಸ್ ಬಿಲ್ಡಿಂಗ್ ಸೊಸೈಟಿಗಳು ಎಷ್ಟೋ 1600 ಇದೆ, ಫೈಲ್ ನೋಡುವ ಅವಶ್ಯಕತೆ ಇಲ್ಲ, ಕ್ಯಾಬಿನೆಟ್ ಸಬ್-ಕಮಿಟಿ ನೋಡುತ್ತಿದೆ. ಈ ಉತ್ತರವನ್ನು ಸದನ ಕೇಳುವುದೇ. Can the House wait for the Cabinet sub-Committees Report?

ನಾವು ಯಾವ ಲೆಜಿಸ್ಲೇಚರ್‌ನಲ್ಲಿದ್ದೇವೆ. ಇದನ್ನು ಕೇಳಿದರೆ ಕ್ಯಾಬಿನೆಟ್ ಸಬ್-ಕಮಿಟಿ ಎಂದು ಹೇಳುತ್ತಾರೆ. ಅದನ್ನು ಕೇಳಿದರೆ ಸಬ್‌ಜುಡೀಸ್ ಎಂದು ಹೇಳುತ್ತಾರೆ. Is this the reply expected from Hon'ble Chief Minister of the State?

ಶ್ರೀ ಎಸ್. ಬಂಗಾರಪ್ಪ: ಅದು ಡಿಸಿಷನ್ ಅಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ: ಮಾಡಿ ಸ್ವಾಮಿ.

(ಗೊಂದಲ)

ಶ್ರೀ ಆರ್.ಎನ್. ನಾಯಕ್: ನಿಮ್ಮನ್ನು ಸಮಾಧಾನ ಮಾಡುವುದಕ್ಕೆ ಯಾರಿಗೂ ಕೂಡ ಆಗುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ನಿಮ್ಮ ಹೃದಯವನ್ನು ಸಮಾಧಾನ ಮಾಡಿಕೊಳ್ಳಿ.ನನಗೆ ಮಾಡಬೇಡಿ. ನಿಮ್ಮ ಮನಸ್ಸು ಇದೆಯೆಲ್ಲಾ ಅದಕ್ಕೆ ಸಮಾಧಾನ ಮಾಡಿಕೊಳ್ಳಿ. Mr. Naik, I and you have to answer the people. We are here elected by the people. We have to answer them. Please touch your conscience. I am trying to bring out the point and nothing beyond this. I am terribly pained. We are all representatives of the people.

(ಗೊಂದಲ)

ಶ್ರೀ ಆರ್.ಎನ್. ನಾಯಕ್: ಸುಮ್ಮನೆ ಏತಕ್ಕೆ ಪ್ರಯತ್ನ ಮಾಡುತ್ತೀರಿ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ ; ಮತ್ತೆ ಅದಕ್ಕೆ ನಿಮ್ಮ ರಿಪ್ಲೈ ಯಾವ ನಿಯಮದ

ಪ್ರಕಾರವೋ ನನಗೆ ಗೊತ್ತಿಲ್ಲ, Suspension, of course, is no bar for promotion. ಎಂದು ಹೇಳಿದ್ದಾರೆ. ಅದು ನನಗೂ ಗೊತ್ತಿದೆ. ಆದರೆ, ನಿಮ್ಮದೇ ಸರ್ಕಾರ, ಕಾಂಗ್ರೆಸ್ ಸರ್ಕಾರ ಸಸ್ಪೆಂಡ್ ಮಾಡುತ್ತದೆ. ಆಗ ಸಸ್ಪೆಂಡ್ ಮಾಡಿ ಹೋಗಿದ್ದ ಸರ್ಕಾರ. ಮಾನ್ಯ ಮುಖ್ಯ ಮಂತ್ರಿಗಳು ಬದಲಾವಣೆ ಆದ ಕೂಡಲೇ ಇದು ಬದಲಾವಣೆಯಾಗತ್ತದೆಯೇ? ಹೀಗೆ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಅಧಿಕಾರಿಗಳಿಗೆ ಸರ್ಟಿಫಿಕೇಟ್ ಕೊಡುವುದನ್ನು ದಯವಿಟ್ಟು ನಿಲ್ಲಿಸುವುದು ಒಳ್ಳೆಯದು. ಕೆಲವರಿಗೆ ಸರ್ಟಿಫಿಕೇಟನ್ನು ಕೊಡುವುದು, ಕೆಲವು ಅಧಿಕಾರಿಗಳಿಗೆ ನಮ್ಮದೇ ಆದ ರೀತಿಯಲ್ಲಿ ಅಂದರೆ ಇಲ್ಲಿ ಕೆಲಸ ಮಾಡತಕ್ಕಂಥ ನೌಕರರನ್ನು ನಾವು ಆಳತಕ್ಕಂಥ ಜನ ಡಿವೈಡ್ ಮಾಡಿದರೆ, ಶಾಸನಸಭೆ ಅದನ್ನು ಡಿವೈಡ್ ಮಾಡಿದರೆ ಆಡಳಿತದಲ್ಲಿ ಎಲ್ಲಿ ದಕ್ಷತೆ ಉಳಿಯುತ್ತದೆ? ಎಲ್ಲಿ ಪ್ರಾಮಾಣಿಕತೆ ಉಳಿಯುತ್ತದೆ? ಮಾನ್ಯ ಅಧ್ಯಕ್ಷರೇ, ಅತ್ತೆ ಹೊಡೆದಳೋ, ಸೊಸೆ ಹೊಡೆದಳೋ ನನಗೆ ಗೊತ್ತಿಲ್ಲ. ನಾನು ಅತ್ತೆಯೂ ಅಲ್ಲ, ಸೊಸೆಯೂ ಅಲ್ಲ. ನಾನು ನನ್ನ ಕರ್ತವ್ಯವನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೇನೆ. ನಾನು ಕಬ್ಬಿಣದ ಅಂಗಡಿಯಲ್ಲಿ ಕಡಲೆಯನ್ನು ಹುಡುಕುವುದಕ್ಕೆ ಹೋಗಲಿಲ್ಲ. ಚಿನ್ನದ ಅಂಗಡಿಯಲ್ಲಿ ಬೆಳ್ಳಿಯನ್ನು ಹುಡುವುದಕ್ಕೆ ಹೋಗಲಿಲ್ಲ. ನಾನ ಹುಡುಕ್ಕಿದ್ದು ಬಂಗಾರ. ಆದರೆ ದುರ್ದೈವ, ನನಗೆ ಸಿಕ್ಕಿದ್ದು ಕಬ್ಬಿಣ. ಇದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಲಾರೆ, ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನೀವು ಎಂ.ಎಸ್.ರಾಮಯ್ಯನವರಿಗೆ ಸಂಬಂಧಪಟ್ಟಂತೆ ಡಿ-ನೋಟೀಫಿಕೇಷನ್ ಡೇಟ್ ಕೇಳಿದರಲ್ಲಾ ನಾನು ಲೆಟರ್ ಬರೆದ ಡೇಟ್ ಕೊಟ್ಟದ್ದು. Government informed the BDA on 16.6.86 and in the meanwhile the High Court has also quashed the entire Land Acquisition Proceedings of BDA in respect of these Lands. ಡಿ ನೋಟೀಫಿಕೇಷನ್ ಮಾಡತಕ್ಕಂಥ ಡೇಟ್ ಬಂದಿಲ್ಲ. ಇದರಲ್ಲಿ ತಮ್ಮ ಸರ್ಕಾರದ ವಿಚಾರಧಾರೆ ಏನಿತ್ತು ಎಂಬುದನ್ನು ಹೇಳಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ನಾನು ಈ ಪ್ರಶ್ನೆ ಬಂದಾಗ ಆಗಲೇ ಹೇಳಿದೆ, ಡೀನೋಟಿಫಿಕೇಶನ್ ಆಗಿಲ್ಲ ಎಂಬ ಮಾತನ್ನು ಹೇಳಿದ್ದಾರೆಂದು.

ಶ್ರೀ ಎಸ್. ಬಂಗಾರಪ್ಪ : ಡೀನೋಟಿಫಿಕೇಶನ್ ಆಗುವುದಕ್ಕೆ ನೀವೆಲ್ಲಾ ಬರೆದುಬರೆದು ಕಳುಹಿಸಿದ್ದೀರಿ. ನಾನು ವಿವರಗಳನ್ನು ತರಿಸಿದ್ದೇನೆ. ನಿಮ್ಮ ಇನ್‌ಟೆನ್‌ಷನ್ ಏನೂ ಎಂದು ಸ್ಪಷ್ಟವಾಗಿ ಗೊತ್ತಾಗಿದೆಯೆಲ್ಲ. ಅದು ಒಂದನೆಯದು. ಇನ್ನೊಂದು ವಿಚಾರ, ತಾವು ಅಧಿಕಾರಿಗಳನ್ನು ಹೊಗಳಬೇಡಿ ಎಂದು ಹೇಳಿದ್ದೀರಿ, ನಾನು ಹೊಗಳಬೇಕು ಎಂದು ಅಲ್ಲ, ಅಧಿಕಾರಿಗಳ ಕಾಲದಲ್ಲಿ ಏನು ನಡೆಯಿತು ಎಂಬ ಮಾತನ್ನು ಹೇಳಿದ್ದೇನೆ. ಅದೇ ರೀತಿಯಾಗಿ ತಾವು ತಿಳಿದುಕೊಳ್ಳಬೇಕಾಗುತ್ತದೆ. ಅನ್ಯಾಯವಾಗಿ ಅಧಿಕಾರಿಗಳನ್ನು ತೆಗಳುವುದನ್ನು ತಾವು ಬಿಟ್ಟರೆ ಬಹಳ ಒಳ್ಳೆಯದು. ಇದು ನನ್ನ ಸೂಚನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಅಧಿಕಾರಿಗಳನ್ನು ತೆಗಳುವುದಕ್ಕೆ ಹೋಗಿಲ್ಲ.

ಶ್ರೀ ಎಸ್.ಬಂಗಾರಪ್ಪ : ಅಪ್ಪಿತಪ್ಪಿ ನಡೆದಿದೆ.

SRI D.B. CHANDRE GOWDA : I am serious about what I have said. An officer who is questionable is posted in a responsible post..

ಶ್ರೀ ಎಸ್. ಬಂಗಾರಪ್ಪ : ಇನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಕಾವೇರಿ ವಿಚಾರದಲ್ಲಿ ಸರ್ಕಾರದವರು ಒಳ್ಳೆಯ ಕಾರ್ಯಕ್ರಮವನ್ನು ಹಾಕಿದ್ದಾರೆಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದಿಸುತ್ತೇನೆ. ನನ್ನ ಒಬ್ಬನ ಪರವಾಗಿಲ್ಲ ಅಲ್ಲ, ಎಲ್ಲ ರಾಜಕೀಯ ಪಕ್ಷಗಳ ಪರವಾಗಿ ಮತ್ತು ಎಲ್ಲರ ಪರವಾಗಿ

ಅಭಿನಂದಿಸುತ್ತೇನೆ. ಏಕೆಂದರೆ ನಾವು ಕಾವೇರಿ ವಿಚಾರದಲ್ಲಿ ತೀರ್ಮಾನ ಮಾಡಿರತಕ್ಕದ್ದು ಸರ್ಕಾರದ ವಿಚಾರಧಾರೆಯನ್ನು ಅನುಸರಿಸಿ ಎಲ್ಲ ಪಕ್ಷದವರು ಕೂಡ ಮಾಡಿದ್ದರಿಂದ ಅವರ ಹೊಗಳಿಕೆ ನನ್ನ ಒಬ್ಬನಿಗೆ ಅಲ್ಲ, ಇದು ಚಂದ್ರೇಗೌಡರಿಗೂ, ಯಡಿಯೂರಪ್ಪನವರಿಗೂ ಬೈರೇಗೌಡರಿಗೂ, ವಾಟಾಳ್‌ರವರಿಗೂ, ಕಮರುಲ್ ಇಸ್ಲಾಂರವರಿಗೂ ಮತ್ತು ಉಳಿದಿರತಕ್ಕಂಥದ ಎಲ್ಲಾ ಮಿತ್ರರುಗಳಿಗೂ ಸಂದಾಯವಾಗುತ್ತದೆ. ನನಗೆ ಅದನ್ನು ನೆನಪು ಮಾಡಿಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ.

ಅಧ್ಯಕ್ಷರು: ಈಗ ಅವಿಶ್ವಾಸ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುವುದು. ಈ ಸದನವು ಶ್ರೀ ಎಸ್. ಬಂಗಾರಪ್ಪನವರ ನೇತೃತ್ವದ..

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಅರಣ್ಯ ಇಲಾಖೆಯ ಲೂಟಿಯನ್ನು ತಪ್ಪಿಸಬೇಕು.

ಅಧ್ಯಕ್ಷರು: ಯಡಿಯೂರಪ್ಪನವರೇ, ಇದೇನು ಪ್ರಶ್ನೋತ್ತರ ಸಮಯವೇ ನೀವು ಕೇಳಿದ್ದಕ್ಕೆಲ್ಲ ಉತ್ತರ ಕೊಡುವುದಕ್ಕೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎಂ.ಪಿ.ಎಂ ಲೂಟಿಯಾಗುತ್ತದೆ ಎಂದು ಹೇಳಿದ್ದಾರೆ. ಡೀನೋಟಿಫೈ ಅದಂತಹ ಜಮೀನು ಸುಮಾರು 63 ಎಕರೆಯ ಬಗ್ಗೆ ಅವರು ಪ್ರಸ್ತಾಪ ಮಾಡಲಿಲ್ಲ.

ಅಧ್ಯಕ್ಷರು: ಅವರು ಪ್ರಸ್ತಾಪ ಮಾಡುವುದು ಅನಾವಶ್ಯಕ ಎನ್ನತಕ್ಕ ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮನ್ನು ವಿನಂತಿ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಇದು ಸಾಮಾನ್ಯ ಚರ್ಚೆಯಲ್ಲ, ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಮಾಡಿದಂತಹ ಎಲ್ಲಾ ಆರೋಪಗಳಿಗೆ ಸತ್ಯಕ್ಕೆ ದೂರವಾದ ಉತ್ತರ ಕೊಟ್ಟಿದ್ದಾರೆ. ಗೋರ್ಕಲ್ಲ ಮೇಲೆ ಮಳೆ ಬಂದ ಹಾಗೆ ಆಗಿದೆ.

(ಗೊಂದಲ)

ಅಧ್ಯಕ್ಷರು: ಶ್ರೀಮತಿ ಮೋಟಮ್ಮನವರು ಬಸವಣ್ಣನವರ ವಚನವನ್ನು ಕಳುಹಿಸಿಕೊಟ್ಟಿದ್ದಾರೆ. "ಇತರರ ಅಳಿಯಬೇಡ, ತನ್ನ ಬಣ್ಣಿಸಬೇಡ, ಇದೇ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ. ಇದಾಗಬೇಕು ಅಷ್ಟೆ ಹಸಿವಾಗಿತ್ತಿದೆ. ಮೋಟಮ್ಮ ಅವಿಶ್ವಾಸ ನಿರ್ಣಯದ ಚರ್ಚೆಯ ಸಮಯದಲ್ಲಿ ಕ್ಲಾರಿಫಿಕೇಶನ್‌ಗೆ ಅವಕಾಶವಿಲ್ಲ. ಡಿಮ್ಯಾಂಡ್ ಮೇಲೆ ಚರ್ಚೆಯಾಗುವಾಗ ನಿಮಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶವಿದೆ. You have said it. The only role that the Speaker can play now is to put the motion to the vote of the House.

ಪ್ರಸ್ತಾಪ ಏನೆಂದರೆ, ಈ ಸದನವು ಶ್ರೀ ಎಸ್.ಬಂಗಾರಪ್ಪ (ಮುಖ್ಯ ಮಂತ್ರಿ) ರವರ ನೇತೃತ್ವದ ಮಂತ್ರಿಮಂಡಲದಲ್ಲಿ ಅವಿಶ್ವಾಸವನ್ನು ಸೂಚಿಸುತ್ತೇದೆ ಎನ್ನುವ ಪ್ರಸ್ತಾವ ಸಭೆಯ ಮುಂದಿದೆ"

(ಗೊಂದಲ)

(ಪ್ರಸ್ತಾಪ ತಿರಸ್ಕೃತವಾಯಿತು)